ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಮೇ 26 ಸೋಮವಾರ 2025

ಸಂಪುಟ: 46 | ಸಂಚಿಕೆ: 40 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಕೊಡಗಿನಲ್ಲಿ ರಣ ಮಳೆಗೆ ಜನತೆ ತತ್ತರ

● ತ್ರಿವೇಣಿ ಸಂಗಮ ಜಲಾವೃತ ● ನೆಲಕ್ಕುರುಳಿದ ವಿದ್ಯುತ್‌ಕಂಬ, ಮರ; ಹಲವು ಮನೆಗಳಿಗೆ ಹಾನಿ ● ಜಿಲ್ಲೆಯಾದ್ಯಂತ ರೆಡ್ ಅಲರ್ಟ್

ಮಡಿಕೇರಿ, ಮೇ 25(ಪಿಎಸ್)– ಕೊಡಗು ಜಿಲ್ಲೆಯಾದ್ಯಂತ ಎಡೆಬಿಡದೆ ಮಳೆಯಾಗುತ್ತಿದ್ದು, ಗ್ರಾಮೀಣ ಭಾಗದ ಜನಜೀವನ ಅಸ್ತವ್ಯಸ್ತಗೊಂಡಿದೆ. 500ಕ್ಕೂ ಅಧಿಕ ವಿದ್ಯುತ್ ಕಂಬಗಳು ನೆಲಕ್ಕುರುಳಿವೆ. ಮರಗಳು ಬಿದ್ದ ಪರಿಣಾಮ ಹಲವು ಮನೆಗಳು ಹಾನಿಗೀಡಾಗಿವೆ.

ಜಿಲ್ಲೆಯಲ್ಲಿ ಗಂಟೆ ಗಂಟೆಗೂ ಗಾಳಿ ಮಳೆಯ ಆರ್ಭಟ ಜೋರಾಗುತ್ತಿದ್ದು, ತಲಕಾವೇರಿ, ಭಾಗಮಂಡಲ ಭಾಗದಲ್ಲಿ ನಿರಂತರ ಮಳೆಯಾಗುತ್ತಿದೆ. ತ್ರಿವೇಣಿ ಸಂಗಮ ಜಲಾವೃತ್ತವಾಗಿದ್ದು, ನಾಪೋಕ್ಲು ಮತ್ತು ಮಡಿಕೇರಿ



ಜಲಾವೃತಗೊಂಡಿರುವ ತ್ರಿವೇಣಿ ಸಂಗಮ.

ಕೊಡಗು ಜಿಲ್ಲಾದ್ಯಂತ ಶಾಲಾ–ಕಾಲೇಜಿಗೆ 2 ದಿನ ರಜೆ

ರಸ್ತೆಯಲ್ಲಿ ವಾಹನಗಳ ಸಂಚಾರಕ್ಕೆ ಅಡಚಣೆ ಉಂಟಾಗಿದೆ. ಪಿಂಡ ಪ್ರದಾನ ಮೊದಲಾದ ಪೂಜಾ ವಿಧಿ–ವಿಧಾನಗಳಿಗೂ ಅಡ್ಡಿಯಾಗಿದೆ.

ಮಡಿಕೇರಿ ಮತ್ತು ವಿರಾಜಪೇಟೆ ತಾಲೂಕಿನಲ್ಲಿ ಗಾಳಿ ಸಹಿತ ವ್ಯಾಪಕ ಮಳೆಯಾಗುತ್ತಿದ್ದು, ಹತ್ತಾರು ಮರಗಳು ಹಾಗೂ ನೂರಾರು ■6ನೇ ಪುಟಕ್ಕೆ

ವರುಣಾರ್ಭಟ; ಶಿರಾಡಿಘಾಟ್ ರಸ್ತೆಯಲ್ಲಿ ಭೂಕುಸಿತ



ಹಾಸನ, ಮೇ 25– ಹಾಸನ ಜಿಲ್ಲೆಯ ಮಲೆನಾಡು ಭಾಗದಲ್ಲಿ ಮಳೆಯ ಅಬ್ಬರ ಜೋರಾಗಿದ್ದು, ಶಿರಾಡಿಘಾಟ್ ರಸ್ತೆಯಲ್ಲಿ ಭೂಕುಸಿತ ಉಂಟಾಗಿದೆ.

ಸಕಲೇಶಪುರ ತಾಲೂಕಿನ ದೋಣಿಗಾಲ್ ಬಳಿ ಈ ಘಟನೆ ನಡೆದಿದೆ. ಚತುಷ್ಪಥ ರಸ್ತೆ ನಿರ್ಮಾಣಕ್ಕಾಗಿ ರಸ್ತೆಯ ಎರಡು ಬದಿಗಳಲ್ಲಿ ಕೆಲಸಗಾರರು 90 ಡಿಗ್ರಿ ಮಾದರಿಯಲ್ಲಿ ನೂರು ಅಡಿಗಳಷ್ಟು ಬಗೆದಿದ್ದಾರೆ. ಸಕಲೇಶಪುರ ಭಾಗದಲ್ಲಿ ಕಳೆದ ಎರಡು ದಿನಗಳಿಂದ ಎಡೆಬಿಡದೆ ಮಳೆ ಸುರಿಯುತ್ತಿದೆ. ■6ನೇ ಪುಟಕ್ಕೆ

ಸಾವಿರ ದಿನಗಳಲ್ಲಿ ರಾಜ್ಯದ ಎಲ್ಲಾ ಮನೆಗೂ ಪೈಪ್ ನೀರು

ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ

ಬೆಂಗಳೂರು, ಮೇ 25– ಮುಂದಿನ ಸಾವಿರ ದಿನಗಳಲ್ಲಿ ಕರ್ನಾಟಕದ ಪ್ರತಿ ಮನೆಗೆ ಪೈಪ್ ನೀರು ಒದಗಿಸುವುದು, ಕರ್ನಾಟಕವನ್ನು ದಕ್ಷಿಣ ಏಷ್ಯಾದ ವಿದ್ಯುತ್ ವಾಹನ ರಾಜಧಾನಿಯಾಗಿ ಸ್ಥಾಪಿಸುವುದು ಮತ್ತು ಮಹಿಳೆಯರ ಸಂಪೂರ್ಣ ಡಿಜಿಟಲ್ ಮತ್ತು ಆರ್ಥಿಕ ಸೇರ್ಪಡೆಯನ್ನು ಸಾಧಿಸುವುದು ಉದ್ದೇಶವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ.

ದೆಹಲಿಯಲ್ಲಿ ನೀತಿ ಆಯೋಗ ಆಯೋಜಿಸಿದ್ದ ಇಂಡಿಯಾ @2047 ಕಾರ್ಯಕ್ರಮದಲ್ಲಿ ತಮ್ಮ ಭಾಷಣದ ಪ್ರತಿಯನ್ನು ಹಂಚಿಕೊಂಡ ಪ್ರಧಾನ ಮಂತ್ರಿಗಳು, ಕರ್ನಾಟಕದ 1,000 ದಿನಗಳ ಮಾರ್ಗಸೂಚಿಯನ್ನು ಎತ್ತಿ ತೋರಿಸಿದರು. ರಾಷ್ಟ್ರ ನಿರ್ಮಾಣದಲ್ಲಿ ಕರ್ನಾಟಕದ ಪಾತ್ರದ ಕುರಿತು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು. ಮುಖ್ಯಮಂತ್ರಿಗಳು ದೆಹಲಿಯಲ್ಲಿ ನೀತಿ ಆಯೋಗದ ಸಭೆಯಲ್ಲಿ ಭಾಗವಹಿಸಲಿಲ್ಲ.

ಈ ಕುರಿತು ಹೇಳಿಕೆ ನೀಡಿರುವ ಮುಖ್ಯಮಂತ್ರಿಗಳು, ರಾಜ್ಯವು ಪ್ರತಿ ಜಿಲ್ಲೆಯನ್ನು ಕೌಶಲ್ಯ ಕೇಂದ್ರವಾಗಿ ಪರಿವರ್ತಿಸುವುದು, ಸಾವಯವ ಕೃಷಿಯಡಿಯಲ್ಲಿರುವ ಪ್ರದೇಶವನ್ನು ದ್ವಿಗುಣಗೊಳಿಸುವುದು ಮತ್ತು ಕರ್ನಾಟಕವನ್ನು ಭಾರತದ ಅತ್ಯಂತ ಪರಿಣಾಮಕಾರಿ ಸೇವಾ ವಿತರಣಾ ರಾಜ್ಯವನ್ನಾಗಿ ಮಾಡುವುದು ಮತ್ತು ಸಾಮಾಜಿಕ ಸಮಾನತೆಗಾಗಿ ಸಕಾರಾತ್ಮಕ ತಾರತಮ್ಯವನ್ನು ಮುನ್ನಡೆಸುವುದು, ಪ್ರತಿಯೊಬ್ಬರ ಧ್ವನಿ ಮತ್ತು ಗುರುತನ್ನು ಖಚಿತಪಡಿಸಿಕೊಳ್ಳುವ ಗುರಿಯನ್ನು ಹೊಂದಿದೆ ಎಂದು ಹೇಳಿದರು.



ಕರ್ನಾಟಕದ ಅನುಭವವು ರಾಷ್ಟ್ರೀಯ ಸಹಯೋಗಕ್ಕೆ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತದೆ ಎಂದು ನಾವು ನಂಬುತ್ತೇವೆ, ಅಲ್ಲಿ ನಾವೀನ್ಯತೆ ಸೇರ್ಪಡೆಯನ್ನು ಪೂರೈಸುತ್ತದೆ. ಆಡಳಿತವು ತಳಮಟ್ಟದ ಪರಿವರ್ತನೆಯನ್ನು ಪೂರೈಸುತ್ತದೆ ಎಂದು ಹೇಳಿದರು.

2047ರ ವೇಳೆಗೆ ಅಭಿವೃದ್ಧಿ ಹೊಂದಿದ ಭಾರತವನ್ನು ಕಲ್ಪಿಸಲಾಗುತ್ತಿರುವಾಗ, ಸಂಕೀರ್ಣ ಸವಾಲುಗಳನ್ನು ಒಪ್ಪಿಕೊಳ್ಳುವ ಮೂಲಕ ಪ್ರಾರಂಭಿಸುವುದು ಕಡ್ಡಾಯವಾಗಿದೆ. ಇವು ಸಂಪನ್ಮೂಲ ಅಥವಾ ಸಾಮರ್ಥ್ಯದ ಅಡೆತಡೆಗಳು ಮಾತ್ರವಲ್ಲ, ವಿತರಣೆ, ಸೇರ್ಪಡೆ, ಆಡಳಿತ ಮತ್ತು ಸ್ಥಿತಿಸ್ಥಾಪಕತ್ವದ ಸವಾಲುಗಳಾಗಿವೆ ಎಂದು ಹೇಳಿದರು. ಪ್ರಗತಿಯ ಹೊರತಾಗಿಯೂ, ಪ್ರಾದೇಶಿಕ, ಆರ್ಥಿಕ ಮತ್ತು ಸಾಮಾಜಿಕವಾಗಿ ಹೆಚ್ಚುತ್ತಿರುವ ಅಸಮಾನತೆಗಳು ಲಕ್ಷಾಂತರ ಜನರನ್ನು ಮಿತಿಗೊಳಿಸುತ್ತಲೇ ಇವೆ.

ಪ್ರತಿಯೊಂದು ಸಮುದಾಯ ಮತ್ತು ಪ್ರದೇಶವು ಭಾರತದ ಬೆಳವಣಿಗೆ ಮತ್ತು ಅವಕಾಶದಲ್ಲಿ ಹಂಚಿಕೊಳ್ಳುವ ಸಮಾನ ಅಭಿವೃದ್ಧಿಯನ್ನು ಖಚಿತಪಡಿಸುವುದು ನಿಜವಾದ ಸವಾಲು. ಭಾರತದ ಜನಸಂಖ್ಯಾ ಲಾಭಾಂಶವು ನಮ್ಮ ದೊಡ್ಡ ಆಸ್ತಿಗಳಲ್ಲಿ ಒಂದಾಗಿ ಉಳಿದಿದೆ, ನಿರುದ್ಯೋಗ, ಶಿಕ್ಷಣ ಮತ್ತು ಉದ್ಯೋಗದ ■6ನೇ ಪುಟಕ್ಕೆ

ವಿಧಾನಸೌಧ ಗೈಡೆಡ್ ಟೂರ್‌ಗೆ ಚಾಲನೆ

ಜೂನ್ 1 ರಿಂದ ಸಾರ್ವಜನಿಕರ ವೀಕ್ಷಣೆಗೆ ಲಭ್ಯ

ಬೆಂಗಳೂರು, ಮೇ 25– ರಾಜ್ಯದ ಶಕ್ತಿ ಸೌಧ ವಿಧಾನಸೌಧ ಇನ್ನು ಮುಂದೆ ಸಾರ್ವಜನಿಕರ ವೀಕ್ಷಣೆಗೆ ಮುಕ್ತವಾಗಲಿದೆ. ರಾಜ್ಯದ ಶಕ್ತಿಸೌಧವನ್ನು ದೂರದಿಂದಲೇ ನೋಡಿ ಫೋಟೊ ಕ್ಲಿಕ್ಕಿಸಿ ಸಂತಸ ಪಡುತ್ತಿದ್ದವರಿಗೆ ಈಗ ಹತ್ತಿರದಿಂದಲೇ ನೋಡುವ ಸದಾವಕಾಶ ಸಿಕ್ಕಿದೆ. ಭವ್ಯ ವಿಧಾನಸೌಧ ವೀಕ್ಷಣೆಗೆ ಸರ್ಕಾರದಿಂದ ಪ್ರವಾಸ ಭಾಗ್ಯ ಶುರುವಾಗಿದೆ.

ಬೆಂದಕಾಳೂರಿನ ಹೆಗ್ಗುರುತು, ರಾಜ್ಯದ ಆಡಳಿತ ಶಕ್ತಿಸೌಧ ಅಂತಲೇ ಕರೆಯಿಸಿಕೊಳ್ಳುವ ವಿಧಾನಸೌಧ ಈಗ ಪ್ರವಾಸಿ ತಾಣ. ಇಲ್ಲಿಯವರೆಗೂ ಕೇವಲ ಗೇಟ್ ಹೊರಭಾಗದಿಂದ, ರಸ್ತೆಯಿಂದ ಕಾಣಿಸುತ್ತಿದ್ದ ವಿಧಾನಸೌಧ ಇನ್ನು ಮುಂದೆ ಪ್ರವಾಸಿ ಸ್ಥಳ ಆಗಲಿದೆ. ಗೈಡೆಡ್ ಟೂರ್ ಹೆಸರಲ್ಲಿ ಸಾರ್ವಜನಿಕರ ವೀಕ್ಷಣೆಗೆ ಸರ್ಕಾರ ಅವಕಾಶ ನೀಡಿದೆ. ಇನ್ನು ಮುಂದೆ ಸಾರ್ವಜನಿಕರು ವಿಧಾನಸೌಧದ ಒಳಗೆ ಹೋಗಿ ಭವ್ಯ ಐತಿಹಾಸಿಕ ಕಟ್ಟಡವನ್ನು ಕಣ್ತುಂಬಿಕೊಳ್ಳಬಹುದು.

ವಿಧಾನಸೌಧ ಗೈಡೆಡ್ ಟೂರ್‌ಗೆ ಇಂದು ಚಾಲನೆ ನೀಡಲಾಯಿತು. ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕಾನೂನು ಸಚಿವ ಹೆಚ್.ಕೆ. ಪಾಟೀಲ್, ಸ್ಪೀಕರ್ ಖಾದರ್ ಹಾಗೂ ಸಭಾಪತಿ ಬಸವರಾಜ ಹೊರಟ್ಟಿ ಅವರು ಗೈಡೆಡ್ ಟೂರ್ ಉದ್ಘಾಟಿಸಿದರು. ಜೂ.1 ರಿಂದ ಅಧಿಕೃತವಾಗಿ ವಿಧಾನಸೌಧ ವೀಕ್ಷಣೆಗೆ ಜನರಿಗೆ ಅವಕಾಶ ಸಿಗಲಿದೆ.



ವಿಧಾನಸೌಧ ಗೈಡೆಡ್ ಟೂರ್‌ಗೆ ಕಾನೂನು ಸಚಿವ ಹೆಚ್.ಕೆ. ಪಾಟೀಲ್ ಭಾನುವಾರ ಚಾಲನೆ ನೀಡಿದರು. ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಇನ್ನಿತರರಿದ್ದರು.

ಈ ವೇಳೆ ಮಾತನಾಡಿದ ಕಾನೂನು ಸಚಿವ ಹೆಚ್.ಕೆ ಪಾಟೀಲ್, ವಿಧಾನಸೌಧವು ಇನ್ನು ಮುಂದೆ ಸಾರ್ವಜನಿಕರಿಗೂ ಮುಕ್ತವಾಗಲಿದೆ. ಕಲಾಕೌಶಲ್ಯದ ವಿರಳ ದಾಖಲೆಯಾಗಿ ಇತಿಹಾಸದಲ್ಲಿ ದಾಖಲಾಗಿರುವ ಆಡಳಿತ ಸೌಧವನ್ನು ದೂರದಿಂದಲೇ ನೋಡಿ ಫೋಟೋ ತೆಗೆದು ಸಂತಸ ಪಡುತ್ತಿದ್ದ ಜನರಿಗೆ, ಈಗ ■6ನೇ ಪುಟಕ್ಕೆ

ಅಪರಿಚಿತ ವ್ಯಕ್ತಿಯ ಬರ್ಬರ ಹತ್ಯೆ

ದೇಹವನ್ನು ತುಂಡು ತುಂಡಾಗಿ ಕತ್ತರಿಸಿರುವ ದುಷ್ಕರ್ಮಿಗಳು

ಮೈಸೂರು, ಮೇ 25– ಎಲ್ಲೋ ಕೊಲೆ ಮಾಡಿ ಶವಗಳನ್ನು ಮೈಸೂರು ತಾಲೂಕಿನ ನಾಲೆ, ಕೆರೆ ಹಾಗೂ ನದಿಗಳಲ್ಲಿ ಬಿಸಾಡುವುದು ಸತತವಾಗಿ ನಡೆಯುತ್ತಾ ಬಂದಿದ್ದು, ಇಂದು (ಮೇ 25) ಜಯಪುರ ಪೊಲೀಸ್ ಠಾಣೆ ವ್ಯಾಪ್ತಿಯ ಕೆ. ಹೆಮ್ಮನಹಳ್ಳಿ ಗ್ರಾಮದ ಚಿಕ್ಕೆರೆಯಲ್ಲಿ ವ್ಯಕ್ತಿಯೋರ್ವನ ತಲೆ ಮತ್ತು ಕೆಲ ಅಂಗಾಂಗಗಳು ಪತ್ತೆಯಾಗಿದೆ.

ಈತನನ್ನು ಬೇರೆ ಎಲ್ಲೋ ಬರ್ಬರವಾಗಿ ಕೊಲೆ ಮಾಡಿ, ದೇಹವನ್ನು ತುಂಡು ತುಂಡಾಗಿ ಕತ್ತರಿಸಲಾಗಿದೆ. ಈ ಸ್ಥಳದಲ್ಲಿ ತಲೆ, ಎಡ ಮುಂಗೈ, ಬಲ ತೊಡೆ ಹಾಗೂ ಬಲ ಮುಂಗಾಲು ಮಾತ್ರ ದೊರೆತಿದ್ದು, ಅವುಗಳನ್ನು ಪೊಲೀಸರು ವಶಪಡಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ. ಸುಮಾರು 30 ರಿಂದ 35 ವರ್ಷದ ಅಪರಿಚಿತ ವ್ಯಕ್ತಿಯ ಶವ ಇದಾಗಿದ್ದು, ಆತನ ಪತ್ತೆಗಾಗಿ ಪೊಲೀಸರು ತಲಾಷೆ ನಡೆಸಿದ್ದಾರೆ. ಮೈಸೂರು ■6ನೇ ಪುಟಕ್ಕೆ

18 ಬಿಜೆಪಿ ಶಾಸಕರ ಅಮಾನತು ವಾಪಸ್

ಸ್ಪೀಕರ್ ಯು.ಟಿ.ಖಾದರ್ ನೇತೃತ್ವದ ಸಭೆಯಲ್ಲಿ ಮಹತ್ವದ ನಿರ್ಧಾರ

ಬೆಂಗಳೂರು, ಮೇ 25– ಬಿಜೆಪಿಯ 18 ಶಾಸಕರ ಅಮಾನತು ಆದೇಶವನ್ನು ಹಿಂಪಡೆಯಲಾಗುವುದು ಎಂದು ವಿಧಾನಸಭೆ ಸ್ಪೀಕರ್ ಯು.ಟಿ.ಖಾದರ್ ಭಾನುವಾರ ತಿಳಿಸಿದ್ದಾರೆ.


18 ಬಿಜೆಪಿ ಶಾಸಕರ ಅಮಾನತಿಗೆ ಸಂಬಂಧಿಸಿದಂತೆ ಇಂದು ಸ್ಪೀಕರ್ ಯು.ಟಿ.ಖಾದರ್ ನೇತೃತ್ವದಲ್ಲಿ ನಡೆದ ಸಂಧಾನ ಸಭೆಯಲ್ಲಿ ಈ ಮಹತ್ವದ ನಿರ್ಧಾರ ಕೈಗೊಳ್ಳಲಾಗಿದೆ. ವಿಧಾನಸಭೆಯಲ್ಲಿ ಸ್ಪೀಕರ್ ಕುರ್ಚಿಗೆ ಅಗೌರವ ತೋರಿಸಿದ ಮತ್ತು ಮಸೂದೆಯ ಪ್ರತಿಗಳನ್ನು ಹರಿದು ಅವರ ಮೇಲೆ ಎಸೆದ ಆರೋಪದ ಮೇಲೆ 18 ಬಿಜೆಪಿ ಶಾಸಕರನ್ನು ವಿಧಾನಸಭೆಯಿಂದ ಆರು ತಿಂಗಳ ಕಾಲ ಅಮಾನತುಗೊಳಿಸಲಾಗಿತ್ತು. ■6ನೇ ಪುಟಕ್ಕೆ

ಮೈಸೂರು ಸ್ಯಾಂಡಲ್ ಸೋಪ್‌ಗೆ ತಮನ್ನಾ ನೇಮಕದ ಹಿಂದೆ ಸಚಿವರೊಬ್ಬರ ಕೈವಾಡ

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅನುಮಾನ

▸ ಕನ್ನಡಿಗರ ಸ್ವಾಭಿಮಾನಕ್ಕೆ ಧಕ್ಕೆ ತರಬೇಡಿ ▸ ಕೇಂದ್ರ ಸರ್ಕಾರದ ವಿರುದ್ಧ ಸಿದ್ದರಾಮಯ್ಯ ನಿರಂತರ ಸಂಘರ್ಷ ▸ ರಿಯಲ್ ಎಸ್ಟೇಟ್ ಮಾಫಿಯಾ ಒತ್ತಡಕ್ಕೆ ಮಣಿದು ರಾಮನಗರ ಹೆಸರು ಬದಲಾವಣೆ

ಮೈಸೂರು, ಮೇ25(ಬಿಎಲ್‌ಯು)– ಮೈಸೂರು ಸ್ಯಾಂಡಲ್ ಸೋಪ್‌ಗೆ ರಾಯಭಾರಿಯಾಗಿ ಬಾಲಿವುಡ್ ನಟಿ ತಮನ್ನಾ ಭಾಟಿಯಾ ನೇಮಕ ಮಾಡುವುದರ ಹಿಂದೆ ರಾಜ್ಯ ಸಚಿವರೊಬ್ಬರ ಕೈವಾಡ ಇರಬಹುದು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅನುಮಾನ ವ್ಯಕ್ತಪಡಿಸಿದ್ದಾರೆ.



ವಿಜಯೇಂದ್ರ

ಮೈಸೂರಿನಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಪರಿಣಿತರ ಸಮಿತಿ ತಮನ್ನಾ ಭಾಟಿಯಾ ಅವರನ್ನು ರಾಯಭಾರಿಯಾಗಿ ನೇಮಕ ಮಾಡಿದೆ ಎಂದು ರಾಜ್ಯ ಸರ್ಕಾರ ಸ್ಪಷ್ಟಪಡಿಸಿದೆ. ಆದರೆ ಯಾವ ಪರಿಣಿತರು ತಮನ್ನಾ ಭಾಟಿಯಾರನ್ನು ಶಿಫಾರಸು ಮಾಡಿದ್ದಾರೆಂಬ ವಿಚಾರವನ್ನು ಬಹಿರಂಗಪಡಿಸಲಿ ಎಂದು ಸವಾಲು ಹಾಕಿದರು.

ಮೈಸೂರು ರಾಜಮನೆತನದವರು 1916ರಲ್ಲಿ ಮೈಸೂರು ಸ್ಯಾಂಡಲ್ ಸೋಪ್ ಕಾರ್ಖಾನೆಯನ್ನು ಸ್ಥಾಪನೆ ಮಾಡಿದರು. ಈ ಕಾರ್ಖಾನೆ ಕನ್ನಡಿಗರ ದೂರದೃಷ್ಟಿಯಿಂದ ಸ್ಥಾಪನೆಯಾಗಿದೆ. ಈ ಹಿನ್ನೆಲೆ ಕನ್ನಡಿಗರು ಹಾಗೂ ಕನ್ನಡತನದ ಸ್ವಾಭಿಮಾನಕ್ಕೆ ಧಕ್ಕೆಯಾಗದಂತೆ ನೋಡಿಕೊಳ್ಳಬೇಕು. ಕನ್ನಡಿಗರ ತೆರಿಗೆ ಹಣ ನಷ್ಟವಾಗದಂತೆ ನೋಡಿಕೊಳ್ಳಬೇಕು ಎಂದು ವಿಜಯೇಂದ್ರ ಸಲಹೆ ನೀಡಿದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಿನ್ನೆ ನಡೆದ ನೀತಿ ಆಯೋಗದ ಸಭೆಯಲ್ಲಿ ಸಿದ್ದರಾಮಯ್ಯ ಗೈರು ಹಾಜರಾಗುವ ಮೂಲಕ ರಾಜ್ಯದ ಜನತೆಗೆ ಅಪಮಾನ ಮಾಡಿದ್ದಾರೆ. ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಕೂಡ ಭಾಗವಹಿಸಿದ್ದರು. ಆದರೆ ಸಿದ್ದರಾಮಯ್ಯ ಅವರು ಮಾತ್ರ ಸಭೆಗೆ ಬಹಿಷ್ಕಾರ ಹಾಕಲು ಕಾರಣವೇನು ಎಂದು ತಿಳಿಸಬೇಕು ಎಂದು ಆಗ್ರಹಿಸಿದರು. ಸಿದ್ದರಾಮಯ್ಯ ಅಧಿಕಾರಕ್ಕೆ ಬಂದಾಗಲಿಂದ ■6ನೇ ಪುಟಕ್ಕೆ

ಸೋಪ್‌ಗೆ ಹೀರೋಯಿನ್ ಏಕೆ ಬೇಕು, ಬೇರೆ ಕ್ಷೇತ್ರದ ಸಾಧಕರನ್ನು ನೇಮಕ ಮಾಡಬಹುದಲ್ಲವೆ

ಮೈಸೂರು, ಮೇ25(ಬಿಎಲ್‌ಯು)– ಸೋಪ್ ಎಂದ ಕೂಡಲೇ ಹೀರೋಯಿನ್ ಏಕೆ ಬೇಕು, ಸೋಪ್‌ಗೆ ಲಿಂಗಬೇಧ ಇದೆಯೇ ಎಂದು ಮೈಸೂರು ರಾಜವಂಶಸ್ಥರು ಆದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಪ್ರಶ್ನಿಸಿದ್ದಾರೆ. ಮೈಸೂರಿನಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಸೋಪು ಎಂದ ಕೂಡಲೇ ಹೀರೋಯಿನ್ ಮಾತ್ರ ರಾಯಭಾರಿಯಾಗಿ ಇರಬೇಕೆಂಬ ನಿಯಮವಿಲ್ಲ. ಕ್ರಿಕೆಟ್ ಆಟಗಾರರು, ಒಳ್ಳೆಯ ನಟರು ಕೂಡ ರಾಯಭಾರಿ ಆಗಬಹುದಲ್ಲವೆ ಎಂದು ಪ್ರಶ್ನಿಸಿದ ಯದುವೀರ್ ಅವರು, ಬೇರೆ ಭಾಷೆಯ ನಟಿಯನ್ನು ಮೈಸೂರು ಸ್ಯಾಂಡಲ್ ಸೋಪ್‌ಗೆ ರಾಯಭಾರಿಯಾಗಿ ನೇಮಕ ಮಾಡಿರುವುದು ಕನ್ನಡಿಗರಿಗೆ ಮಾಡಿದ ಅಪಮಾನವಾಗಿದೆ ಎಂದು ಅಭಿಪ್ರಾಯಪಟ್ಟರು. ■6ನೇ ಪುಟಕ್ಕೆ



ಯದುವೀರ್

ಹಾಸನ ಮಿತ್ರ

ಮುಂಗಾರು ಮಳೆ ಅಬ್ಬರ: ಯಗಚಿ ಜಲಾಶಯ ಭರ್ತಿ



ಹಾಸನ, ಮೇ 25–ಜಿಲ್ಲೆಯಲ್ಲಿ ಪೂರ್ವ ಮುಂಗಾರು ಮಳೆ ಅಬ್ಬರ ಜೋರಾಗಿದ್ದು, ಎಲ್ಲೆಡೆ ಮಲೆನಾಡಿನ ವಾತಾವರಣ ಸೃಷ್ಟಿಸಿದೆ. ಅವಧಿಗೂ ಮುನ್ನವೇ ಯಗಚಿ ಜಲಾಶಯ ಭರ್ತಿಯಾಗಿ ಶುಭ ಸೂಚನೆ ನೀಡಿದೆ.

ಹೇಮಾವತಿ ಜಲಾಶಯದ ಒಳಹರಿವಿನ ಪ್ರಮಾಣ ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿದೆ. ಜಿಲ್ಲೆಯಲ್ಲಿ ಸಂಪೂರ್ಣ ಮೋಡ ಕವಿದ ವಾತಾವರಣ ನಡುವೆ ಸುರಿಯುತ್ತಿರುವ ಮಳೆ ಮುಂಗಾರು ಮಳೆಯನ್ನು ನೆನಪಿಸುತ್ತಿದೆ. ಕಳೆದ ಮೂರು ದಿನದಿಂದ ಸುರಿಯುತ್ತಿರುವ ಮಳೆಯಿಂದ ಬೇಲೂರು ತಾಲೂಕಿನ ಚಿಕ್ಕಬ್ಯಾಡಗೆರೆ ಗ್ರಾಮದಲ್ಲಿರುವ ಯಗಚಿ ಜಲಾಶಯ ಭರ್ತಿಯಾಗಿದೆ.

3.60 ಟಿಎಂಸಿ ನೀರು ಸಂಗ್ರಹ ಸಾಮರ್ಥ್ಯ ಹೊಂದಿರುವ ಜಲಾಶಯದಿಂದ ಸದ್ಯ 500 ಕ್ಯುಸೆಕ್ ನೀರನ್ನು 5 ಕ್ರಸ್ಟ್ ಗೇಟ್‌ಗಳ ಮೂಲಕ ಯಗಚಿ ನದಿಗೆ ಹಾಗೂ 70 ಕ್ಯುಸೆಕ್ ನೀರನ್ನು ಎಡದಂಡೆ ನಾಲೆಗೆ ಹರಿಬಿಡಲಾಗುತ್ತಿದೆ. ಜಲಾಶಯದ ಗರಿಷ್ಠ ಮಟ್ಟ 3.162.92 ಅಡಿಗಳಾಗಿದ್ದು, ಹಾಲಿ ನೀರಿನ ಮಟ್ಟ 3.160.10 ಅಡಿಗೆ ಹೆಚ್ಚಳವಾಗಿದೆ. ಜಲಾಶಯಕ್ಕೆ 485 ಕ್ಯುಸೆಕ್ ನೀರು ಹರಿದು ಬರುತ್ತಿದೆ.

ಚಿಕ್ಕಮಗಳೂರು ಹಾಗೂ ಮೂಡಿಗೆರೆ ಭಾಗದಲ್ಲಿ ಮಳೆ ಆರ್ಭಟ ಹೆಚ್ಚಿರುವ ಹಿನ್ನೆಲೆಯಲ್ಲಿ ಜಿಲ್ಲೆಯ ಜೀವನಾಡಿ ಹೇಮಾವತಿ ಜಲಾಶಯಕ್ಕೆ ಒಳಹರಿವಿನ ಪ್ರಮಾಣ ಗಣನೀಯವಾಗಿ ಏರಿಕೆಯಾಗುತ್ತಿದೆ. ಜಿಲ್ಲೆಯಲ್ಲಿ ಮುಂದಿನ ನಾಲ್ಕು ದಿನ ಚದುರಿದಂತೆ ಬಿರುಗಾಳಿ ಜತೆಗೆ ಮಳೆಯಾಗುವ ಸಾಧ್ಯತೆ ಇದೆ ಎಂದು ಭಾರತೀಯ ಹವಮಾನ ಇಲಾಖೆ ಮುನ್ಸೂಚನೆ ನೀಡಿದೆ. ಹಾನುಬಾಳ್ಳು ಭಾಗದಲ್ಲಿ15.2, ಹೆತ್ತೂರು ಭಾಗದಲ್ಲಿ 15 ವಾಡಿಕೆಗಿಂತ ಹೆಚ್ಚು ಮಳೆಯಾಗಿದೆ.


ಹಾಸನ ವಿವಿಯ ಯುವ ರೆಡ್‌ಕ್ರಾಸ್ ಘಟಕದ ವತಿಯಿಂದ ರಕ್ತದಾನ ಶಿಬಿರ



ಹಾಸನ, ಮೇ 25– ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಜಿಲ್ಲಾ ಶಾಖೆ ಹಾಗೂ ಹಾಸನ ವಿಶ್ವವಿದ್ಯಾಲಯದ ಯುವ ರೆಡ್ ಕ್ರಾಸ್ ಘಟಕಗಳ ಆಶ್ರಯದಲ್ಲಿ ಹೇಮಗಂಗೋತ್ರಿ ವಿಶ್ವವಿದ್ಯಾಲಯದಲ್ಲಿ ರಕ್ತದಾನ ಶಿಬಿರ ನಡೆಯಿತು.

ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ವಿಶ್ವವಿದ್ಯಾಲಯದ ಕುಲಸಚಿವ ಬಿ.ಎ. ಜಗದೀಶ, ರೆಡ್ ಕ್ರಾಸ್ ಸಂಸ್ಥೆ ಹಾಸನದಲ್ಲಿ ನಿತ್ಯ ಬಹಳಷ್ಟು ಮಾನವೀಯ ಚಟುವಟಿಕೆಯಲ್ಲಿ ತೊಡಗಿದೆ ಎಂದರು. ಕುಲಪತಿ ಪ್ರೊ.ಟಿ.ಸಿ.ತಾರನಾಥ್ ಅಧ್ಯಕ್ಷತೆ ವಹಿಸಿದ್ದರು. ಅತಿಥಿಗಳಾಗಿ ರೆಡ್‌ಕ್ರಾಸ್ ಸಂಸ್ಥೆಯ ಉಪ ಸಭಾಪತಿ ಡಾ.ವೈ.ಎಸ್.ವೀರಭದ್ರಪ್ಪ, ನಿರ್ದೇಶಕ ಎಸ್.ಎಸ್.ಪಾಷಾ ಮಾತನಾಡಿದರು. ರೆಡ್‌ಕ್ರಾಸ್ ಸಂಸ್ಥೆ ಕಾರ್ಯದರ್ಶಿ ಶಬ್ಬೀರ್ ಅಹ್ಮದ್, ಖಜಾಂಚಿ ಜಯೇಂದ್ರಕುಮಾರ್, ನಿರ್ದೇಶಕರಾದ ಉದಯ್‌ಕುಮಾರ್, ಡಾ.ಕಾವ್ಯಾ, ಭೀಮರಾಜ್ ಹಾಜರಿದ್ದರು. ಯುವ ರೆಡ್‌ಕ್ರಾಸ್ ಸಂಯೋಜಕ ಡಾ.ರವಿಕುಮಾರ ನಿರೂಪಿಸಿದರು. ಹಾಸನ ಜೀವಸಂಜೀವಿನಿ ರಕ್ತನಿಧಿ ಕೇಂದ್ರದ ಮುಖ್ಯಸ್ಥ ಬಿ.ಎಂ.ರವಿಕುಮಾರ್ ರಕ್ತ ಸಂಗ್ರಹಣೆ ಮಾಡಿದರು. 29 ವಿದ್ಯಾರ್ಥಿ, ವಿದ್ಯಾರ್ಥಿನಿಯರು ರಕ್ತದಾನ ಮಾಡಿದರು. ರಕ್ತದಾನಿಗಳಿಗೆ ರೆಡ್‌ಕ್ರಾಸ್ ಸಂಸ್ಥೆ ವತಿಯಿಂದ ರೆಡ್‌ಕ್ರಾಸ್ ಚಿಹ್ನೆ ಗುರುತಿನ 50 ಕೀ ಚೈನ್ ವಿತರಿಸಲಾಯಿತು.

ಹಾಸನದಲ್ಲಿ ಆಲೂಗಡ್ಡೆ ಬಿತ್ತನೆ ಆರಂಭ



ಹಾಸನ, ಮೇ 25–ಆಲೂಗಡ್ಡೆ ಬಿತ್ತನೆ ಶುರುವಾಗಿದ್ದು, ಎಪಿಎಂಸಿಯಲ್ಲಿ ಬಿತ್ತನೆ ಆಲೂಗಡ್ಡೆ ಮಾರಾಟವೂ ಪ್ರಾರಂಭವಾಗಿದೆ. ಆಲೂಗಡ್ಡೆ ಬಿತ್ತನೆಗೂ ಮುನ್ನ ಪೂರ್ವ ತಯಾರಿ ಮಾಡಿಕೊಳ್ಳಬೇಕು. ಅಧಿಕ ಮಳೆಯಾದ ಸಂದರ್ಭದಲ್ಲಿ ರೈತರು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ತೋಟಗಾರಿಕೆ ಇಲಾಖೆ ತಿಳಿಸಿದೆ. ತಾಲೂಕಿನಾದ್ಯಂತ ಹಲವೆಡೆ ಉತ್ತಮ ಮಳೆ ಪ್ರಾರಂಭವಾಗಿದ್ದು, ರೈತರು ಮುಂಗಾರು ಬೇಸಾಯ ಚಟುವಟಿಕೆಗಳನ್ನು ಪ್ರಾರಂಭಿಸುತ್ತಿದ್ದಾರೆ. ಪ್ರಸಕ್ತ ಮುಂಗಾರಿನ ಬಿತ್ತನೆಗಾಗಿ ಆಲೂಗಡ್ಡೆಯನ್ನು ರೈತರು ಎಪಿಎಂಸಿ ಹಾಗೂ ಶೈತ್ಯಾಗಾರಗಳಿಂದ ಖರೀದಿಸುತ್ತಿದ್ದಾರೆ. ಆಲೂಗಡ್ಡೆ ಬಿತ್ತನೆ ಮಾಡಿರುವ ತಾಲೂಕುಗಳಲ್ಲಿ ಹೆಚ್ಚಿನ ಮಳೆಯಿಂದ ನೀರು ನಿಂತರೆ, ಗಡ್ಡೆಗಳು ಕೊಳೆಯಲು ಪ್ರಾರಂಭಿಸುತ್ತವೆ. ಆಲೂಗಡ್ಡೆ ಬಿತ್ತನೆಯಾಗಿರುವ ಜಮೀನುಗಳಲ್ಲಿ ಹೆಚ್ಚುವರಿ ಮಳೆ ನೀರು ಬಸಿದು ಹೋಗುವಂತೆ ಬಸಿಗಾಲುವೆ ವ್ಯವಸ್ಥೆ ಕಲ್ಪಿಸಬೇಕು. ನೀರಾವರಿ ವ್ಯವಸ್ಥೆ ಇರುವ ರೈತರು ಏರು ಮಡಿ ಮಾದರಿಯಲ್ಲಿ (ಶುಂಠಿ ಬೇಸಾಯ ಮಾದರಿ) ಬೇಸಾಯ ಮಾಡುವುದು ಸೂಕ್ತ. ಅಧಿಕ ಮಳೆಯಿಂದ ಆಲೂಗಡ್ಡೆ ಹಾಗೂ ಇತರೆ ತೋಟಗಾರಿಕೆ ಬೆಳೆಗಳು ಹಾನಿಯಾದಲ್ಲಿ ಸಂಬಂಧಿಸಿದ ಹೋಬಳಿ ಸಹಾಯಕ ತೋಟಗಾರಿಕೆ ಅಧಿಕಾರಿಗಳನ್ನು ಸಂಪರ್ಕಿಸಲು ಜಿಲ್ಲಾ ಪಂಚಾಯತ್‌ನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ತಿಳಿಸಿದ್ದಾರೆ.

ಟ್ರೀ ಗಾರ್ಡ್, ಇಂಟರ್‌ಲಾಕ್ ತೆರವು



ಕ್ಲೀನ್ ಮೈಸೂರ್ ಫೌಂಡೇಶನ್ ವತಿಯಿಂದ ಮೈಸೂರಿನ ಒಂಟಿಕೊಪ್ಪಲು ವೆಂಕಟರಮಣ ಸ್ವಾಮಿ ದೇವಸ್ಥಾನದ ಸುತ್ತಮುತ್ತಲಿನ ರಸ್ತೆಬದಿಯ ಮರಗಳ ಬುಡದಲ್ಲಿದ್ದ ಸಿಮೆಂಟ್ ಕಾಂಕ್ರೀಟ್ ಇಂಟರ್‌ಲಾಕ್‌ಗಳು ಹಾಗೂ ದೊಡ್ಡ ಮರಗಳಲ್ಲಿದ್ದ ಟ್ರೀ ಗಾರ್ಡ್‌ಗಳನ್ನು ತೆರವುಗೊಳಿಸಲಾಯಿತು. ಮಹಾನಗರ ಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು, ಕ್ಲೀನ್ ಮೈಸೂರು ಫೌಂಡೇಶನ್‌ನ ಲೀಲಾ, ವೆಂಕಟೇಶ್, ಭರತ್, ಬೆಂಗಳೂರಿನ ಸೃಷ್ಟಿರಾಜ್, ಬಾಲು, ಮಲ್ಲಿಕಾ ರಾಣಿ ಮತ್ತಿತರರು ಭಾಗವಹಿಸಿದ್ದರು.

ಹೈದರಾಲಿ ರಸ್ತೆಯ 40 ಮರ ಕಡಿಯಲು ಅನುಮತಿ; ಅರಣ್ಯ ಇಲಾಖೆ ಲೋಪವಿಲ್ಲ

● ಎಪಿಸಿಸಿಎಫ್ ಅನಿಲ್ ರತನ್ ವರದಿ ● ನಿಯಮಾವಳಿ ಅನ್ವಯವೇ ಪ್ರಕ್ರಿಯೆ ನಡೆದಿದೆ

ಮೈಸೂರು, ಮೇ 25(ಎಂಟಿವೈ)– ತೀವ್ರ ಚರ್ಚೆಗೆ ಗ್ರಾಸವಾಗಿ ಟೀಕೆಗೆ ಗುರಿಯಾಗಿದ್ದ ಮೈಸೂರಿನ ಹೈದರಾಲಿ ರಸ್ತೆಯಲ್ಲಿ 40 ಮರ ಕಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮರ ಕಡಿಯಲು ಅನುಮತಿ ನೀಡಿದ ಪ್ರಕ್ರಿಯೆಯಲ್ಲಿ ಯಾವುದೇ ಲೋಪವಾಗಿಲ್ಲ ಎಂದು ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯಗಳ ಸಂರಕ್ಷಣಾಧಿಕಾರಿ (ಎಪಿಸಿಸಿಎಫ್) ಅನಿಲ್ ರತನ್ ವರದಿ ಸಲ್ಲಿಸಿದ್ದಾರೆ.



ಮೈಸೂರಿನ ಹೈದರಾಲಿ ರಸ್ತೆಯಲ್ಲಿ ಮರಗಳನ್ನು ಕಡಿದಿದ್ದ ದೃಶ್ಯ

ಮೈಸೂರಿನ ಹೈದರಾಲಿ ರಸ್ತೆಯಲ್ಲಿ ಎಸ್ಪಿ ಕಚೇರಿ ವೃತ್ತದಿಂದ ಕಾಳಿಕಾಂಬ ದೇವಾಲಯದ ಜಂಕ್ಷನ್‌ವರೆಗೂ ಎರಡೂ ಬದಿಯಲ್ಲಿ 40 ಮರಗಳನ್ನು ರಸ್ತೆ ಅಗಲೀಕರಣದ ನೆಪವೊಡ್ಡಿ ಮಾ.13ರಂದು ರಾತ್ರೋರಾತ್ರಿ ಕಡಿಯಲಾಗಿತ್ತು. ಮರಗಳ ಮಾರಣ ಹೋಮ ಖಂಡಿಸಿ, ಮೈಸೂರಲ್ಲಿ ತೀವ್ರ ಸ್ವರೂಪದ ಪ್ರತಿಭಟನೆ ನಡೆದಿತ್ತು. ರಸ್ತೆ ಅಗಲೀಕರಣದ ಅವಶ್ಯಕತೆ ಇಲ್ಲದಿದ್ದರೂ ಮರಗಳ ಹನನ ಮಾಡಲಾಗಿದೆ ಎಂದು ಪರಿಸರ ಪ್ರೇಮಿಗಳು ಆಕ್ರೋಶ ವ್ಯಕ್ತಪಡಿಸಿದ್ದರು. ಈ ಹಿನ್ನೆಲೆಯಲ್ಲಿ ಏ.19ರಂದು ಅರಣ್ಯ ಸಚಿವ ಈಶ್ವರ್ ಬಿ.ಖಂಡ್ರೆ ಸಿಸಿಎಫ್ ದರ್ಜೆ ಅಧಿಕಾರಿಯಿಂದ ಮರ ಕಡಿತಕ್ಕೆ ನೀಡಿರುವ ಅನುಮತಿ ಕ್ರಮ ಬದ್ಧವಾಗಿದೆಯೇ ಎಂದು ಪರಿಶೀಲಿಸಿ, 7 ದಿನದೊಳಗೆ ವರದಿ ಸಲ್ಲಿಸುವಂತೆ ಸೂಚಿಸಿದ್ದರು. ಆದರೆ, ಸಿಸಿಎಫ್‌ಗಿಂತ ಮೇಲ್ದರ್ಜೆ ಹೊಂದಿರುವ ಎಪಿಸಿಸಿಎಫ್ ಅನಿಲ್ ರತನ್ ಅವರನ್ನು ಮರ ಹನನ ಪ್ರಕರಣದ ಪರಿಶೀಲನೆಗೆ ನಿಯೋಜಿಸಲಾಗಿತ್ತು. ಇದೀಗ ಅನಿಲ್ ರತನ್ ವರದಿ ನೀಡಿದ್ದು, ಈ ವರದಿಯಲ್ಲಿ ಮೈಸೂರು ಅರಣ್ಯಾಧಿಕಾರಿಗಳು ಲೋಪ ಎಸಗಿಲ್ಲ ಎಂದು ಸಮರ್ಥಿಸಿಕೊಂಡಿದ್ದಾರೆ.

ಎಪಿಸಿಸಿಎಫ್ ಅನಿಲ್ ರತನ್ ಅವರು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಮೀನಾಕ್ಷಿ ನೇಗಿ ಅವರಿಗೆ ವರದಿ ಸಲ್ಲಿಸಿದ್ದು, ಆ ವರದಿ ಇದೀಗ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರ ಕೈ ಸೇರಿದೆ.

ಹೈದರಾಲಿ ರಸ್ತೆಯ ಕಾಳಿಕಾಂಬ ದೇವಾಲಯದ ಜಂಕ್ಷನ್‌ನಿಂದ ಎಸ್‌ಪಿ ಕಚೇರಿ ವೃತ್ತದವರೆಗೆ 360 ಮೀಟರ್ ಉದ್ದದಲ್ಲಿ 30 ಮೀಟರ್ ಅಗಲೀಕರಣ ಮಾಡಲು ಅನಿವಾರ್ಯವಾಗಿತ್ತೇ ಎಂಬ ಪ್ರಶ್ನೆಗೆ ಸ್ಪಷ್ಟ ಮಾಹಿತಿ ವರದಿಯಲ್ಲಿ ಉಲ್ಲೇಖಿಸಿಲ್ಲ.

ಕರ್ನಾಟಕ ಮರಗಳ ಸಂರಕ್ಷಣಾ ಕಾಯ್ದೆ 1976ರ ಕಲಂ 8(3)ರ ಅಡಿಯಲ್ಲಿ ಮರ ಕಡಿಯಲು ಮಹಾನಗರಪಾಲಿಕೆಗೆ ಅರಣ್ಯ ಇಲಾಖೆಯಿಂದ ಅನುಮತಿ ಕೊಡಲಾಗಿದೆ. ಇದರಲ್ಲಿ ಉಲ್ಲಂಘನೆ ಆಗಿಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅರಣ್ಯ ಸಚಿವರ ಸೂಚನೆ ಮೇರೆಗೆ ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಸಿಬ್ಬಂದಿ ಮತ್ತು ನೇಮಕಾತಿ) ಮೈಸೂರು ವೃತ್ತಕ್ಕೆ ಭೇಟಿ ನೀಡಿ, ಅಧಿಕಾರಿಗಳೊಂದಿಗೆ ಚರ್ಚಿಸಿ, ಕಡತಗಳನ್ನು ಪರಿಶೀಲಿಸಲಾಗಿದೆ. ಈ ಪ್ರಕರಣದಲ್ಲಿ 50ಕ್ಕಿಂತ ಕಡಿಮೆ ಮರ ಕಡಿಯಲು ಅನುಮತಿ ನೀಡಿರುವುದರಿಂದ ನಿಯಮಾನುಸಾರ ಸಾರ್ವಜನಿಕರಿಂದ ಆಕ್ಷೇಪಣೆ ಕರೆಯುವ ಅವಶ್ಯಕತೆ ಇರುವುದಿಲ್ಲ ಎಂದು ವರದಿಯಲ್ಲಿ ಸ್ಪಷ್ಟನೆ ನೀಡಲಾಗಿದೆ. ಅಲ್ಲದೆ, ಕತ್ತರಿಸಲಾದ ಮರಗಳನ್ನು ಸೀವೇಜ್ ಫಾರಂ ಸಮೀಪದ ಡಂಪಿಂಗ್ ಯಾರ್ಡ್‌ಗೆ ಸ್ಥಳಾಂತರಿಸಲಾಗಿದೆ ಎಂದು ತಿಳಿಸಿದ್ದಾರೆ.

ವರದಿಯಲ್ಲಿ ಉಲ್ಲೇಖಿಸಲಾದ ಅಂಶ: ಮೈಸೂರು ಪಾಲಿಕೆ ತೋಟಗಾರಿಕೆ ವಿಭಾಗದ ಎಇಇ 2024ರ ಜೂನ್ 15ರಂದು ಮರ ಕಡಿಯಲು ಅನುಮತಿ ಕೇಳಿದ್ದರು. ಅದಕ್ಕೆ ವರದಿ ಸಲ್ಲಿಸಲು ಮೋಜಣಿದಾರರಿಗೆ ಅದೇ ದಿನ ಸೂಚಿಸಿದ್ದರು.

ಮೈಸೂರು ಉತ್ತರ ಶಾಖೆಯ ಉಪ ವಲಯ ಅರಣ್ಯಾಧಿಕಾರಿ/ಮೋಜಣಿದಾರರು 2024ರ ಜುಲೈ 20ರಂದು ಸ್ಥಳ ಪರಿಶೀಲಿಸಿ, ಮರಗಳ ಪಟ್ಟಿ ತಯಾರಿಸಿ ಜುಲೈ 22ರಂದು ವರದಿ ಸಲ್ಲಿಸಿದ್ದರು. ರಸ್ತೆಬದಿಯ ಎಡಭಾಗದಲ್ಲಿ 26, ಬಲ ಭಾಗದಲ್ಲಿ 14 ಸೇರಿ ಒಟ್ಟು 40 (38 ಪೆಲ್ಟೋಫೋರಮ್, 1 ರೇನ್ ಟ್ರೀ ಹಾಗೂ ಒಂದು ಗೊಬ್ಬಳಿ) ಮರಗಳಿವೆ ಎಂದು ವರದಿ ಸಲ್ಲಿಸಿದ್ದರು. ಇದನ್ನು ಆಧರಿಸಿ ವಲಯ ಅರಣ್ಯಾಧಿಕಾರಿಯು 2025ರ ಜ.8ರಂದು ಎಸಿಎಫ್‌ಗೆ ವರದಿ ನೀಡಿದ್ದರು. ಎಸಿಎಫ್ ಮರಗಳ ಮೌಲ್ಯಮಾಪನದ ವರದಿಯನ್ನು ಜ.15ರಂದು ಸಲ್ಲಿಸಿದ್ದರು. ಈ ಮಧ್ಯೆ, ಇಲಾಖೆಯ ಕೋರಿಕೆ ಮೇರೆಗೆ ಪಾಲಿಕೆ ಅಭಿವೃದ್ಧಿ ಅಧಿಕಾರಿಯು ಜ.22ರಂದು ರಸ್ತೆ ವಿಸ್ತರಣೆ ಯೋಜನೆಯ ಸ್ಕೆಚ್ ಸಲ್ಲಿಸಿದ್ದರು. ನಂತರ, 7.76 ಲಕ್ಷ ಮೊತ್ತವನ್ನು ಸರ್ಕಾರಕ್ಕೆ ಪಾವತಿಸುವಂತೆ ಡಿಸಿಎಫ್ ಸೂಚಿಸಿದ್ದರು. ಅದರಂತೆ, ಪಾಲಿಕೆಯಿಂದ 4 ಡಿಡಿ ಹಾಗೂ 1 ಚೆಕ್ ಸಲ್ಲಿಕೆಯಾಗಿತ್ತು. ಹಣ ಪಾವತಿಸಿದ ನಂತರ, ಮೈಸೂರು ವಿಭಾಗದ ಡಿಸಿಎಫ್ ಮರಗಳನ್ನು ಕಡಿಯಲು ಮಾ.25ರಂದು ಅನುಮತಿ ನೀಡಿದ್ದಾರೆ ಎಂದು ವರದಿಯಲ್ಲಿದೆ.

ಸುಭಾಷ್‌ನಗರದಲ್ಲಿ ಮರ ಕಡಿಯಲು ಅನುಮತಿ ನೀಡಿಲ್ಲ

“ಮೈಸೂರಿನ ಸುಭಾಷ್ ನಗರದ 6ನೇ ಕ್ರಾಸ್‌ನಲ್ಲಿ ಮರ ಕಡಿಯಲು ಅರಣ್ಯ ಇಲಾಖೆ ಯಾರಿಗೂ ಅನುಮತಿ ನೀಡಿಲ್ಲ. ಸಾಮಾಜಿಕ ಜಾಲತಾಣಗಳಲ್ಲಿ ಅಲ್ಲಿ ಚರಂಡಿ ಕಾಮಗಾರಿ ನಡೆಸಲು ಮೈಸೂರು ಮಹಾ ನಗರಪಾಲಿಕೆ 15 ಮರ ಕಡಿಯಲು ಗುರುತಿಸಿದೆ. ಅಲ್ಲದೆ, ಮರ ಕಡಿಯಲು ಅರಣ್ಯ ಇಲಾಖೆ ಅನುಮತಿ ನೀಡಿದೆ ಎಂದು ವದಂತಿ ಹಬ್ಬಿದೆ. ಆದರೆ, ಅರಣ್ಯ ಇಲಾಖೆ ಮರ ಕಡಿಯಲು ಯಾರಿಗೂ ಅನುಮತಿ ನೀಡಿಲ್ಲ.

–ಡಾ.ಬಸವರಾಜು, ಡಿಸಿಎಫ್



ಗುರುವಂದನೆ...

ಮೈಸೂರು ಉದಯಗಿರಿಯ ಜೆಎಸ್‌ಎಸ್ ಶಿಶುನಾಳ ಶರೀಫ ಪ್ರೌಢಶಾಲೆಯಲ್ಲಿ 2011–12ನೇ ಸಾಲಿನ ವಿದ್ಯಾರ್ಥಿಗಳು ತಮ್ಮ ಗುರುಗಳಿಗೆ ನೆನಪಿನ ಕಾಣಿಕೆ ನೀಡಿ, ಗೌರವ ಸನ್ಮಾನದ ಮೂಲಕ ಗುರುವಂದನೆ ಸಲ್ಲಿಸಿದರು.

ಮಾನ್ಯತಾಗೆ ಶೇ.98 ಅಂಕ



ಬೆಟ್ಟದಪುರ: ಇಲ್ಲಿನ ಡಿಟಿಎಂ ನವೋದಯ ವಿದ್ಯಾ ಸಂಸ್ಥೆಯ ವಿದ್ಯಾರ್ಥಿನಿ ಎಂ.ಮಾನ್ಯತಾಗೆ ಎಸ್‌ಎಸ್‌ಎಲ್‌ಸಿ ಮರು ಮೌಲ್ಯಮಾಪನದಲ್ಲಿ 12 ಹೆಚ್ಚುವರಿ ಅಂಕಗಳು ದೊರೆತಿದ್ದು, ಈ ಮೂಲಕ ಪಿರಿಯಾಪಟ್ಟಣ ತಾಲೂಕಿಗೆ ತೃತೀಯ ಸ್ಥಾನ ಪಡೆದಂತಾಗಿದೆ. ಮರುಮೌಲ್ಯಮಾಪನದಲ್ಲಿ ಇಂಗ್ಲಿಷ್‌ನಲ್ಲಿ 4, ಸಮಾಜ ವಿಜ್ಞಾನದಲ್ಲಿ 8 ಅಂಕಗಳು ಹೆಚ್ಚು ಸಿಕ್ಕಿವೆ. ಇದರೊಂದಿಗೆ ಕನ್ನಡದಲ್ಲಿ 122, ಇಂಗ್ಲಿಷ್‌ನಲ್ಲಿ 96, ಹಿಂದಿಯಲ್ಲಿ 100, ಗಣಿತದಲ್ಲಿ 99, ವಿಜ್ಞಾನದಲ್ಲಿ 99 ಹಾಗೂ ಸಮಾಜ ವಿಜ್ಞಾನದಲ್ಲಿ 99 ಸೇರಿ ಒಟ್ಟು 615 (ಶೇ.98.4) ಅಂಕ ಗಳಿಸಿದ್ದಾಳೆ. ಈಕೆ ಮೇಲೂರು ಗ್ರಾಮದ ಮಲ್ಲು ಹಾಗೂ ಎಸ್.ಜಯಂತಿ ದಂಪತಿ ಪುತ್ರಿ.

ಮಾರ್ಗದರ್ಶಕರು ಸಂಶೋಧಕರ ಚಿಂತನೆಗಳಿಗೆ ಸ್ವಾತಂತ್ರ್ಯ ನೀಡಬೇಕು: ಡಾ.ನಾಗೇಂದ್ರ ಪರಾಶರ್

ಮೈಸೂರು, ಮೇ 25– ಸಂಶೋಧನೆ ಎಂಬುದು ಇಂದು ಎಲ್ಲಾ ಕ್ಷೇತ್ರಗಳಲ್ಲಿ ಅನಿವಾರ್ಯವಾಗಿದೆ. ಸಂಶೋಧನೆಯ ಸ್ವರೂಪಗಳು ಇಂದು ತುಂಬಾ ಬದಲಾಗುತ್ತಿವೆ. ಹೊಸ ಚಿಂತನೆ ಮತ್ತು ವಿಧಾನಗಳಿಗೆ ಸಂಶೋಧಕರು ಹೊಂದಿಕೊಳ್ಳಬೇಕು ಮತ್ತು ಪ್ರಗತಿದಾಯಕ ಚಿಂತನೆಗಳನ್ನು ಶೋಧಿಸಬೇಕು. ಇದಕ್ಕೆ ಪೂರಕವಾಗಿ ಮಾರ್ಗದರ್ಶಕರು ಸಂಶೋಧಕರ ಚಿಂತನೆಗಳಿಗೆ ಸ್ವಾತಂತ್ರ್ಯವನ್ನು ನೀಡಬೇಕು. ಇದರಿಂದ ಶೋಧನೆಯಲ್ಲಿ ಹೊಸತು ಮೂಡುತ್ತದೆ ಎಂದು ಆರ್.ವಿ.ವಿಶ್ವ ವಿದ್ಯಾಲಯದ ಮೈಸೂರು ಕ್ಯಾಂಪಸ್‌ನ ನಿರ್ದೇಶಕ ಡಾ.ನಾಗೇಂದ್ರ ಪರಾಶರ್ ತಿಳಿಸಿದರು.



ಜೆಎಸ್‌ಎಸ್ ಕಲಾ, ವಾಣಿಜ್ಯ, ವಿಜ್ಞಾನ ಕಾಲೇಜಿನಲ್ಲಿ ಸಂಶೋಧನೆ ಕುರಿತು ರಾಷ್ಟ್ರಮಟ್ಟದ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು.

ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಸಂಶೋಧನೆ ಕುರಿತು ಹಮ್ಮಿಕೊಂಡಿದ್ದ ಒಂದು ದಿನದ ರಾಷ್ಟ್ರಮಟ್ಟದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಂಶೋಧಕರು ಸಂಶೋಧನೆಯ ಮೂಲಭೂತ ವಿಚಾರಗಳನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕು. ಸಂಶೋಧನೆಯ ಮನಸ್ಥಿತಿ ಸದಾ ನಮ್ಮಲ್ಲಿ ಜಾಗೃತವಾಗಿರಬೇಕು. ಸಂಶೋಧಕರು ಸಂಶೋಧನೆಯಲ್ಲಿ ಹುಚ್ಚು ಹತ್ತಿದಂತೆ ತೊಡಗಿಸಿಕೊಳ್ಳಬೇಕು. ಇದರಿಂದ ಹೊಸ ಜ್ಞಾನ, ಸಿದ್ಧಾಂತ, ಸಮಾಜಗಳು ನಿರ್ಮಾಣಗೊಳ್ಳುತ್ತವೆ ಎಂದರು.


ಕಾಲೇಜಿನ ಮುಖ್ಯ ಕಾರ್ಯ ನಿರ್ವಾಹಕ ಪ್ರೊ.ಬಿ.ವಿ.ಸಾಂಬಶಿವಯ್ಯ ಅಧ್ಯಕ್ಷೀಯ ನುಡಿಗಳನ್ನಾಡುತ್ತಾ, ಸಂಶೋಧನೆಯು ಉನ್ನತ ಶಿಕ್ಷಣದಲ್ಲಿ ಜ್ಞಾನದ ಅಡಿಪಾಯವಾಗಿದ್ದು, ಶೈಕ್ಷಣಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಪ್ರಗತಿಯನ್ನು ಪ್ರೇರೇಪಿಸಿದೆ. ಭಾರತೀಯ ಸಂಸ್ಥೆಗಳು ಇಂದು ಗುಣಮಟ್ಟದ ಸಂಶೋಧನೆಯನ್ನು ಉಳಿಸಿಕೊಳ್ಳುವಲ್ಲಿ ಸವಾಲುಗಳನ್ನು ಎದುರಿಸುತ್ತಿವೆ. ಸಂಶೋಧಕರಲ್ಲಿ ಬಲವಾದ ಸಂಶೋಧನಾ ಮನಸ್ಥಿತಿ ಅಗತ್ಯವಾಗಿದೆ. ಸಂಶೋಧನೆಯು ಪಠ್ಯಪುಸ್ತಕದ ಉತ್ತರಗಳಿಗಿಂತ ಭಿನ್ನವಾಗಿ, ಬಗೆಹರಿಯದ ಪ್ರಶ್ನೆಗಳಿಗೆ ಪರಿಹಾರಗಳನ್ನು ಹುಡುಕುತ್ತದೆ. ಒಬ್ಬ ಸಂಶೋಧಕನು ವ್ಯವಸ್ಥಿತವಾದ ಶೋಧನೆ, ಪ್ರಯೋಗ ಮತ್ತು ವಿಶ್ಲೇಷಣೆಯ ಮೂಲಕ ಹೊಸ ಜ್ಞಾನವನ್ನು ರಚಿಸಲು ಪ್ರಯತ್ನಿಸುತ್ತಾನೆ. ಅವರು ನಾವೀನ್ಯತೆಗೆ ಕೊಡುಗೆ ನೀಡುತ್ತಾರೆ. ಈ ನಿಟ್ಟಿನಲ್ಲಿ ಸಂಶೋಧಕರು ಸಂಶೋಧನಾ ಸಮಸ್ಯೆಗಳನ್ನು ರೂಪಿಸುವುದು, ಊಹೆಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಪರೀಕ್ಷಿಸುವುದು, ಪರಿಣಾಮಕಾರಿ ಸಾಹಿತ್ಯ ಪುನರ್ರಚನೆಯನ್ನು ನಡೆಸುವುದು ಮುಂತಾದ ಪ್ರಮುಖ ಪರಿಕಲ್ಪನಾ ಅಂಶಗಳಿಗೆ ಯುವ ಮನಸ್ಸುಗಳನ್ನು ಪರಿಚಯಿಸುವ ಉದ್ದೇಶದಿಂದ ಈ ಕಾರ್ಯಾಗಾರವನ್ನು ರೂಪಿಸಲಾಗಿದೆ ಎಂದು ಹೇಳಿದರು. ಪ್ರಾಂಶುಪಾಲ ಡಾ.ಎಂ.ಪ್ರಭು ಸ್ವಾಗತಿಸಿದರು. ಕು. ಅಂಕಿತಾ ಕುಲಕರ್ಣಿ ಪ್ರಾರ್ಥಿಸಿದರು. ಐಕ್ಯೂಎಸಿ ಸಂಯೋಜಕ ಡಾ.ಎನ್. ರಾಜೇಂದ್ರಪ್ರಸಾದ್ ವಂದಿಸಿದರು. ಡಾ.ಜಿ.ಎಂ.ಸಿಂಧು ನಿರೂಪಿಸಿದರು.

ಅರ್ಜಿ ಆಹ್ವಾನ

ಮೈಸೂರು: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವತಿಯಿಂದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ ಖಾಲಿ ಇರುವ ಜಿಲ್ಲಾ MIS ಸಮಾಲೋಚಕರ ಹುದ್ದೆಗೆ ತಾತ್ಕಾಲಿಕವಾಗಿ ಗುತ್ತಿಗೆ/ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಅರ್ಜಿ ಆಹ್ವಾನಿಸಿದ್ದು, ಅರ್ಜಿ ಸಲ್ಲಿಸಲು ಜೂನ್ 2 ಕೊನೆಯ ದಿನ.

ಜಿಲ್ಲಾ MIS ಸಮಾಲೋಚಕರ ಹುದ್ದೆಗೆ post Gradute in statistics / M.C.A/ M.SC. Computer science/ BE computer science from a recognized university ony. 3-5 years of relevant experience in data management data research preferably in the developmental sectors ವಿದ್ಯಾರ್ಹತೆ, ಅನುಭವ ಹೊಂದಿರಬೇಕು. ಮಾಸಿಕ ಸಮಾಲೋಚನಾ ಶುಲ್ಕ ರೂ. 25,000ರಿಂದ 30,000 ರೂ. ನೀಡಲಾಗುತ್ತದೆ. ಮಾಹಿತಿಗೆ ಆಯ್ಕೆ ವಿಧಾನ ಮತ್ತು ಷರತ್ತುಗಳಿಗೆ ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು–ನೈರ್ಮಲ್ಯ ವಿಭಾಗ ಮೈಸೂರು ಇವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

26.05.2025 ಸೋಮವಾರ, ಮಳೆ ನಕ್ಷತ್ರ: ರೋಹಿಣಿ 25.05.2025ರಿಂದ 07.06.2025 ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಭರಣಿ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಶಾಲಾಕ್ಯ ತಂತ್ರ ಸ್ನಾತಕೋತ್ತರ ವಿಭಾಗದಿಂದ ಕಣ್ಣಿನ ದೃಷ್ಟಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ವಿಶೇಷ ಬೇಸಿಗೆ ಆರೋಗ್ಯ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಮೂತ್ರ ಪಿಂಡ (ಕಿಡ್ನಿ) ಕಾಯಿಲೆಗೆ ಚಿಕಿತ್ಸಾ ಶಿಬಿರ, ಆರೋಗ್ಯಾಯುಷ್ಯ ಆರೋಗ್ಯವರ್ಧಕ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಭುಜ ನೋವು, ದುಷ್ಟ ವ್ರಣ/ಮಾಯದ ಗಾಯ, ಮಾನಸಿಕ ಒತ್ತಡ ನಿವಾರಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, .ದೇವೇಗೌಡ ಸರ್ಕಲ್ ಬಳಿ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಗೆ.

■ **ಅರಿವು ಸಂಸ್ಥೆ:** ಪರಮಪೂಜ್ಯ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 83ನೇ ಜನ್ಮ ದಿನೋತ್ಸವದ ಅಂಗವಾಗಿ ಗೋ ಪೂಜೆ ಹಾಗೂ ಮೇವು ವಿತರಣೆ, ಮುಖ್ಯ ಅತಿಥಿಗಳು: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಉಪಾಧ್ಯಕ್ಷ ಎನ್.ಎಂ.ನವೀನ್‌ಕುಮಾರ್, ಹಿರಿಯ ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ, ಮಾಜಿ ಕಾರ್ಪೊರೇಟರ್ ಮಾ.ವಿ.ರಾಮಪ್ರಸಾದ್, ಸ್ಥಳ: ಶ್ರೀ ಕೃಷ್ಣ ದೇವಸ್ಥಾನದ ಮುಂಭಾಗ, ನಂಜುಮಳಿಗೆ, ಬೆಳಗ್ಗೆ 10 ಗಂಟೆಗೆ.

■ **ಓಟಿ ಕೇರ್:** ಉಚಿತ ವಾಕ್–ಶ್ರವಣ ಶಿಬಿರ, ಸ್ಥಳ: ಓಟಿ ಕೇರ್ ಆಸ್ಪತ್ರೆ, ಸಯ್ಯಾಜಿರಾವ್ ರಸ್ತೆ, ಬೆಳಗ್ಗೆ 11 ಗಂಟೆಯಿಂದ.

■ **ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಅಂಡ್ ರೀಸರ್ಚ್, ಮೈಸೂರು, ಡಿಪಾರ್ಟ್‌ಮೆಂಟ್ ಆಫ್ ನ್ಯೂಟ್ರಿಷನ್ ಅಂಡ್ ಡೈಯಟಿಸ್ ಸ್ಕೂಲ್ ಆಫ್ ಲೈಫ್ ಸೈನ್ಸಸ್, ಮೈಸೂರು:** ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣ, ಮುಖ್ಯ ಅತಿಥಿ: ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ ಜಾವಗಲ್ ಶ್ರೀನಾಥ್, ಅಧ್ಯಕ್ಷತೆ: ಉಪಕುಲಪತಿ ಡಾ.ಹೆಚ್.ಬಸವನಗೌಡಪ್ಪ, ಸ್ಥಳ: ಶ್ರೀರಾಜೇಂದ್ರ ಆಡಿಟೋರಿಯಂ, ಜೆಎಸ್‌ಎಸ್ ಕಾಲೇಜ್ ಆಫ್ ಫಾರ್ಮಸಿ, ಬೆಳಗ್ಗೆ 10.30ಕ್ಕೆ.

■ **ಸಿದ್ಧಾರ್ಥ ಕ್ಷೇಮಾಭಿವೃದ್ಧಿ ಸಂಘ, (ರಾಮಕೃಷ್ಣನಗರ, ಮೈಸೂರು) :** ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರ 134ನೇ ಜನ್ಮ ದಿನಾಚರಣೆ, ದಿವ್ಯ ಸಾನ್ನಿಧ್ಯ: ಮೈಸೂರಿನ ಗಾಂಧಿನಗರದ ಉರಿಲಿಂಗ ಪೆದ್ದಿಶ್ವರ ಸಂಸ್ಥಾನ ಶಾಖಾ ಮಠದ ಪರಮಪೂಜ್ಯ ಜ್ಞಾನ ಪ್ರಕಾಶ್ ಸ್ವಾಮೀಜಿ, ಉದ್ಘಾಟನೆ: ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಅಧ್ಯಕ್ಷತೆ: ಶಾಸಕ ಜಿ.ಟಿ.ದೇವೇಗೌಡ, ಮುಖ್ಯ ಅತಿಥಿಗಳು: ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್ ಬೋಸ್, ಸ್ಥಳ: ಚಿಕ್ಕಮ್ಮಾನಿಕೇತನ, ಕುವೆಂಪುನಗರ, ಸಂಜೆ 4.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ, ಎಲ್.ಶೋಭಾ ಆನಂದ್, 6.15–ಗೀತಾರಾಧನ, 6.35 ಮತ್ತು ಸಂಜೆ 6.10: ಸಸ್ಯ ಸಿರಿ ಮನೆಯಂಗಳದಲ್ಲಿರುವ ಔಷಧೀಯ ಸಸ್ಯಗಳು, ಪ್ರಸ್ತುತಿ: ಡಾ.ಟಿ.ಶಿವಕುಮಾರ್, 6.40–ಅರಿವಿನ ಶಿಖರ, ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎಂ.ರಾಘವೇಂದ್ರ, ಅಮೃತ ನಿತಿನ್ ಶಾಸ್ತ್ರೀ, ವ್ಯಾಖ್ಯಾನ–ಕೆ.ಎಲ್.ಪದ್ಮಿನಿ ಹೆಗಡೆ, 6.50–ರೈತರಿಗೆ ಸಲಹೆ, 7.15–ಭರವಸೆ ಹೊನಲು, ವೈದ್ಯರ ಕಿವಿಮಾತು, ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಟ್ರಸ್ಟ್‌ವೆಲ್ ಆಸ್ಪತ್ರೆ, ಜೆ.ಸಿ.ರಸ್ತೆ, ಬೆಂಗಳೂರು, ಜಂಕ್ ಫುಡ್‌ನಿಂದ ಮಕ್ಕಳಲ್ಲಿ ಅರೋಗ್ಯ ಸಮಸ್ಯೆ ಈ ಕುರಿತು Trust Well hospitalನ ವೈದ್ಯರಾದ ಡಾ.ಚಂದ್ರಶೇಖರ್ ಅವರೊಡನೆ ಸಂದರ್ಶನ, ಸಂದರ್ಶಕರು ನಿರ್ಮಲ .ಎಸ್, 8.30–ಯೋಗ ಕುರಿತ ವಿಶೇಷ ಸರಣಿ, ಮಹಾಯೋಗ, ವಿಷಯ: ಯೋಗ ಮತ್ತು ಆಸ್ತಮಾ, ಭಾಗವಹಿಸುತ್ತಾರೆ–ಸಂಗೀತ ನಾಯಕ್, ನಿರ್ಮಾಣ–ನಂದನ್‌ಕುಮಾರ್. ಎಲ್.ಓ, 8.35 ಕನ್ನಡ ಚಿತ್ರಗೀತೆಗಳು, 9.00–ನೆನಪಿನಂಗಳ (ಧ್ವನಿ ಭಂಡಾರದಿಂದ) ಹಿರಿಯ ಸಂಗೀತ ವಿದ್ವಾಂಸರಾದ ಪಂಡಿತ್ ಪುಟ್ಟರಾಜ ಗವಾಯಿ ಅವರೊಂದಿಗೆ ಆರ್.ಎನ್.ತ್ಯಾಗರಾಜನ್ ನಡೆಸಿದ್ದ ಸಂವಾದ. 10.00–ಕರ್ನಾಟಕ ಶಾಸ್ತ್ರೀಯ ಸಂಗೀತ : ಯು.ಶ್ರೀನಿವಾಸ್, ಮ್ಯಾಂಡೋಲಿನ್ ವಾದನ, 10.30–ಹಿಂದಿ ಚಿತ್ರಗೀತೆಗಳು, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ಗೇಮ್ ಷೋ, ಪ್ರಸ್ತುತಿ: ಬಿ.ದಿಗ್ವಿಜಯ್ ಮತ್ತು ಆರ್.ಲೋಕೇಶ್ವರಿ, 12.05–ವನಿತಾ ವಿಹಾರ–ಧಾರವಾಡದ ತೇಜಸ್ವಿನಿ ಮಹಿಳಾ ಮಂಡಲದ ಸದಸ್ಯರಿಂದ ಕಾರ್ಯಕ್ರಮ ವೈವಿಧ್ಯ, ಪ್ರಸ್ತುತಿ–ಮಂಜುಳಾ ಪುರಾಣಿಕ, 12.35–ದೇವರನಾಮ, 12.45–ನಮ್ಮ ಆರೋಗ್ಯ ವಿಶ್ವ ತಂಬಾಕು ರಹಿತ ದಿನಾಚರಣೆಯ ಸಂಬಂಧವಾಗಿ ಧೂಮಪಾನ ಆರೋಗ್ಯಕ್ಕೆ ಹಾನಿಕರ ಕುರಿತು ಶ್ವಾಸಕೋಶ ತಜ್ಞರಾದ ಡಾ.ಆರ್.ಲಕ್ಷ್ಮೀನರಸಿಂಹನ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ, 1.00–ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳ ಸರಣಿ ಪ್ರಧಾನಮಂತ್ರಿ ಬೀದಿಬದಿಯ ವ್ಯಾಪಾರಿಗಳ ಆತ್ಮನಿರ್ಭರ ಯೋಜನೆ ನಿಧಿ ಕುರಿತು ಮಾತನಾಡುತ್ತಾರೆ, ಪತ್ರಕರ್ತರಾದ ಎಂ.ಟಿ.ಯೋಗೇಶ್ ಕುಮಾರ್, 1.20 ಭಾವಗೀತೆಗಳು–ರೂಪ ಮತ್ತು ದೀಪ, 2.30–ಪ್ರದೇಶ ಸಮಾಚಾರ, 2.40–ಚಿತ್ರಗೀತೆಗಳು, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಇ.ಗಾಯಿತ್ರಿ, ವೀಣಾ ವಾದನ, 4.00–ಮಹಿಳಾ ರಂಗ–ಅಕ್ಕಾ ಕೇಳವ್ವ, ಮಹಿಳೆಯರ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ. ಪ್ರಸ್ತುತಿ: ಜಾಂಪಣ್ಣ ಆಶೀಹಾಳ್, 4.45–ಹಿಂದಿ ಪಾಠ, ಪ್ರಸ್ತುತಿ: ಮಾಧವಿ ಭಂಡಾರಿ, 5.05–ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ: ಮುಂಗಾರಿಗೆ ತೋಟಗಾರಿಕೆ ಇಲಾಖೆ ಅಭಿವೃದ್ಧಿ ಯೋಜನೆಗಳನ್ನು ಕುರಿತು ಮೈಸೂರು ಜಿಲ್ಲಾ ತೋಟಗಾರಿಕಾ ಇಲಾಖೆ ಉಪನಿರ್ದೇಶಕ ಮಂಜುನಾಥ್ ಅಂಗಡಿ ಅವರೊಂದಿಗೆ ಸಂದರ್ಶನ, ಪ್ರಸ್ತುತಿ: ಎನ್.ಕೇಶವಮೂರ್ತಿ, 7.45–ಕನ್ನಡ ಚಿತ್ರಗೀತೆಗಳು, 8.00–ಯುವವಾಣಿ, ಯುವಪ್ರತಿಭೆ, ಶಾಸ್ತ್ರೀಯ ಸಂಗೀತ ಕಲಾವಿದೆ ಮೈಸೂರಿನ ಶ್ರೀರಂಜನಿ ಎಸ್.ಎಲ್. ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ : ಬೇದ್ರೆ ಮಂಜುನಾಥ, 8.30 ಹಿಂದಿ ಚಿತ್ರಗೀತೆ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ಲಾಲ್ಗುಡಿ. ಜಿ.ಜಯರಾಮನ್ ಮತ್ತು ಜಿ.ಜೆ.ಆರ್.ಕೃಷ್ಣನ್, ಯುಗಳ ವೈಯೋಲಿನ್ ವಾದನ, 10.00–ಯಕ್ಷಸಂಪದ, ಬಡಗು ತಿಟ್ಟಿನ ಯಕ್ಷಗಾನ ಮಟ್ಟುಗಳ ರೇಡಿಯೋ ಪ್ರಾತ್ಯಕ್ಷಿಕೆ. ಪ್ರಸ್ತುತಿ: ದಿವಾಕರ ಹೆಗಡೆ, 10.30–ಸವಿನೆನಪು.

ಮೈಸೂರು ಮಿತ್ರ ಸೋಮವಾರ 26 ಮೇ 2025

ಮೈಸೂರು ಕ್ಲೀನ್ ಸಿಟಿ ಮಾಡಲು ಶ್ರಮಿಸಿದ ಅಯೂಬ್ ಖಾನ್

ಅರಣ್ಯ ಸಚಿವ ಈಶ್ವರ್ ಖಂಡ್ರೆ ಶ್ಲಾಘನೆ



ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಅವರನ್ನು ಮೈಸೂರು ಗ್ರಾಮಾಂತರ ಕಾಂಗ್ರೆಸ್ ಸಮಿತಿ ವತಿಯಿಂದ ಸನ್ಮಾನಿಸಲಾಯಿತು. ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್ ಮತ್ತಿತರರಿದ್ದರು.

ಮೈಸೂರು, ಮೇ 25(ಎಂಕೆ)– ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಅವರನ್ನು ಮೈಸೂರು ಗ್ರಾಮಾಂತರ ಕಾಂಗ್ರೆಸ್ ಸಮಿತಿ ವತಿಯಿಂದ ಸನ್ಮಾನಿಸಿ, ಅಭಿನಂದನೆ ಸಲ್ಲಿಸಲಾಯಿತು.

ಮೈಸೂರು ದೊಡ್ಡಕೆರೆ ಮೈದಾನದ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಕಚೇರಿಯಲ್ಲಿ ಆಯೋಜಿಸಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ.ಖಂಡ್ರೆ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ. ವಿಜಯ್‌ಕುಮಾರ್ ಸನ್ಮಾನಿಸಿದರು.

ಬಳಿಕ ಮಾತನಾಡಿದ ಅರಣ್ಯ ಸಚಿವರು, ಮೈಸೂರು ದಸರಾ ವಸ್ತುಪ್ರದರ್ಶನವೂ ವಿಶ್ವವಿಖ್ಯಾತ ಜಂಬೂಸವಾರಿಯಷ್ಟೇ ಜನಪ್ರಿಯವಾಗಿದೆ. 90 ದಿನಗಳ ಕಾಲ ನಡೆಯುವ ವಸ್ತುಪ್ರದರ್ಶನ ರಾಜ್ಯದ ವಿವಿಧ ಇಲಾಖೆಗಳ ಯೋಜನೆ, ಕಾರ್ಯಕ್ರಮಗಳ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡುವುದಲ್ಲದೆ, ಮನರಂಜನೆಯನ್ನೂ ಒದಗಿಸುತ್ತದೆ, ಹೀಗಾಗಿಯೇ ಲಕ್ಷಾಂತರ ಜನರು ಇಲ್ಲಿಗೆ ಆಗಮಿಸುತ್ತಾರೆ ಎಂದರು.

ಮೈಸೂರು ನಗರವನ್ನು ಏಕ ಬಳಕೆ ಪ್ಲಾಸ್ಟಿಕ್ ಮುಕ್ತ ನಗರ ಎಂದು ಘೋಷಣೆ ಮಾಡಲಾಗಿದೆ. ಅದರಂತೆ ಅಯೂಬ್ ಖಾನ್ ಅವರು ಕಳೆದ ವರ್ಷದ ದಸರಾ ವಸ್ತುಪ್ರದರ್ಶನದ ವೇಳೆ ವಸ್ತು ಪ್ರದರ್ಶನ ಮಳಿಗೆಯ ಆವರಣವನ್ನು ಪ್ಲಾಸ್ಟಿಕ್ ಮುಕ್ತ ಮಾಡಲು ಶ್ರಮಿಸಿದ್ದಾರೆ. ಮೈಸೂರು ನಗರಪಾಲಿಕೆ ಮೇಯರ್ ಆಗಿ, ಜವಾಹರಲಾಲ್ ನೆಹರೂ ನಗರ ನವೀಕರಣ ಯೋಜನೆಯಡಿ ಹಣ ತಂದು ಮೈಸೂರಿನ ಅಭಿವೃದ್ಧಿಗೆ ಹಾಗೂ ಕ್ಲೀನ್ ಸಿಟಿ ಮಾಡಲು ಶ್ರಮಿಸಿದ ಅಯೂಬ್ ಖಾನ್ ಉತ್ತಮ ಸಂಘಟಕರಾಗಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಜಾಗತಿಕ ಮಟ್ಟದಲ್ಲಿ ದಸರಾ ವಸ್ತುಪ್ರದರ್ಶನ ಮಳಿಗೆಯನ್ನು ಉನ್ನತೀಕರಿಸುವ ಮೂಲಕ ಅಯೂಬ್ ಖಾನ್ ಹೊಸ ಭಾಷ್ಯ ಬರೆಯಲಿ ಎಂದು ಹಾರೈಸಿದರಲ್ಲದೆ ಮೈಸೂರಿನ ಪ್ರಜ್ಞಾವಂತ ನಾಗರಿಕರು ಮತ್ತು ಪ್ರವಾಸಿಗರು ಮೈಸೂರು ನಗರವನ್ನು ಸ್ವಚ್ಛವಾಗಿಡಲು ಶ್ರಮಿಸಬೇಕು ಮನವಿ ಮಾಡಿದರು.

ಮಾಜಿ ಮೇಯರ್‌ಗಳಾದ ಮೋದಾಮಣಿ, ಪುಷ್ಪಲತಾ ಚಿಕ್ಕಣ್ಣ, ಮಾಜಿ ಸದಸ್ಯರಾದ ಸೈಯದ್ ಹಜರತ್ ಉಲ್ಲಾ, ಶೌಕತ್ ಪಾಷಾ, ಕೆವಿ.ಮಲ್ಲೇಶ್, ರಘುರಾಜೇ ಅರಸ್, ಫೈರೋಜ್ ಖಾನ್, ಹಿಂದುಳಿದ ವರ್ಗಗಳ ಕಾಂಗ್ರೆಸ್ ಸಮಿತಿ ನಗರಾಧ್ಯಕ್ಷ ಎನ್.ಆರ್. ನಾಗೇಶ್, ಎಸ್.ಸಿ ಘಟಕದ ಅಧ್ಯಕ್ಷ ರಮೇಶ್, ಅಲ್ಪಸಂಖ್ಯಾತರ ಘಟಕದ ಕೈಸರ್ ಅಹಮದ್, ಕೆಪಿಸಿಸಿ ಸಂಯೋಜಕ ಸೌಕತ್ ಆಲಿಖಾನ್, ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ, ರಾಕೇಶ್ ಕುಮಾರ್, ಡೈರಿ ವೆಂಕಟೇಶ್ ಸೈಯದ್ ಫಾರೂಕ್ ಮತ್ತಿತರರಿದ್ದರು.

ಪ್ರವಾಸೋದ್ಯಮ ಕೇಂದ್ರವಾಗಿ ಅಭಿವೃದ್ಧಿ...


ಮೈಸೂರು ದಸರಾ ವಸ್ತುಪ್ರದರ್ಶನ ಆವರಣವನ್ನು ಪ್ರವಾಸೋದ್ಯಮ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಲಾಗುವುದು. ಸಂಜೆ ವೇಳೆ ಪ್ರವಾಸಿಗರನ್ನು ಸೆಳೆಯುವ ದೃಷ್ಟಿಯಿಂದ ಹತ್ತು–ಹಲವು ಯೋಜನೆಗಳನ್ನು ಕೈಗೊಳ್ಳುತ್ತಿದ್ದು, ಮ್ಯೂಸಿಕಲ್ ಫೌಂಟೇನ್, ಬೇಲೂರು–ಹಳೇಬೀಡು ಶೈಲಿಯಲ್ಲಿ 153 ವಾಣಿಜ್ಯ ಮಳಿಗೆಗಳ ನಿರ್ಮಾಣ, ಡ್ರ್ಯಾಗನ್ ಬೋಟಿಂಗ್ ಸೇರಿದಂತೆ ಅನೇಕ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳುವ ಮೂಲಕ ಪ್ರವಾಸಿಗರ ತಾಣವನ್ನಾಗಿಸಲಾಗುವುದು.

- ಅಯೂಬ್ ಖಾನ್, ಅಧ್ಯಕ್ಷ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ

ಎರಡು ದಿನಗಳ ನಮ್ಮ ಬಸವ ಜಯಂತಿ ಸಂಪನ್ನ

ಬಸವ ಭವನ ಕಾಮಗಾರಿ ಪೂರ್ಣಗೊಳಿಸಲು ಸಹಕಾರ ನೀಡುವೆ

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಭರವಸೆ



ಮೈಸೂರಿನ ಕಲಾಮಂದಿರದಲ್ಲಿ ಭಾನುವಾರ ನಡೆದ ಬಸವ ಜಯಂತಿ ಸಮಾರೋಪ ಸಮಾರಂಭದಲ್ಲಿ ಬಸವಣ್ಣನವರ ಕುರಿತ ಕೃತಿಗಳನ್ನು ಬಿಡುಗಡೆ ಮಾಡಲಾಯಿತು.

ಮೈಸೂರು,ಮೇ 25(ಪಿಎಂ)– ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ಮೈಸೂರು ಜಿಲ್ಲಾ ಘಟಕದಿಂದ ಮೈಸೂರಿನ ಜೆಎಸ್‌ಎಸ್ ಬಡಾವಣೆ ಮೊದಲನೇ ಹಂತದ ಸಿಎ ನಿವೇಶನದಲ್ಲಿ ಬಸವ ಭವನ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸಲು ಅಗತ್ಯ ಸಹಕಾರ ನೀಡುತ್ತೇನೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಭರವಸೆ ನೀಡಿದರು.

ಮೈಸೂರಿನ ಕಲಾಮಂದಿರದಲ್ಲಿ ಬಸವ ಬಳಗಗಳ ಒಕ್ಕೂಟ, ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ (ಅಭಾವೀಲಿಂ ಮಹಾಸಭಾ), ವೀರಶೈವ–ಲಿಂಗಾಯತ ಸಂಘ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಎರಡು ದಿನಗಳು ನಡೆದ ನಮ್ಮ ಬಸವ ಜಯಂತಿ 2025ರ ಸಮಾರೋಪ ಸಮಾರಂಭದಲ್ಲಿ ಭಾನುವಾರ ಅವರು ಸಮಾರೋಪ ಭಾಷಣ ಮಾಡಿದರು.

ನಮ್ಮ ತಂದೆ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಮಹಾಸಭಾದವರು ಮೈಸೂರಿನಲ್ಲಿ ಬಸವ ಭವನ ಆಗಬೇಕೆಂದು ಅಪೇಕ್ಷೆಪಟ್ಟರು. ಹಾಗಾಗಿ ಸಾಕಷ್ಟು ಪ್ರಯತ್ನಿಸಿ ಈಗ ಭವನ ನಿರ್ಮಿಸುತ್ತಿರುವ ಸಿಎ ನಿವೇಶನ ಮಂಜೂರು ಮಾಡಿಸಲಾಯಿತು. ಭವನದ ವಿನ್ಯಾಸ ಸಿದ್ಧಪಡಿಸಲು ಮುಂದಾಳತ್ವ ವಹಿಸಿದ್ದೆ. 15 ಕೋಟಿ ಅಂದಾಜು ವೆಚ್ಚ ಸಿದ್ಧಪಡಿಸಿ, ಮಾಡೋಣವೆಂದು ನಾನು ಮುಂದಾದರೆ, ನಮ್ಮವರೇ ಕೆಲವರು ಅವರೇನು ದುಡ್ಡು ಕೊಡುವುದು ಎಂದು ಅಪಸ್ವರ ಎತ್ತಿದರು. ಅಲ್ಲದೆ, ನಾವೇ ಹಣ ಸಂಗ್ರಹ ಮಾಡುತ್ತೇವೆಂದು ಹೇಳಿದ್ದರು. ಈ ವಿಚಾರ ಎಷ್ಟೋ ದಿನಗಳ ನಂತರ ನನಗೆ ಗೊತ್ತಾಯಿತು. ಇದು ನಮ್ಮ ಸಮಾಜದ ವಾಸ್ತವದ ಪರಿಸ್ಥಿತಿ ಎಂದು ವಿಷಾದಿಸಿದರು.

ಯಾವ ರೀತಿ ಇತರೆ ಶಕ್ತಿಗಳು ಕೆಲಸ ಮಾಡುತ್ತವೆ ಎಂಬುದನ್ನು ತಿಳಿಸಲು ಇದನ್ನು ಹೇಳಬೇಕಾಯಿತು. ಈಶ್ವರ್ ಖಂಡ್ರೆಯವರೂ ಉಪಸ್ಥಿತರಿದ್ದು, ಧೈರ್ಯವಾಗಿ ಹೇಳುತ್ತಿದ್ದೇನೆ, ಆದಷ್ಟು ಶೀಘ್ರದಲ್ಲಿ ಭವನದ ಕಾಮಗಾರಿ ಸಂಪೂರ್ಣಗೊಳ್ಳಲಿದೆ. ಇದರಲ್ಲಿ ನಮ್ಮೆಲ್ಲರ ಜವಾಬ್ದಾರಿ ಇದೆ. ಭವನದ ಕಾಮಗಾರಿಗೆ ನೆರವು ಕೇಳಿದ ತಮ್ಮ ಅಪೇಕ್ಷೆಗೆ ನನ್ನ ಇತಿಮಿತಿಯೊಳಗೆ ಆದಷ್ಟು ಸಹಕಾರ ಕೊಡುತ್ತೇವೆ. ಅತೀ ಶೀಘ್ರದಲ್ಲಿ ಭವನ ಉದ್ಘಾಟನೆಯಾಗಲು ಎಲ್ಲರೂ ಸಹಕಾರ ನೀಡೋಣ. ಈಶ್ವರ ಖಂಡ್ರೆಯವರು ನಮ್ಮ ಸಮುದಾಯ ಕಣ್ಣಿನಂತೆ. ಅವರು ನಮ್ಮ ಸಮಾಜಕ್ಕೆ ಪ್ರೇರಣೆಯಾಗಿದ್ದಾರೆ ಎಂದರು.

ನಮ್ಮ ತಂದೆ ಯಡಿಯೂರಪ್ಪನವರು ಮುಖ್ಯಮಂತ್ರಿ ಆಗಿದ್ದಾಗ ಮಲೆ ಮಹದೇಶ್ವರ ಬೆಟ್ಟದಲ್ಲಿ ಸರ್ವತೋಮುಖ ಅಭಿವೃದ್ಧಿ ಆಗಬೇಕೆಂದು 158 ಕೋಟಿ ರೂ. ಮಂಜೂರು ಮಾಡಿದರು. ಇಂದಿಗೂ ಕೂಡ ಆ ಅಭಿವೃದ್ಧಿ ಕೆಲಸಗಳು ನಡೆಯುತ್ತಿವೆ. ಸದ್ಯದಲ್ಲಿ ಇಂದಿನ ಮುಖ್ಯಮಂತ್ರಿಗಳ ಅವುಗಳ ಉದ್ಘಾಟನೆ ಮಾಡುತ್ತಾರೆ. ಅಭಿವೃದ್ಧಿ ವಿಚಾರದಲ್ಲಿ ಯುಡಿ ಯೂಪ್ಪನವರಿಗೆ ಯಡಿಯೂರಪ್ಪನವರೇ ಸಾಟಿ ಎಂದು ತಿಳಿಸಿದರು.

ಬಸವಾದಿ ಶರಣರ ಆಶಯದಂತೆ ಇಂದಿಗೂ ನಮ್ಮ ಮಠಮಾನ್ಯಗಳು ಸರ್ಕಾರಿಕ್ಕೆ ಸರಿಸಮಾನವಾಗಿ ಅಥವಾ ಅದಕ್ಕೂ ಮಿಗಿಲಾಗಿ ಎಲ್ಲಾ ಸಮುದಾಯಗಳಿಗೂ ಅನ್ನ–ಅಕ್ಷರ ದಾಸೋಹ ನೀಡುತ್ತಿವೆ. ಇದು ನಮ್ಮ ಸಮುದಾಯದ ಹೆಮ್ಮೆ ಎಂದರು.

ಇದಕ್ಕೂ ಮುನ್ನ ಜೆಎಸ್‌ಎಸ್ ಬಡಾವಣೆಯ ಸಿಎ ನಿವೇಶನದಲ್ಲಿ 15 ಕೋಟಿ ರೂ. ಅಂದಾಜು ವೆಚ್ಚದಲ್ಲಿ ನಿರ್ಮಿಸುತ್ತಿರುವ ಬಸವ ಭವನ ಕಾಮಗಾರಿಗೆ ನೆರವು ನೀಡಬೇಕೆಂದು ವಿಜಯೇಂದ್ರ ಅವರಿಗೆ ಮಹಾಸಭಾದ ಮೈಸೂರು ಜಿಲ್ಲಾ ಘಟಕದ ಅಧ್ಯಕ್ಷ ಹೆಚ್.ವಿ.ಬಸವರಾಜು ಮನವಿ ಸಲ್ಲಿಸಿದರು.

ಇದೇ ವೇಳೆ 'ಸಾಂಸ್ಕೃತಿಕ ನಾಯಕ ಜಗಜ್ಯೋತಿ ಬಸವೇಶ್ವರರು' ಹಾಗೂ 'ಶ್ರೀಸಾಮಾನ್ಯರಿಗಾಗಿ ಬಸವ ಸಂದೇಶ' ಕೃತಿಗಳನ್ನು ಮಲೆ ಮಹದೇಶ್ವರ ಬೆಟ್ಟದ ಸಾಲೂರು ಬೃಹನ್ಮಠದ ಡಾ.ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಬಿಡುಗಡೆ ಮಾಡಿದರು. ಕನಕಪುರ ದೇಗುಲ ಮಠದ ಶ್ರೀ ಚನ್ನಬಸವ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಅರಣ್ಯ ಮತ್ತು ಪರಿಸರ ಸಚಿವರೂ ಆದ ಅಭಾವೀಲಿಂ ಮಹಾಸಭಾದ ರಾಷ್ಟ್ರೀಯ ಮಹಾ ಪ್ರಧಾನ ಕಾರ್ಯದರ್ಶಿ ಬಿ.ಈಶ್ವರ ಖಂಡ್ರೆ ಅಧ್ಯಕ್ಷತೆ ವಹಿಸಿದ್ದರು. ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಟಿ.ಎಸ್.ಶ್ರೀವತ್ಸ ಮತ್ತಿತರರು ಹಾಜರಿದ್ದರು.

ಬಸವಣ್ಣನವರು ಕಾಯಕವೇ ಕೈಲಾಸವೆಂದು ಹೇಳಿದರು. ಆದರೆ ಇಂದು ಸರ್ಕಾರದ ಯೋಜನೆ ಕಾರಣಕ್ಕೆ ತಿಂಗಳ ಕೊನೆಯಲ್ಲಿ ಹಣ ಬರುತ್ತದೆ ಎಂದು ಕಾದು ಕುಳಿತುಕೊಳ್ಳುವುದೇ ಕೈಲಾಸ ಎನ್ನುವಂತಾಗಿದೆ ಎಂದು ಶಾಸಕ ಬಿ.ವೈ.ವಿಜಯೇಂದ್ರ ಹೇಳಿದರು. ಕಲಾಮಂದಿರದಲ್ಲಿ ಭಾನುವಾರ ನಡೆದ ಬಸವ ಜಯಂತಿ ಸಮಾರೋಪ ಸಮಾರಂಭದಲ್ಲಿ ಹೀಗೆ ಹೇಳಿದ ಅವರು, ದಯವಿಟ್ಟು ಈಶ್ವರ ಖಂಡ್ರೆಯವರು (ವೇದಿಕೆಯಲ್ಲಿ ಉಪಸ್ಥಿತ ರಿದ್ದರು) ಅನ್ಯತಾ ಭಾವಿಸಬಾರದು, ಜನ ಏನು ಮಾತನಾಡುತ್ತಿದ್ದಾರೆ ಎಂಬುದನ್ನು ತಿಳಿಸುವ ಪ್ರಯತ್ನ ಮಾಡುತ್ತಿದ್ದೇನೆ. ಯಾವುದೇ ರಾಜಕಾರಣ ಮಾತನಾಡುತ್ತಿಲ್ಲ ಎಂದರು.

ಬಸವ ಭವನಕ್ಕೆ ಮಹಾಸಭಾದಿಂದ 50 ಲಕ್ಷ ಶೀಘ್ರ ಬಿಡುಗಡೆ



ಮೈಸೂರು,ಮೇ 25(ಪಿಎಂ)– ಇಂದಿನ ಎಲ್ಲಾ ಸವಾಲು–ಸಂಕಷ್ಟಗಳಿಗೆ ಬಸವಣ್ಣನವರ ತತ್ವಾದರ್ಶಗಳಲ್ಲಿ ಪರಿಹಾರವಿದೆ ಎಂದು ತಿಳಿಸಿದ ಅರಣ್ಯ ಮತ್ತು ಪರಿಸರ ಸಚಿವರೂ ಆದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಮಹಾ ಪ್ರಧಾನ ಕಾರ್ಯದರ್ಶಿ ಬಿ.ಈಶ್ವರ ಖಂಡ್ರೆ, ಮೈಸೂರಿನ ಜೆಎಸ್‌ಎಸ್ ಬಡಾವಣೆಯಲ್ಲಿ ನಿರ್ಮಿಸುತ್ತಿರುವ ಬಸವ ಭವನಕ್ಕೆ ಮಹಾಸಭಾದಿಂದ 50 ಲಕ್ಷ ರೂ. ಅನ್ನು ಶೀಘ್ರವೇ ಬಿಡುಗಡೆ ಮಾಡುವುದಾಗಿ ಪ್ರಕಟಿಸಿದರು.

ಬಸವ ಜಯಂತಿಯ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಭಾನುವಾರ ಮಾತನಾಡಿದ ಅವರು, ನಮ್ಮ ಸಮುದಾಯ ಸಣ್ಣಪುಟ್ಟ ಭಿನ್ನಾಭಿಪ್ರಾಯ ಬದಿಗೊತ್ತಿ ಸಂಘಟಿತವಾಗಬೇಕು. ಬಸವ ಭವನ ಕಾಮಗಾರಿ ಪ್ರಾರಂಭವಾಗಿದೆ. ದೊಡ್ಡ ಮಟ್ಟದಲ್ಲಿ ಅನುದಾನ ಇದಕ್ಕೆ ಅಗತ್ಯವಾಗುತ್ತದೆ. ಮಹಾಸಭಾದದಿಂದ 50 ಲಕ್ಷ ರೂ. ಶೀಘ್ರದಲ್ಲಿ ಬಿಡುಗಡೆ ಮಾಡಲಾಗುವುದು. ಅಲ್ಲದೆ, ಸ್ಥಳೀಯ ಜನಪ್ರತಿನಿಧಿಗಳ ಜೊತೆಯಲ್ಲಿ ಮುಖ್ಯಮಂತ್ರಿಗಳ ಬಳಿ ಹೋಗಿ ಹೆಚ್ಚಿನ ಅನುದಾನವನ್ನು ಮಂಜೂರು ಮಾಡಿಸುವುದಲ್ಲದೆ, ವೈಯಕ್ತಿಕವಾಗಿಯೂ ಆರ್ಥಿಕ ನೆರವು ನೀಡುತ್ತೇನೆ. ಭವ್ಯವಾದ ಬಸವ ಭವನ ನಿರ್ಮಾಣಕ್ಕೆ ನನ್ನ ಸಂಪೂರ್ಣ ಸಹಕಾರ, ಬೆಂಬಲ ಇದೆ ಎಂದು ಹೇಳಿದರು.

ನಮ್ಮ ಸಮಾಜ ಎಲ್ಲರನ್ನು ಅಪ್ಪಿಕೊಂಡು ಒಪ್ಪಿಕೊಂಡ ಸಮುದಾಯ. ಅಂತಹ ಸಮುದಾಯ ಇಂದು ಕಾವಲು ದಾರಿಯಲ್ಲಿ ಸಾಗುತ್ತಿದ್ದು, ಬೇರೆ ಯಾವರಿಗೆ ತೊಂದರೆಯಾಗದಂತೆ ಸಂಘಟಿತರಾಗಬೇಕು. ಬಡ–ಹಿಂದುಳಿದ ಸಮುದಾಯಗಳನ್ನು ಜೊತೆಯಲ್ಲಿ ತೆಗೆದುಕೊಂಡು ಹೋಗುವ ಶಕ್ತಿ ನಮ್ಮ ಸಮುದಾಯಕ್ಕಿದೆ. ಸಮಾಜ ಮತ್ತು ರಾಜ್ಯದ ಒಳಿತಿಗಾಗಿ ನಾವೆಲ್ಲರೂ ಒಗ್ಗೂಡೋಣ. ಇಂದು ಶಾಂತಿ, ಸಮಾಧಾನ ನೆಮ್ಮದಿ ಎಲ್ಲರಿಗೂ ಬೇಕಿದ್ದು, ಬಸವ ತತ್ವದಲ್ಲಿ ಈ ಎಲ್ಲವೂ ಇದೆ ಎಂದರು. ಧರ್ಮ–ಜಾತಿ ಹೆಸರಿನಲ್ಲಿ ಇಂದು ಭಯದ ವಾತಾವರಣ ಸೃಷ್ಟಿಸಲಾಗಿದೆ. ಭಾವನಾತ್ಮಕ ವಿಚಾರಗಳನ್ನು ಕೆರಳಿಸಿ ದ್ವೇಷ ಸೃಷ್ಟಿಸಲಾಗುತ್ತಿದೆ. ಬಸವಣ್ಣನವರ ತತ್ವಾದರ್ಶನದಲ್ಲಿ ಇದೆಕ್ಕೆಲ್ಲವೂ ಪರಿಹಾರವಿದೆ ಎಂದು ತಿಳಿಸಿದರು.

ಮಲೆ ಮಹದೇಶ್ವರ ಬೆಟ್ಟದ ಸಾಲೂರು ಮಠದ ಪೀಠಾಧ್ಯಕ್ಷರ ಮನವಿಗೆ ಸರ್ಕಾರ ಸ್ಪಂದಿಸಿದ್ದು, ಬೆಟ್ಟದಲ್ಲಿ ಸ್ಮೃತಿವನ ನಿರ್ಮಾಣಕ್ಕಾಗಿ 1 ಕೋಟಿ ರೂ. ಅನುದಾನ ಮಂಜೂರು ಮಾಡಲಾಗಿದೆ. ಶೀಘ್ರವೇ ಕಾಮಗಾರಿ ಆರಂಭಿಸಲಾಗುವುದು. ಹಣಕಾಸು ಸಚಿವರೂ ಆದ ಸಿಎಂ ಸಿದ್ದರಾಮಯ್ಯನವರು, ಆಧುನಿಕ ಅನುಭವ ಮಂಟಪ ನಿರ್ಮಾಣಕ್ಕೆ 120 ಕೋಟಿ ರೂ. ನೀಡಿದ್ದು, ಇನ್ನೂ 400 ಕೋಟಿ ರೂ. ವೆಚ್ಚದೊಂದಿಗೆ ಮುಂದಿನ ವರ್ಷದೊಳಗೆ ಅನುಭವ ಮಂಟಪ ಪೂರ್ಣಗೊಳಿಸುವುದು ನಮ್ಮ ಗುರಿಯಾಗಿದೆ. -ಈಶ್ವರ ಖಂಡ್ರೆ, ಸಚಿವರು.

ಅಂಬೇಡ್ಕರ್ ಕೊಟ್ಟ ಸಂವಿಧಾನ ದೇಶದ ಪ್ರತಿಯೊಬ್ಬ ಪ್ರಜೆಗೂ ದಾರಿದೀಪ

ಶಾಸಕ ಜಿ.ಟಿ.ದೇವೇಗೌಡ ಅಭಿಮತ



ಮೈಸೂರಿನ ಆಲನಹಳ್ಳಿಯಲ್ಲಿ ನೂತನವಾಗಿ ನಿರ್ಮಿಸಿರುವ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನವನ್ನು ಬಂತೇಜಿ ಬೋಧಿರತ್ನ ಅವರ ಸಾನಿಧ್ಯದಲ್ಲಿ ಶಾಸಕ ಜಿ.ಟಿ.ದೇವೇಗೌಡರು ಉದ್ಘಾಟಿಸಿದರು.

ಮೈಸೂರು, ಮೇ 25– ಸಾಮಾಜಿಕ ನ್ಯಾಯ, ಸಮಾನತೆಗೆ ಶ್ರಮಿಸಿದ ಮಹನೀಯರು ಒಂದು ಜಾತಿಗೆ ಸೀಮಿತರಲ್ಲ. ಹಾಗೆಯೇ ಡಾ.ಬಿ.ಆರ್.ಅಂಬೇಡ್ಕರ್ ಅವರು ನೀಡಿದ ಸಂವಿಧಾನ ದೇಶದ ಪ್ರತಿಯೊಬ್ಬ ಪ್ರಜೆಗೂ ದಾರಿದೀಪ ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಹೇಳಿದರು.

ಮೈಸೂರಿನ ಆಲನಹಳ್ಳಿಯಲ್ಲಿ ನೂತನವಾಗಿ ನಿರ್ಮಿಸಿರುವ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನ ಲೋಕಾರ್ಪಣೆ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಅವರ 134ನೇ ಜನ್ಮ ಜಯಂತ್ಯೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಅಂಬೇಡ್ಕರ್ ಅವರ ಹೆಸರಿನಲ್ಲಿ ನಿರ್ಮಿಸಿರುವ ಈ ಭವನ ಜ್ಞಾನ ಕೇಂದ್ರವಾಗಬೇಕು. ಅಕ್ಷರ ಇಲ್ಲದವರಿಗೆ ವಿದ್ಯೆ ಕಲಿಸುವ ಶಾಲೆಯಾಗಬೇಕು ಎಂದು ಸಲಹೆ ನೀಡಿದರು.

ಡಾ.ಅಂಬೇಡ್ಕರ್ ದಲಿತರಿಗೆ, ಬಸವಣ್ಣ ಲಿಂಗಾಯತರಿಗೆ, ಕುವೆಂಪು ಒಕ್ಕಲಿಗರಿಗೆ ಮಾತ್ರ ಸೀಮಿತರಲ್ಲ. ಸಾಮಾಜಿಕ ಬದಲಾವಣೆಯ ಹರಿಕಾರರಾದ ಇವರನ್ನು ಎಲ್ಲರೂ ಪೂಜಿಸಿ, ಇವರ ಕೊಡುಗೆಗಳನ್ನು ಸ್ಮರಿಸಿಕೊಳ್ಳಬೇಕು. ಅಂಬೇಡ್ಕರ್ ಅವರು ರಾಜಕೀಯ, ಅರ್ಥಶಾಸ್ತ್ರ, ನ್ಯಾಯಶಾಸ್ತ್ರದ ತಜ್ಞರಾಗಿದ್ದರು. ಸ್ವಾತಂತ್ರ್ಯ ಬಂದು 75 ವರ್ಷಗಳ ನಂತರ ಅವರ ಪರಿಶ್ರಮ ಮತ್ತು ಸಂವಿಧಾನದ ಮಹತ್ವ ಅರಿವಾಗುತ್ತಿದೆ ಎಂದು ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಸಂಸತ್ ಪ್ರವೇಶಿಸುವ ಮುನ್ನ ಸಂವಿಧಾನಕ್ಕೆ ಪೂಜೆ ಸಲ್ಲಿಸಿದರು. ರಾಜ್ಯ ಸರ್ಕಾರ ಸಂವಿಧಾನ ಪೀಠಿಕೆ ಓದುವ ಕಾರ್ಯಕ್ರಮದ ಮೂಲಕ ಸಂವಿಧಾನದ ಮಹತ್ವ ಸಾರುತ್ತಿರುವುದು ಶ್ಲಾಘನೀಯ. ಚಹಾ ಮಾರುತ್ತಿದ್ದ ನರೇಂದ್ರ ಮೋದಿ ಪ್ರಧಾನಿಯಾಗಲು, ಸಿದ್ದರಾಮನಹುಂಡಿ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಲು, ವ್ಯವಸಾಯ ಮಾಡುತ್ತಿದ್ದ ಜಿ.ಟಿ.ದೇವೇಗೌಡ ಶಾಸಕನಾಗಲು ಅಂಬೇಡ್ಕರ್ ಅವರ ಸಂವಿಧಾನವೇ ಕಾರಣ ಎಂದರು.

ಎಲ್ಲರಿಗೂ ಶಿಕ್ಷಣ, ಸಾಮಾಜಿಕ ಸಮಾನತೆ ದೊರಕಿಸುವಲ್ಲಿ ಜವಾಬ್ದಾರಿ ಆಡಳಿತ ನಡೆಸುವವರಿಗೂ ಇರಬೇಕು. ಅಧಿಕಾರ ಸಿಕ್ಕಾಗ ಜನರ ಪರವಾಗಿ ಕೆಲಸ ಮಾಡುವ ಉದ್ದೇಶ ಹೊಂದಿಲ್ಲವಾದರೆ ಸಂವಿಧಾನದ ಆಶಯ ಈಡೇರುವುದಿಲ್ಲ. ಅಧಿಕಾರಿಗಳು, ವಿದ್ಯಾವಂತರು, ರಾಜಕಾರಣಿಗಳು ಬರೀ ಭಾಷಣಕ್ಕೆ ಸೀಮಿತವಾಗಬಾರದು. ಅಂಬೇಡ್ಕರ್ ಅವರು ಹೇಳಿದಂತೆ ಶಿಕ್ಷಣದಿಂದಲೇ ಸಮಾನತೆ ಸಾಧ್ಯ. ಹಗಲಿರುಳು ಅಧ್ಯಯನ ಮಾಡಿ ಸಂವಿಧಾನ ರಚಿಸಿದರು. ಆ ವೇಳೆ ಜೀವನದಲ್ಲಿ ತಾವು ಅನುಭವಿಸಿದ ಸಂಕಷ್ಟವನ್ನು ನೆನೆದು ಯಾರನ್ನೂ ದ್ವೇಷಿಸಲಿಲ್ಲ. ಆದ್ದರಿಂದಲೇ ಸಂವಿಧಾನ ಎಲ್ಲಾ ವರ್ಗಗಳಿಗೂ ಅವಕಾಶ ಕಲ್ಪಿಸಿದೆ ಎಂದು ನುಡಿದರು.

ಬೇಡಿಕೆ ಈಡೇರಿಸುವ ಭರವಸೆ: ಆಲನಹಳ್ಳಿ ಗ್ರಾಮದ ಬಳಿ ಎರಡೂವರೆ ಎಕರೆ ಜಮೀನು ಇದೆ ಎಂದು ತಿಳಿಸಿದ್ದೀರಿ. ಅದು ಸರ್ಕಾರಕ್ಕೆ ಸೇರಿದ ಕಂದಾಯ ಭೂಮಿಯಾಗಿದ್ದರೆ ಮಂಜೂರು ಮಾಡಿಸಲು ಪ್ರಯತ್ನಿಸುತ್ತೇನೆ. ಶೀಘ್ರದಲ್ಲೇ ಅನುದಾನ ಬಿಡುಗಡೆ ಮಾಡಿಸಿ, ಚರಂಡಿ ಕಾಮಗಾರಿ ಆರಂಭಿಸಲಾಗುವುದು. ಜ್ಯೋತಿಬಾ ಫುಲೆ ವೃತ್ತ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ನಿರ್ಮಾಣಕ್ಕೆ ಕ್ರಮವಹಿಸಲಾಗುವುದು ಎಂದು ಇದೇ ವೇಳೆ ಭರವಸೆ ನೀಡಿದರು.

ನಳಂದ ಬುದ್ಧ ವಿಹಾರದ ಬಂತೇಜಿ ಬೋಧಿರತ್ನ ಅವರ ಸಾನಿಧ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯ ಮಾದೇಗೌಡ, ಕರುನಾಡ ಸೇವಾ ಸೇನೆ ಅಧ್ಯಕ್ಷ ಗಣೇಶ್, ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ರವಿ, ಗ್ರಾಪಂ ಮಾಜಿ ಸದಸ್ಯ ಎಲ್.ಮಹದೇವಸ್ವಾಮಿ, ನಾಡನಹಳ್ಳಿ ಮಧುಸೂದನ್, ಮುಖಂಡರಾದ ಶಿವಪ್ರಾದು, ಕುಮಾರ್, ನಂಜಪ್ಪ, ಉಮೇಶ್, ವೆಂಕಟೇಶ್, ಶೇಖರ್, ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.

ಅಂಕಣಕಾರ ಜಿ.ಎಲ್.ತ್ರಿಪುರಾಂತಕ ಅವರ 'ಅಂತರಂಗದ ಬೆಳಕು' ಕೃತಿ ಬಿಡುಗಡೆ



ಮೈಸೂರು, ಮೇ.25– 'ಮೈಸೂರು ಮಿತ್ರ' ಅಂಕಣಕಾರ ಜಿ.ಎಲ್.ತ್ರಿಪುರಾಂತಕ ಅವರ 'ಲಹರಿ' ಅಂಕಣದ ಆಯ್ದ 30 ಲೇಖನಗಳ 'ಅಂತರಂಗದ ಬೆಳಕು' ಕೃತಿಯು ಪ್ರಕಾಶ್ ಚಿಕ್ಕಪಾಳ್ಯ ಅವರ 'ವಿಸ್ಮಯ 25 ಬೆಳ್ಳಿಬೆರಗು' ಕಾರ್ಯಕ್ರಮದಲ್ಲಿ ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದ ಘಟಿಕೋತ್ಸವ ಭವನದಲ್ಲಿ ಬಿಡುಗಡೆಗೊಂಡಿತು.


ಪ್ರಜಾವಾಣಿಯ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಪುಸ್ತಕ ಬಿಡುಗಡೆ ಮಾಡಿದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಹಾಗೂ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

ಸಾಮಾಜಿಕ ಕಳಕಳಿ, ವ್ಯಕ್ತಿತ್ವ ವಿಕಸನ, ಜೀವನ್ಮುಖಿ ಲೇಖನಗಳನ್ನೊಳಗೊಂಡ ಈ ಕೃತಿಗೆ 'ಮೈಸೂರು ಮಿತ್ರ' ಪತ್ರಿಕೆಯ ಪ್ರಧಾನ ಸಂಪಾದಕರಾದ ಕೆ.ಬಿ.ಗಣಪತಿಯವರ ಮುನ್ನುಡಿ ಬರೆದಿದ್ದಾರೆ.

ಕಳೆದ 10 ವರ್ಷಗಳಿಂದ 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ಅಂಕಣಕಾರರಾಗಿರುವ ಜಿ.ಎಲ್.ತ್ರಿಪುರಾಂತಕ ಅವರ ಮೈತ್ರಿ, ಲಹರಿ, ಸುಪ್ರಭ, ಬೆರಗು ಹಾಗೂ ಅರಿವು ಅಂಕಣಗಳಲ್ಲಿ 300ಕ್ಕೂ ಹೆಚ್ಚು ಇವರ ಲೇಖನಗಳು ಪ್ರಕಟವಾಗಿವೆ.

ಪ್ರತಿಯೊಬ್ಬ ಭಾರತೀಯನ ಸಂಕಲ್ಪ ಭಯೋತ್ಪಾದನೆ ನಿರ್ಮೂಲನೆ

'ಮನ್ ಕಿ ಬಾತ್'ನಲ್ಲಿ ಪ್ರಧಾನಿ ಮೋದಿ



ನವದೆಹಲಿ, ಮೇ.25– 'ಆಪರೇಷನ್ ಸಿಂದೂರ್' ನಂತರ ಮೊದಲ ಬಾರಿಗೆ ಪ್ರಧಾನಿ ನರೇಂದ್ರ ಮೋದಿ ಭಾನುವಾರ ತಮ್ಮ ಮಾಸಿಕ ರೇಡಿಯೋ ಕಾರ್ಯಕ್ರಮ 122ನೇ ಮನ್ ಕಿ ಬಾತ್ ಮೂಲಕ ರಾಷ್ಟ್ರವನ್ನುದ್ದೇಶಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಪಾಕಿಸ್ತಾನ ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ ಭಾರತೀಯ ಸಶಸ್ತ್ರ ಪಡೆಗಳಿಂದ ನಾಶವಾದ ಭಯೋತ್ಪಾದಕ ತಾಣಗಳ ಚಿತ್ರಗಳನ್ನು ತೋರಿಸಿದರು.

ಏಪ್ರಿಲ್ 22 ರ ಮಾರಕ ಪಹಲ್ಗಾಮ್ ದಾಳಿಗೆ ಗಡಿಯಾಚೆಗಿನ ಸಂಪರ್ಕವನ್ನು ಕಂಡುಕೊಂಡ ನಂತರ, ಭಾರತವು ಮೇ 7 ರಂದು ಆಪರೇಷನ್ ಸಿಂದೂರ್ ಅನ್ನು ಪ್ರಾರಂಭಿಸಿತು. ಲಷ್ಕರ್–ಎ–ತೈಬಾ, ಜೈಶ್–ಎ–ಮೊಹಮ್ಮದ್ ಮತ್ತು ಹಿಜ್ಬುಲ್ ಮುಜಾಹಿದ್ದೀನ್‌ನಂತಹ ಭಯೋತ್ಪಾದಕ ಗುಂಪುಗಳ ಬಹು ಶಿಬಿರಗಳನ್ನು ನಾಶಪಡಿಸಿತು. ಸಿಂದೂರ್ ಎಂಬ ಹಿಂದಿ ಪದವು "ಸಿಂಧೂರ್" ಆಗಿದ್ದು, ಹಿಂದೂ ಮಹಿಳೆಯರು ಮದುವೆಯ ಸಂಕೇತವಾಗಿ ಹಣೆಯ ಮೇಲೆ ಹಾಕಿಕೊಳ್ಳುವ ಕುಂಕುಮವಾಗಿದೆ.

ರಾತ್ರಿಯಿಡೀ ನಡೆದ ದಾಳಿಯಲ್ಲಿ, ಭಾರತೀಯ ಸಶಸ್ತ್ರ ಪಡೆಗಳು ಪಾಕಿಸ್ತಾನದ ನಾಲ್ಕು ಭಯೋತ್ಪಾದಕ ಶಿಬಿರಗಳು ಮತ್ತು ಪಿಒಕೆಯಲ್ಲಿ ಐದು ಶಿಬಿರಗಳ ಮೇಲೆ ಕ್ಷಿಪಣಿ ದಾಳಿಗಳನ್ನು ನಡೆಸಿದವು. ಆಪರೇಷನ್ ಸಿಂದೂರ್ ಭಯೋತ್ಪಾದನೆಯ ವಿರುದ್ಧ ಜಾಗತಿಕ ಹೋರಾಟಕ್ಕೆ ಹೊಸ ವಿಶ್ವಾಸ ಮತ್ತು ಶಕ್ತಿಯನ್ನು ತುಂಬಿದೆ ಎಂದು ಪ್ರಧಾನಿ ಮೋದಿ ಹೇಳಿದರು.

ಮೈಸೂರಲ್ಲಿ ದಿನವಿಡೀ ವರುಣನ ಆರ್ಭಟ

● ಜನ ಜೀವನ ಅಸ್ತವ್ಯಸ್ತ ● ಪ್ರವಾಸಿಗರಿಗೆ ನಿರಾಸೆ ● ಧರೆಗುರುಳಿದ ಮರ, ವಿದ್ಯುತ್ ಕಂಬಗಳು ● ಹಲವೆಡೆ ಯುಜಿಡಿ ಬ್ಲಾಕ್



ಮೈಸೂರು, ಮೇ 25(ಎಂಕೆ)– ಹವಾಮಾನ ಇಲಾಖೆ ಮುನ್ಸೂಚನೆಯಂತೆ ನೈರುತ್ಯ ಮಾನ್ಸೂನ್ ಕೇರಳಕ್ಕೆ ಪ್ರವೇಶವಾಗಿದ್ದು, ಇದರ ಬೆನ್ನಲ್ಲೇ ಮೈಸೂರು ಸೇರಿದಂತೆ ರಾಜ್ಯದ ಹಲವು ಭಾಗದಲ್ಲಿ ಧಾರಾಕಾರ ಮಳೆ ಆಗುತ್ತಿದೆ.

ಮುಂದಿನ ಮೂರು(ಮೇ 28ರವರೆಗೆ) ದಿನಗಳವರೆಗೆ ಕೊಡಗು, ದಕ್ಷಿಣ ಕನ್ನಡ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ರೆಡ್ ಅಲರ್ಟ್ ಘೋಷಣೆಯಾಗಿದ್ದರೆ, ಮೈಸೂರು, ಹಾಸನ ಹಾಗೂ ಚಾಮರಾಜನಗರದಲ್ಲಿ ಯಲ್ಲೋ ಅಲರ್ಟ್ ಘೋಷಣೆ ಮಾಡಲಾಗಿದೆ.

ಸಾಂಸ್ಕೃತಿಕ ನಗರಿ ಮೈಸೂರು ಸೇರಿದಂತೆ ಜಿಲ್ಲೆಯಾದ್ಯಂತ ದಿನವಿಡೀ ಧಾರಾಕಾರ ಮಳೆಯಾಗಿದ್ದು, ಭಾನುವಾರ ಸುರಿದ ಭಾರೀ ಮಳೆಗೆ ಹಲವೆಡೆ ಮರಗಳು, ವಿದ್ಯುತ್ ಕಂಬಗಳು ಧರೆಗುರುಳಿದರೆ, ಕೆಲವೆಡೆ ಟ್ರಾನ್ಸ್‌ಫಾರ್ಮರ್‌ಗಳು ಶಾರ್ಟ್ ಸರ್ಕ್ಯೂಟ್‌ನಿಂದ ಹಾನಿಯಾಗಿವೆ. ನಗರದ ಪ್ರಮುಖ ಬಡಾವಣೆಗಳಲ್ಲಿ ಯುಜಿಡಿ ಬ್ಲಾಕ್ ಆಗಿ ನಿವಾಸಿಗಳು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಬೆಳಗ್ಗೆಯಿಂದ ಮೋಡಕವಿದ ವಾತಾವರಣದ ಜೊತೆಗೆ ಅಲ್ಲಲ್ಲಿ ಸಾಧಾರಣವಾಗಿ ಬೀಳುತ್ತಿದ್ದ ಮಳೆ, ಮಧ್ಯಾಹ್ನ 2 ಗಂಟೆಯ ನಂತರ ಜೋರಾಯಿತು. ತಡರಾತ್ರಿವರೆಗೂ ಕೆಲಕಾಲ ಬಿಡುವ ನೀಡಿ ಮತ್ತೆ ಮತ್ತೆ ಸುರಿಯುತ್ತಿರುವ ಮಳೆಗೆ ಜನಜೀವನ ಅಸ್ತವ್ಯಸ್ತಗೊಂಡಿದ್ದು, ಪಾದಚಾರಿಗಳು, ವಾಹನ ಸವಾರರು, ರಸ್ತೆಬದಿ ವ್ಯಾಪಾರಿಗಳು ಪರದಾಡುವಂತಾಯಿತು.

ಮೈಸೂರು ನಗರದೆಲ್ಲೆಡೆ ಸುರಿದ ಮಳೆಗೆ ಸಂತೆಪೇಟೆಯ ಸಾರ್ವಜನಿಕ ಶೌಚಾಲಯ, ಶ್ರೀರಾಂಪುರ, ರಾಮಕೃಷ್ಣನಗರ, ಕಲ್ಯಾಣಗಿರಿಯ ಕಲ್ಯಾಣೇಶ್ವರ ದೇವಸ್ಥಾನದ ವ್ಯಾಪ್ತಿಯಲ್ಲಿ ಯುಜಿಡಿ ಬ್ಲಾಕ್ ಆಗಿ, ಮ್ಯಾನ್‌ಹೋಲ್‌ಗಳು ಉಕ್ಕಿ ಹರಿದವು. ಒಳಚರಂಡಿ ನೀರು ನಡುರಸ್ತೆಯಲ್ಲೇ ಹರಿಯುತ್ತಿದ್ದರಿಂದ ಪಾದಚಾರಿಗಳು ದುರ್ವಾಸನೆಗೆ ಮೂಗು ಮುಚ್ಚಿಕೊಂಡು ತಿರುಗಾಡುವ ಪರಿಸ್ಥಿತಿ ನಿರ್ಮಾಣವಾಗಿತ್ತು.

ಧರೆಗುರುಳಿದ ಮರಗಳು: ಕೆಆರ್‌ಎಸ್ ರಸ್ತೆ ಮಾರ್ಗದ ರಿಂಗ್ ರಸ್ತೆಯಲ್ಲಿರುವ ರಾಯಲ್ ಇನ್ ಜಂಕ್ಷನ್ ಬಳಿ, ಮೃಗಾಲಯದ ಸಮೀಪ, ಬಂಬೂಬಜಾರ್, ವಿಜಯನಗರ 2ನೇ ಹಂತ, ಕುರುಬಾರಹಳ್ಳಿ ವೃತ್ತ, ಅಶೋಕಪುರಂನ ಕೆಆರ್.ಮಿಲ್ ಬಡಾವಣೆಯಲ್ಲಿ ಬೃಹತ್ ಮರಗಳು ಧರೆಗುರುಳಿವೆ. ಪರಿಣಾಮ ಸಂಚಾರಕ್ಕೆ ತೀವ್ರ ತೊಂದರೆ ಉಂಟಾಗಿ ವಾಹನ ಸವಾರರು ಹೈರಾಣಾದರು.

ಮುರಿದು ಬಿದ್ದ ವಿದ್ಯುತ್ ಕಂಬಗಳು: ಭಾನುವಾರ ಸುರಿದ ಧಾರಾಕಾರ ಮಳೆಗೆ ಮೈಸೂರು ನಗರ ಸೇರಿದಂತೆ ಜಿಲ್ಲೆಯಾದ್ಯಂತ ಹಲವಡೆ 60ಕ್ಕೂ ಹೆಚ್ಚು ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ. ಸಿದ್ದಾರ್ಥನಗರದಲ್ಲಿ 1, ಕಡಕೋಳದ ಏಳಿಗೆ ಹುಂಡಿಯಲ್ಲಿ 3, ಸಿದ್ದಲಿಂಗಪುರದಲ್ಲಿ 4 ವಿದ್ಯುತ್ ಕಂಬ ಮುರಿದು ಬಿದ್ದಿದ್ದರೆ, 8 ವಿದ್ಯುತ್ ಕಂಬಗಳು ವಾಲಿಕೊಂಡಿವೆ. ಹಾಗೆಯೇ ನಂಜನಗೂಡಿನ ಕಾರ್ಯ ಗ್ರಾಮದಲ್ಲಿ 2, ಬೀರಿಹುಂಡಿಯಲ್ಲಿ 4, ಹೂಟಗಳ್ಳಿಯಲ್ಲಿ 3, ದೇವನೂರು ಗ್ರಾಮದಲ್ಲಿ 2, ಬನ್ನೂರು ಸಬ್ ಡಿವಿಷನ್ ವ್ಯಾಪ್ತಿಯ ತುಂಬಲ ಸೆಕ್ಷನ್‌ನಲ್ಲಿ 1, ಮಾದಿಗಹಳ್ಳಿ ಸೆಕ್ಷನ್‌ನಲ್ಲಿ 5, ಕಟ್ಟೆಪುರ ಸೆಕ್ಷನ್‌ನಲ್ಲಿ 2 ವಿದ್ಯುತ್ ಕಂಬಗಳು ನೆಲಕ್ಕುರುಳಿವೆ.

ಹುಣಸೂರು ಸಬ್ ಡಿವಿಷನ್‌ನಲ್ಲಿ 13, ಬಿಳಿಕೆರೆ ಸಬ್ ಡಿವಿಷನ್‌ನಲ್ಲಿ 4, ಸರಗೂರು ಸಬ್ ಡಿವಿಷನ್‌ನಲ್ಲಿ 4, ಕೆ.ಆರ್.ನಗರ ಸಬ್ ಡಿವಿಷನ್‌ನಲ್ಲಿ 9 ವಿದ್ಯುತ್ ಕಂಬಗಳು ಧರೆಗುರುಳಿದರೆ, ಹುಣಸೂರು ಸಬ್ ಡಿವಿಷನ್ ಹಾಗೂ ಆರ್‌ಕೆ ನಗರ ಸಬ್ ಡಿವಿಷನ್‌ನಲ್ಲಿ ಟ್ರಾನ್ಸ್‌ಫಾರ್ಮರ್‌ಗಳು ಹಾಳಾಗಿವೆ ಎಂದು ಚೆಸ್ಕಾಂ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಪ್ರವಾಸಿಗರಿಗೆ ನಿರಾಸೆ: ವಾರದ ರಜಾ ದಿನ ಹಿನ್ನೆಲೆಯಲ್ಲಿ ಮೈಸೂರಿಗೆ ಲಗ್ಗೆ ಇಟ್ಟಿದ್ದ ಪ್ರವಾಸಿಗರಿಗೆ ಭಾನುವಾರ ಸುರಿದ ಮಳೆ ನಿರಾಸೆ ಉಂಟುಮಾಡಿತು. ಇಡೀ ದಿನ ಸುರಿದ ಮಳೆಗೆ ನಗರದಲ್ಲೆಡೆ ಅಂಗಡಿ–ಮಗ್ಗಟ್ಟುಗಳು ಬಂದ್ ಆಗಿದ್ದವು. ಬಡಾವಣೆಗಳಲ್ಲಿ ಜನದಟ್ಟಣೆ ವಿರಳವಾಗಿತ್ತು. ದಸರಾ ವಸ್ತುಪ್ರದರ್ಶನ, ಮೃಗಾಲಯ, ಅರಮನೆ ಸೇರಿದಂತೆ ಪ್ರಮುಖ ಪ್ರವಾಸಿ ತಾಣಗಳು ಬಣಗುಡುತ್ತಿದ್ದವು. ದ್ವಿಚಕ್ರ ವಾಹನ ಸವಾರರು ಮಳೆಯಲ್ಲೆ ಸಾಗುತ್ತಿದ್ದ ದೃಶ್ಯಗಳು ಸಾಮಾನ್ಯವಾಗಿತ್ತು. ಬಕ್ರೀದ್ ಹಿನ್ನಲೆ ಮಿಲೇನಿಯಂ ಸರ್ಕಲ್‌ನಲ್ಲಿ ನಡೆಯುತ್ತಿರುವ ಕುರಿಗಳ ವ್ಯಾಪಾರ ಸಂಪೂರ್ಣವಾಗಿ ಸ್ತಬ್ದವಾಗಿತ್ತು.

ಎರಡು ದಿನ ಮುಂಚಿತವಾಗಿ ರಾಜ್ಯ ಪ್ರವೇಶ

ಹವಾಮಾನ ಇಲಾಖೆ ಮುನ್ಸೂಚನೆಯಂತೆ ಮೇ.27ಕ್ಕೆ ರಾಜ್ಯಕ್ಕೆ ಮುಂಗಾರು ಪ್ರವೇಶ ಆಗಬೇಕಿತ್ತು. ಆದರೆ ಅರಬ್ಬಿ ಸಮುದ್ರದಲ್ಲಿ ಉಂಟಾಗಿರುವ ಚಂಡಮಾರುತ ಹಾಗೂ ಬಿರುಗಾಳಿಯಿಂದಾಗಿ ಎರಡು ದಿನ ಮುಂಚಿತವಾಗಿಯೇ ರಾಜ್ಯಕ್ಕೆ ನೈರುತ್ಯ ಮಾನ್ಸೂನ್ ಎಂಟ್ರಿಯಾಗಿದ್ದು, ಕರಾವಳಿ ಸೇರಿದಂತೆ ಹಲವೆಡೆ ಮಳೆ ಸುರಿಯುತ್ತಿದೆ. ಮುಂದಿನ ಒಂದು ವಾರಗಳ ಕಾಲ ಮಳೆಯಾಗಲಿದ್ದು, ಜೂನ್ ಮೊದಲ ವಾರದಲ್ಲಿ ಕಡಿಮೆಯಾಗುವ ಸಾಧ್ಯತೆ ಇದೆ.

- ಪ್ರೊ.ಗೋವಿಂದರಾಜು, ನಿವೃತ್ತ ಪ್ರಾಧ್ಯಾಪಕರು, ನಾಗನಹಳ್ಳಿ ಸಾವಯವ ಕೃಷಿ ಸಂಶೋಧನಾ ಕೇಂದ್ರ

ನಕ್ಕರೆ ಅದೇ ಸ್ವರ್ಗ

ಬ್ಯಾಂಕಿನ ಮುಂದೆ ಭಾರೀ ದೊಡ್ಡ ಕ್ಯೂ ಇತ್ತು.
ಗುಂಡ ಅದನ್ನು ನುಸುಳಿ ಮುಂದಕ್ಕೆ ಹೋಗಲೆತ್ನಿಸಿದ. ಆದರೆ,
ಜನ ಅವನನ್ನು ತಳ್ಳಿ... ತಳ್ಳಿ ಹಿಂದಕ್ಕೆ ಹಾಕುತ್ತಿದ್ದರು.
ಗುಂಡ ಅಳುತ್ತಾ ಹೇಳಿದ: ನೋಡ್ರೋ... ನೀವು ದಾರಿ ಬಿಟ್ರೆ ಬ್ಯಾಂಕ್
ಬಾಗಿಲು ತೆಗೀತಿನಿ. ಇಲ್ಲಾಂದ್ರೆ ಸೀದಾ ಮನೇಗ್ ಹೋಗ್ತಿನಷ್ಟೆ..!

ಮೈಸೂರು ಮಿತ್ರ
ಸೋಮವಾರ, 26 ಮೇ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಕೆಲವೊಮ್ಮೆ ಅಂತ್ಯಗಳು ಸುಂದರವಾಗಿರುತ್ತವೆ
ಎಂಬುದಕ್ಕೆ ಸೂರ್ಯಾಸ್ತವೇ ಉದಾಹರಣೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ಕಬ್ಬು ಡೊಂಕಾದರೆ ಅದರ ಸಿಹಿ ಡೊಂಕೆ?'

ನಿಮ್ಮ ಪತ್ರಗಳು

ಬಸವಣ್ಣನವರ ಸರಳ ಜೀವನಕ್ಕೆ ಇಷ್ಟೊಂದು ಅದ್ದೂರಿ ವೆಚ್ಚ ಸರಿಯೆ?

ಮಾನ್ಯರೆ,

ಬಸವಣ್ಣನವರ ತತ್ವಾದರ್ಶಗಳು ವಿಶ್ವಕ್ಕೇ ಪ್ರೇರಣೆ. 12ನೇ ಶತಮಾನದಲ್ಲೇ ಪ್ರಜಾಪ್ರಭುತ್ವ, ಮಾನವೀಯ ಮೌಲ್ಯ, ಸಾಮಾಜಿಕ ನ್ಯಾಯ, ಮಹಿಳಾ ಸಮಾನತೆ, ಅಂತರ್ಜಾತಿ ವಿವಾಹ, ಅಸ್ಪೃಶ್ಯತಾ ನಿವಾರಣೆ, ಜಾತಿ ಮುಕ್ತ ಸಮಾಜ ಹೀಗೆ ಹಲವು ಅದ್ಭುತ ಚಿಂತನೆಗಳ ಹರಿಕಾರ ಬಸವಣ್ಣ ಎಂಬುದರಲ್ಲಿ ಅನುಮಾನವೇ ಇಲ್ಲ.

ಅಷ್ಟೇ ಅಲ್ಲ, ಅವರೊಬ್ಬ ಸರಳ ಬದುಕು ಸಾಗಿಸಿ, ಸರಳ ಜೀವನದಲ್ಲಿ ಆಸಕ್ತಿಯುಳ್ಳವರಾಗಿದ್ದರು ಎಂಬುದೂ ನಿಜ. ಇಷ್ಟೊಂದು ಸರಳ ವ್ಯಕ್ತಿಯ ನೆನಪಿಗೆ ಕಟ್ಟಲಾಗಿರುವ 'ಅನುಭವ ಮಂಟಪ'ಕ್ಕೆ 600 ಕೋಟಿ ರೂ. ವೆಚ್ಚದ ಪ್ರಸ್ತಾವ ಮಾಡಿರುವ ಮುಖ್ಯಮಂತ್ರಿಗಳ ನಡೆ ಸರಿಯೆ. ಅದ್ದೂರಿ ಆಚರಣೆ ಸಮಯ ಇನ್ನೂ ಒಂದು ಅದ್ದೂರಿ ವಿಷಯ ಬಹಿರಂಗಪಡಿಸಿದ್ದಾರಲ್ಲವೆ? ಬಸವಣ್ಣನವರ ಅನುಭವವನ್ನು ನಾವೂ ರೂಢಿಸಿಕೊಳ್ಳಬೇಕೆಂದರೆ, ಅವರಂತೆ ಸರಳ ಬದುಕು ಸಾಗಿಸಿದರೇನೇ ಹೇಳುವ ಮಾತಿಗೆ ಅರ್ಥ ಬಂದೀತು. ಇಲ್ಲವೆಂದರೆ, ನುಡಿಗೂ ನಡೆಗೂ ಏನೂ ಸಂಬಂಧವೇ ಇಲ್ಲದಂತಾಗಿ ಬಿಡುತ್ತದೆ. ಮಹನೀಯರನ್ನು ಸ್ಮರಿಸುತ್ತಲೇ ಇರಬೇಕು. ಅವರೆಲ್ಲ ನಮ್ಮೆಲ್ಲರ ಜೀವನ ಆದರ್ಶಪ್ರಾಯರು. ನವೀಕರಣ ಅಥವಾ ಹೊಸ ತಲೆಮಾರುಗಳ ಹೆಸರಿನಲ್ಲಿ ಇಷ್ಟೊಂದು ದುಂದು ವೆಚ್ಚ ಬೇಕೆ? ಯಾರನ್ನೋ ಖುಷಿಪಡಿಸಲು ಅಥವಾ ತಾನೂ ಏನೋ ಬಹುದೊಡ್ಡ ಉಪಕಾರ ಮಾಡುತ್ತಿದ್ದೇನೆಂದು ಪ್ರದರ್ಶಿಸಿ, ಸಾರ್ವಜನಿಕ ಹಣವನ್ನು ಬೇಕಾ ಬಿಟ್ಟಿ ಖರ್ಚು ಮಾಡಬಹುದೆ? ಎಲ್ಲಿ, ಯಾವುದಕ್ಕೆ, ಎಷ್ಟರ ಮಿತಿಯಲ್ಲಿ ಖರ್ಚು ಮಾಡಿದರೆ ರಾಜ್ಯಕ್ಕೂ ಅನುಕೂಲ ಸಮಾಜಕ್ಕೂ ಒಳಿತು. ಬಸವಾದಿ ಶರಣರು, ಸುಖೀ ಸಮಾಜದ ನಿರ್ಮಾಣಕ್ಕೆ ಒತ್ತು ಕೊಡುತ್ತಾರೆ ಎಂದರೆ ಅವೆಲ್ಲ ಹಣದ ಲೆಕ್ಕದಲ್ಲಿಲ್ಲ ಎಂಬುದೂ ತಿಳಿದಿರಬೇಕಲ್ಲವೆ?

ಬಸವಣ್ಣನವರ ಜಯಂತಿ ಆಚರಿಸುವುದು ಅರ್ಥಪೂರ್ಣ. ಅಂದು ಬಸವ ತತ್ವಗಳನ್ನು ಅಳವಡಿಸಿಕೊಂಡವರೊಂದಿಗಿನ ಸಂವಾದ, ಅವರ ಹಿತ ವಚನ, ಚರ್ಚೆಗಳೆಲ್ಲ ನಡೆದು, ನಮ್ಮ ಬದುಕಿನಲ್ಲೂ ಅಂತಹ ಉದಾತ್ತ ಚಿಂತನೆಗಳನ್ನು ರೂಢಿಸಿಕೊಳ್ಳುವ ಪರಿಯ ಬಗ್ಗೆ ವಿಸ್ತ್ರುತ ಚರ್ಚೆ, ಸಂಭಾಷಣೆ ಇತ್ಯಾದಿ ನಡೆಸಲು ಒಂದು ಸೂಕ್ತ ಸ್ಥಳದ ಅವಶ್ಯಕತೆ ಇದೆ ಎಂಬುದೂ ನಿಜ. ಆದರೆ ಅದನ್ನೆಲ್ಲ ವೈಭವೀಕರಿಸುವ ಅವಶ್ಯಕತೆ ಇದೆಯೇ? ಹೆಚ್ಚು ಖರ್ಚು ಮಾಡಿದರೆ ಹೆಚ್ಚು ಗುಣಮಟ್ಟದ ಅನುಯಾಯಿ ಅಂದು ಕೊಂಡುಬಿಟ್ಟಿರಬಹುದೆ? ಬಸವಾದಿ ಶರಣರ ತತ್ವವನ್ನು ವಿಶ್ವಕ್ಕೆ ಸಾರಲು ಇದೊಂದೇ ದಾರಿಯೆ?

–ಶಂಕರನಾರಾಯಣಭಟ್, ಜಯಲಕ್ಷ್ಮಿಪುರಂ, ಮೈಸೂರು

ಸರ್ಕಾರಿ ಆಸ್ಪತ್ರೆಯ ಆವರಣಗಳಲ್ಲಿ ಜನೌಷಧಿ ಕೇಂದ್ರಗಳ ಮುಚ್ಚದಿರಲು ಮನವಿ

ಮಾನ್ಯರೆ,

ಪ್ರಧಾನಿ ನರೇಂದ್ರ ಮೋದಿಯವರ ಮಹತ್ವಾಕಾಂಕ್ಷೆ ಯೋಜನೆಗಳಲ್ಲಿ ಜನೌಷಧಿ ಕೇಂದ್ರಗಳು ಒಂದಾಗಿದ್ದು, ಬಡವರಿಗೆ ಮತ್ತು ಸಾಮಾನ್ಯ ಜನರಿಗೆ ಉತ್ತಮ ಗುಣಮಟ್ಟದ ಔಷಧಿಗಳು ಕೈಗೆಟುಕುವ ದರದಲ್ಲಿ ಸಿಗುತ್ತಿದೆ. ಈ ಕೇಂದ್ರಗಳು ದಿವ್ಯ ಔಷಧಿಯ ಸಂಜೀವಿನಿಯಾಗಿತ್ತು ಆದರೆ ಇತ್ತೀಚಿನ ದಿನಗಳಲ್ಲಿ ರಾಜ್ಯ ಸರ್ಕಾರವು ಪಟ್ಟಭದ್ರ ಹಿತಾಸಕ್ತಿಗಳ ಕೆಲವು ಔಷಧಿ ಕಂಪನಿಗಳ ಒತ್ತಡಕ್ಕೆ ಮಣಿದು ಅವರಿಗೆ ಲಾಭ ಮಾಡಿಕೊಡಲು ಸರ್ಕಾರಿ ಆಸ್ಪತ್ರೆ ಆವರಣದ ಜನೌಷಧಿ ಕೇಂದ್ರ ಮಳಿಗೆಗಳನ್ನು ಸ್ಥಗಿತಗೊಳಿಸಲು ಆದೇಶಿಸಿರುವುದು ಖಂಡನೀಯ.

ಸರ್ಕಾರಿ ಆಸ್ಪತ್ರೆಗೆ ಬರುವ ರೋಗಿಗಳು ಬಡವರಾಗಿರುತ್ತಾರೆ. ಅವರಿಗಾಗಿಯೇ ಇರುವ ಜನೌಷಧಿ ಕೇಂದ್ರಗಳನ್ನು ಮುಚ್ಚುತ್ತಿರುವುದು ದೊಡ್ಡ ದುರಂತ. ದುಪ್ಪಟ್ಟು ಹಣವನ್ನು ಕೊಟ್ಟು ಖಾಸಗಿ ಔಷಧಿಯ ಮಳಿಗೆಗಳಲ್ಲಿ ಕೊಂಡುಕೊಳ್ಳಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. **ಬಡವರ ಕಷ್ಟ ದವಡೆಗೆ ಮೂಲ** ಎಂಬ ಗಾದೆಯಂತೆ ಬಡವರಿಗೆ ತುಂಬಾ ತೊಂದರೆಯಾಗಿದೆ. ಶ್ರೀಮಂತರು ಹಣವನ್ನು ಕೊಟ್ಟು ಖಾಸಗಿ ಔಷಧಿ ಮಳಿಗೆಯಲ್ಲಿ ಕೊಂಡುಕೊಳ್ಳುತ್ತಾರೆ. ಆದರೆ ಬಡವರು ಹೆಚ್ಚಿನ ಹಣವನ್ನು ಕೊಟ್ಟು ಔಷಧಿ ಖರೀದಿಸಲು ಸಾಧ್ಯವಿಲ್ಲ.

ಯಾವ ಸರ್ಕಾರದ ಯೋಜನೆಗಳಾದರೇನು? ಸಾರ್ವಜನಿಕರಿಗೆ ಅನುಕೂಲವಾಗಬೇಕಷ್ಟೆ. ಆದರೆ, ಕೇಂದ್ರ ಸರ್ಕಾರದ ಯೋಜನೆಯಾದ ಇದನ್ನು ರಾಜ್ಯ ಸರ್ಕಾರವು ಹಂತ ಹಂತವಾಗಿ ಜನೌಷಧಿ ಕೇಂದ್ರಗಳನ್ನು ರಾಜ್ಯಾದ್ಯಂತ ಮುಚ್ಚಲು ಸಂಚು ರೂಪಿಸುತ್ತಿದೆ ಎಂದು ಸಾರ್ವಜನಿಕರಲ್ಲಿ ದೊಡ್ಡ ಮಟ್ಟದ ಕೂಗು ಕೇಳಿ ಬರುತ್ತಿದೆ. ಆದ್ದರಿಂದ ಈ ಕೂಡಲೇ ಈ ಆದೇಶವನ್ನು ಹಿಂಪಡೆದು ಎಂದಿನಂತೆ ಸರ್ಕಾರಿ ಆಸ್ಪತ್ರೆಗಳಲ್ಲಿ ಜನೌಷಧಿ ಕೇಂದ್ರಗಳು ತೆರೆಯಬೇಕೆಂಬುದೇ ನನ್ನ ವಿನಂತಿ.

–ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾ.

ಮದುವೆ ಅನ್ನುವುದು ಹುಡುಗಾಟದ ಮಾತಲ್ಲ!

ಮಾನ್ಯರೆ,

ಹಾಸನ ನಗರ ಸಮೀಪದ ಭುವನಹಳ್ಳಿಯಲ್ಲಿ ಇತ್ತೀಚೆಗೆ ಏರ್ಪಡಿಸಿದ್ದ ವಿವಾಹ ಮಹೋತ್ಸವದಲ್ಲಿ, ವರ–ವಧುವಿಗೆ ತಾಳಿ ಕಟ್ಟುವ ಸಂಧರ್ಭದಲ್ಲಿ, ವಧು ಹಸೆ ಮಣೆಯಿಂದ ಎದ್ದು ತನಗೆ ಈ ಮದುವೆ ಇಷ್ಟವಿಲ್ಲವೆಂದು ಹೇಳಿ ಹೊರನಡೆದ ಪ್ರಕರಣ ಮಾಧ್ಯಮಗಳಲ್ಲಿ ವ್ಯಾಪಕ ಪ್ರಚಾರ ಪಡೆದಿದೆ. ವರ ಇದರಿಂದ ತೀವ್ರ ಮನನೊಂದು ಕಣ್ಣೀರಿಟ್ಟ ದೃಶ್ಯ ಮಾಧ್ಯಮಗಳಲ್ಲಿ ವೈರಲ್ ಆಗಿದೆ. ಇಂತಹ ಮನಕಲಕುವ ಸನ್ನಿವೇಶಗಳು ನಿಜಕ್ಕೂ ಆಘಾತಕಾರಿಯಾಗಿವೆ. ಪ್ರಬುದ್ಧ ವಯಸ್ಕರಾದ ಯುವಕ–ಯುವತಿಯರು ಇಂತಹ ದ್ವಂದ್ವದಿಂದ ಹೊರ ಬರಬೇಕಿದೆ.

ಒಮ್ಮೆ ಮದುವೆ ನಿಂತು ಹೋದರೆ, ಪುನಃ ಆ ಹುಡುಗ ಅಥವಾ ಹುಡುಗಿಗೆ ಮತ್ತೆ ಮದುವೆಯಾಗುವುದು ಕಷ್ಟವಾಗಬಹುದು. ಇದರಿಂದ ನೊಂದ ಕುಟುಂಬಗಳಿಗೆ ಆರ್ಥಿಕ ಸಂಕಷ್ಟ, ಮಾನಸಿಕ ಕಿರಿಕಿರಿ, ಬಂಧು ಬಳಗದವರಿಂದ ಚುಚ್ಚು ಮಾತುಗಳು ಕೇಳಿ ಬರುವ ಸಾಧ್ಯತೆಗಳಿವೆ. ಇದು ಕೆಲವೊಮ್ಮೆ ಆತ್ಮಹತ್ಯೆಗೂ ಕೂಡ ಕಾರಣವಾಗಬಹುದು. ಮದುವೆ ಅನ್ನುವುದು ಹುಡುಗಾಟದ ಮಾತಲ್ಲ. ಒಮ್ಮೆ ಮದುವೆಯಾದರೆ, ಅದು ಜೀವನ ಪರ್ಯಂತ ಶಾಶ್ವತ ಬಂಧನವಾಗಿರಬೇಕು. ಯಾರನ್ನೋ ಪ್ರೀತಿಸುವುದು, ತಂದೆ–ತಾಯಿಗಳ ಬಲವಂತಕ್ಕೆ ಅಥವಾ ಬೇರೆ ರೀತಿಯ ಆಕರ್ಷಣೆಗೆ ಬಲಿಯಾಗಿ ಮತ್ಯಾರನ್ನೋ ವರಿಸುವುದು ಮುಂತಾದವು ಇಂದಿನ ಸಮಾಜದಲ್ಲಿ ಸರ್ವೇ ಸಾಮಾನ್ಯವಾಗಿ ಬಿಟ್ಟಿದೆ.

ಯಾವ ಹೂವು ಯಾರ ಮುಡಿಗೋ... ಎಂಬ ಕವಿವಾಣಿಯ ಹಾಗೆ ಈ ಸೃಷ್ಟಿಯಲ್ಲಿ ಪ್ರತಿಯೊಬ್ಬ ಗಂಡಿಗೂ ಒಂದು ಹೆಣ್ಣಿದ್ದು, ಪ್ರತಿಯೊಬ್ಬ ಹೆಣ್ಣಿಗೂ ಒಂದು ಗಂಡು ಸೃಷ್ಟಿಯಾಗಿರುತ್ತದೆ. ಮದುವೆಗೆ ಸಿದ್ಧವಾಗುತ್ತಿರುವ ಯುವಕ–ಯುವತಿಯರು ಈ ಸತ್ಯವನ್ನು ಅರಿಯಬೇಕಿದೆ. –ಕೆ.ವಿ.ವಾಸು, ವಕೀಲರು–ನೋಟರಿ, ಮೈಸೂರು



ಜಿ. ಎಲ್. ತ್ರಿಪುರಾಂತಕ
ಮೊ: 96866–77284

ಅರಿವು

ಕೃತಜ್ಞತೆ ಎಂಬ ಮಾನವ ಶ್ರೇಷ್ಠತೆ...!


ಎನಗಿಂತ ಕಿರಿಯನಿಲ್ಲ ಎಂಬ ತತ್ತ್ವವನ್ನು ಇಡೀ ಜಗತ್ತಿಗೆ ಸಾರಿದವರು ಜಗಜ್ಯೋತಿ ಶರಣರಾದ ಬಸವಣ್ಣನವರು. ಮನುಷ್ಯ ಎಷ್ಟೇ ಎತ್ತರಕ್ಕೆ ಬೆಳೆದರೂ, ಎಷ್ಟೇ ಸಾಧನೆ ಮಾಡಿದರೂ, ಸೆಲೆಬ್ರಿಟಿ ಎನಿಸಿಕೊಂಡರೂ ಸಜ್ಜನಿಕೆಯನ್ನು ರೂಢಿಸಿಕೊಳ್ಳುವುದು ಎಷ್ಟು ಅಗತ್ಯ ಎಂದು ಅವರ ವಚನಗಳನ್ನು ಪಠಿಸಿದರೆ ಸಾಕು ತಿಳಿಯುತ್ತದೆ. ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ ಎಂದು ಹೇಳುವ ಮೂಲಕ ಮನುಷ್ಯ ವಿನಯವಂತನಾಗಿರಬೇಕಾದ ಅಗತ್ಯವನ್ನು ತಿಳಿಸಿದ್ದಾರೆ. ಕೃತಜ್ಞತೆ ಎನ್ನುವುದು ಚಿಕ್ಕವರು, ಬಡವರು, ನಿರ್ಗತಿಕರಿಗೆ, ಅವಿದ್ಯಾವಂತರಿಗೆ ಇರಬೇಕಾದ ಗುಣ ಎಂದು ಅನೇಕರು ಭಾವಿಸಿದ್ದಾರೆ. ಮನುಷ್ಯ ಹಣ, ಅಂತಸ್ತು, ವಿದ್ಯೆ ಗಳಿಸಿದ ಮಾತ್ರಕ್ಕೆ ದೊಡ್ಡವನು ಎನಿಸಿಕೊಳ್ಳುವುದಿಲ್ಲ, ಕೃತಜ್ಞತಾ ಭಾವವನ್ನು ಬೆಳೆಸಿಕೊಂಡರೆ ಮಾತ್ರ ದೊಡ್ಡವನಾಗಲು ಸಾಧ್ಯ. ಹಣ ಬೀಸಾಕಿದರೆ ಎಲ್ಲವೂ ಸಿಗುತ್ತದೆ ಎಂದು ಭಾವಿಸಿ, ಪಡೆದ ಸೇವೆಗೆ ಕನಿಷ್ಠ ಧನ್ಯವಾದ ಹೇಳದೆ ಅಹಂಕಾರ ತೋರುವ ಮಂದಿ ಅನೇಕರಿದ್ದಾರೆ. ಒಂದು ಮುಗುಳ್ನಗೆ ತೋರುವ ಸೌಜನ್ಯವನ್ನು ಹೊಂದಿರುವುದಿಲ್ಲ. ಜಪಾನ್, ಇಂಗ್ಲೆಂಡ್ ಮತ್ತಿತರ ದೇಶಗಳಲ್ಲಿ ಥ್ಯಾಂಕ್ಸ್, ಸಾರಿ ಎಂಬ ಪದಗಳು, ಕೈಮುಗಿಯುವುದು, ತಲೆ ಬಾಗುವುದು, ಹ್ಯಾಟ್ ತೆಗೆಯುವುದು ಕೇವಲ ಔಪಚಾರಿಕ ಅಭ್ಯಾಸ ಆಗಿರದೆ, ಅದು ಮನುಷ್ಯರು ಪರಸ್ಪರ ಕೃತಜ್ಞತಾಪೂರ್ವಕವಾಗಿ ಗೌರವಿಸಿಕೊಳ್ಳುವ ಪರಿ ಎನ್ನಬಹುದು.

ಕೃತಜ್ಞತೆ ಎಂಬುದು ಒಂದು ಅಮೂಲ್ಯ ಮೌಲ್ಯ, ಅದನ್ನು ಎಲ್ಲರಿಂದಲೂ ನಿರೀಕ್ಷಿಸಲಾಗದು ಎಂದು ಹಿರಿಯರೊಬ್ಬರು ಹೇಳಿದ್ದಾರೆ. ಅಂದರೆ ಕರುಣೆ, ದಾನ, ಧರ್ಮ, ನಿಸ್ವಾರ್ಥ, ತ್ಯಾಗ.... ಹೀಗೆ ಅನೇಕ ಜೀವನ ಮೌಲ್ಯಗಳೊಂದಿಗೆ ಕೃತಜ್ಞತೆ ಎಂಬ ಮೌಲ್ಯವೂ ಅಗತ್ಯ. ಅದು ಮನುಷ್ಯನನ್ನು ಶ್ರೇಷ್ಠನನ್ನಾಗಿ ಮಾಡುತ್ತದೆ. ಕೆಲವು ಅಭ್ಯಾಸಗಳನ್ನು ಶಾಲೆಯ ಪಠ್ಯಪುಸ್ತಕಗಳಿಂದ ನಿರೀಕ್ಷಿಸಲಾಗದು, ಮನೆಯ ಹಿರಿಯ ಸದಸ್ಯರ ನಡವಳಿಕೆಯನ್ನು ಕಿರಿಯರು ಅನುಸರಿಸುವ ಸಾಧ್ಯತೆ ಜಾಸ್ತಿ. ಕೃತಜ್ಞತೆ ಎಂಬುದು ಸಂಸ್ಕಾರದ ಒಂದು ಅಂಗ. ಕೃತಜ್ಞತಾ ಭಾವವು ಒಂದು ದೌರ್ಬಲ್ಯವಲ್ಲ, ಅದೊಂದು ಬಲವೇ ಸರಿ. ಬಲಹೀನರು ಅದನ್ನು ಅನುಸರಿಸಲು ಸಾಧ್ಯವಿಲ್ಲ. ಮನುಷ್ಯ ಪ್ರಕೃತಿಯಿಂದ ಅನೇಕ ವಸ್ತುಗಳನ್ನು ಪಡೆಯುವುದರಿಂದ ಮೊದಲು ಪ್ರಕೃತಿಗೆ ಕೃತಜ್ಞನಾಗಿರಬೇಕು. ಜನ್ಮ ನೀಡಿ, ತ್ಯಾಗ–ನಿಸ್ವಾರ್ಥಗಳಿಂದ ಸಾಕಿ ಸಲಹುವ ಹೆತ್ತವರಿಗೆ, ಪಾಠ ಹೇಳಿಕೊಡುವ ಗುರುಗಳಿಗೆ, ಬದುಕಿಗೆ ಅರ್ಥ ತರುವ ಒಡಹುಟ್ಟಿದವರಿಗೆ, ಸ್ನೇಹಿತರಿಗೆ..... ಹೀಗೆ ಕೃತಜ್ಞತೆ ಸಲ್ಲಿಸಲು ದೊಡ್ಡ ಪಟ್ಟಿಯೇ ಇರುತ್ತದೆ. ಎಷ್ಟೋ ಮಂದಿ ಹತ್ತಿದ ಏಣಿಯನ್ನು ಒದೆಯುವ ಮೂಲಕ ಕೃತಜ್ಞರಾಗುವ ಬದಲು ಕೃತಘ್ನರಾಗಿಬಿಡುತ್ತಾರೆ. ಹುಟ್ಟಿದ ದಿನಕ್ಕೆ, ಫಾದರ್ಸ್ ಡೇ, ಮದರ್ಸ್ ಡೇ ದಿನದಂದು ಒಂದು ದಿನ ಹೆತ್ತವರಿಗೆ ಕೃತಜ್ಞತೆ ಸಲ್ಲಿಸುವ ಬದಲು ನಿತ್ಯವೂ ಅವರ ಅಗತ್ಯಗಳನ್ನು ಮನಗಂಡು ಸೇವೆ ಸಲ್ಲಿಸುವ ಮೂಲಕ ಸೇವೆ ಸಲ್ಲಿಸಬಹುದು. ಮಕ್ಕಳು ದೊಡ್ಡವರಾಗಿ, ಅಪ್ಪಅಮ್ಮನನ್ನು ಕಡೆಗಣಿಸಿದಲ್ಲಿ, ಅವರು ಎಷ್ಟೇ ಎತ್ತರಕ್ಕೆ ಏರಿದರೂ ಸಣ್ಣವರಾಗಿಯೇ ಕಾಣುತ್ತಾರೆ. ಕೃತಜ್ಞತೆ ವ್ಯಕ್ತಪಡಿಸುವುದು ಪ್ರತಿಷ್ಠೆಗೆ ಧಕ್ಕೆ ಬರುತ್ತದೆ ಎಂದು ಭಾವಿಸುವವರು ಅನೇಕ. ಆದರೆ ವ್ಯಕ್ತಿತ್ವಕ್ಕೆ ಒಂದು ಘನತೆ ಬರಬೇಕಾದರೆ ಕೃತಜ್ಞತೆಯಿಂದ ಮಾತ್ರ ಸಾಧ್ಯ.

ದೇವರಿಗೆ ಕೃತಜ್ಞತೆ ಸಲ್ಲಿಸುವವರು ಕಡಿಮೆ, ಬೇಡಿಕೆ ಸಲ್ಲಿಸುವವರೇ ಹೆಚ್ಚು. ಬಯಸಿದ್ದನ್ನು ಕರುಣಿಸಿದ ಕಾರಣಕ್ಕೆ ದೇವರಿಗೆ ತಲೆಬಾಗಿ ಕೃತಜ್ಞತೆ ಹೇಳಬೇಕು. ಬೇಡಿದ ವರ ಕರುಣಿಸಿದಾಕ್ಷಣ, ಅದನ್ನು ಮರೆತು, ಮತ್ತಷ್ಟು ಬೇಡಿಕೆ ಸಲ್ಲಿಸುವುದು ದುರಾಸೆ ಎನಿಸುತ್ತದೆ. ಗಾಳಿಪಟವು ಆಗಸದಲ್ಲಿ ಮೇಲೇರಬೇಕಾದರೆ ಪಟ ಸುಸ್ಥಿತಿಯಲ್ಲಿದ್ದರೆ ಸಾಲದು, ಸೂತ್ರ ಸರಿಯಿದ್ದರೆ ಸಾಲದು, ಮೈದಾನ ದೊಡ್ಡದಿದ್ದರೆ ಸಾಲದು, ದಾರ ಗಟ್ಟಿಯಾಗಿದ್ದರಷ್ಟೇ ಸಾಲದು, ಗಾಳಿ ಬೀಸಿದರೆ ಮಾತ್ರ ಗಾಳಿಪಟದ ಆಟ, ಮಾಟ ಎಲ್ಲ. ಇಲ್ಲವಾದರೆ ಅದರೆ ಆಟವೇ ಗೋತ. ಹಾಗಾಗಿ ಪಟ ಮೇಲಕ್ಕೇರಲು ಕಾರಣವಾದ ಅಗೋಚರವಾದ ಗಾಳಿಗೆ ಧನ್ಯವಾದ ಹೇಳಬೇಕಲ್ಲವೇ?

ಒಬ್ಬ ಕಲಾವಿದ ಅದ್ಭುತವಾಗಿ ನಟಿಸಬಹುದು, ನೃತ್ಯ ಮಾಡಬಹುದು, ಫೈಟ್ ಮಾಡಬಹುದು, ಆದರೆ ಅವನನ್ನು ನಾಯಕನಟನಾಗಿ ಒಪ್ಪಿ, ಸಿನಿಮಾಗಳನ್ನು ದುಡ್ಡು ಕೊಟ್ಟು ನೋಡಿ ವಿಜೃಂಭಿಸುವಂತೆ ಮಾಡುವುದು ಪ್ರೇಕ್ಷಕರು ಹಾಗೂ ಅಭಿಮಾನಿಗಳು. ಅನೇಕ ನಾಯಕ ನಟರು/ನಟಿಯರು ಗರ್ವದಿಂದ ಅಭಿಮಾನಿಗಳ ಜೊತೆ ಅನುಚಿತವಾಗಿ ವರ್ತಿಸುವುದು, ಸಭೆ ಸಮಾರಂಭಗಳಲ್ಲಿಯೂ ಹೀರೋಯಿಸಂ ದರ್ಪ ತೋರುವುದನ್ನು ಕಾಣಬಹುದು. ಆದರೆ ಕಂಡ ಅಪ್ರತಿಮ ಕಲಾವಿದರಾದ ದಾದಾ ಸಾಹೇಬ್ ಫಾಲ್ಕೆ ಪುರಸ್ಕಾರಕ್ಕೆ ಭಾಜನರಾದ ಡಾ.ರಾಜ್‌ಕುಮಾರ್ ಅವರಿಂದ ಕೃತಜ್ಞತೆ ಪಾಠವನ್ನು ಕಲಿಯಬಹುದು. ಎಷ್ಟೇ ಎತ್ತರಕ್ಕೆ ಬೆಳೆದರೂ ಎಂದಿಗೂ ಗರ್ವ ಪಡಲಿಲ್ಲ. ಅವರು ಸಭೆಸಮಾರಂಭಗಳಲ್ಲಿ ಅಭಿಮಾನಿ ದೇವರುಗಳು ಎಂದು ಕರೆದು ಕೈಎತ್ತಿ ಮುಗಿದು ಗೌರವಿಸುತ್ತಿದ್ದರು. ಸಿನಿಮಾ ಪ್ರೇಕ್ಷಕರನ್ನು ಅನ್ನ ಹಾಕುವ ಧಣಿಗಳು ಎನ್ನುತ್ತಿದ್ದರು. ನಿಮ್ಮ ರಾಜಕುಮಾರ ಎಂದು ಹೇಳುವ ಮೂಲಕ ಸರಳ ಸಜ್ಜನಿಕೆಯಿಂದ ನಡೆದುಕೊಳ್ಳುತ್ತಿದ್ದರು. ಈ ನಡವಳಿಕೆ ಅನುಕರಣೀಯ ಅಲ್ಲವೇ?

ಕೃತಜ್ಞತೆ ಎಂಬುದು ಆತ್ಮಪೂರ್ವಕವಾಗಿಯೂ, ಹೃದಯಪೂರ್ವಕವಾಗಿಯೂ ಇರಬೇಕು ಅದು ತೋರಿಕೆಗೆ ಇರಬಾರದು. ಬಾಯಿಯಲ್ಲಿ ಧನ್ಯವಾದ ಹೇಳಿದರೆ ಸಾಲದು, ಆಂಗಿಕ ಭಾಷೆಯೂ ಅದಕ್ಕೆ ಪೂರಕವಾಗಿರಬೇಕು. ಇಲ್ಲವಾದಲ್ಲಿ ಅದು ಔಪಚಾರಿಕ ಅಭ್ಯಾಸ ಎನಿಸಿಬಿಡುತ್ತದೆ. ಓಟದ ಸ್ಪರ್ಧೆಯಲ್ಲಿ ವಿಜೇತನಾಗಿ ಮೊದಲ ಸ್ಥಾನ ಪಡೆದವನು ತನ್ನ ಕೆಳಗಿನ ಸ್ಥಾನದವರಿಗೆ ಧನ್ಯವಾದ ಹೇಳಬೇಕು. ಅವರು ಸ್ಪರ್ಧೆಗೆ ಬಂದ ಕಾರಣಕ್ಕೆ ಅವನು ವಿಜಯಶಾಲಿಯಾಗಲು ಸಾಧ್ಯವಾಗಿರುತ್ತದೆ. ಅವರು ಎರಡು, ಮೂರನೇ ಸ್ಥಾನ ಪಡೆದವರು, ಸೋತವರು ಸ್ಪರ್ಧೆಯಲ್ಲಿ ಭಾಗವಹಿಸದೇ ಇದ್ದಲ್ಲಿ ಅವನು ಗೆಲ್ಲಲು ಸಾಧ್ಯವಾಗುತ್ತಿರಲಿಲ್ಲ. ತನ್ನ ಸಾಮರ್ಥ್ಯದಿಂದ ಮಾತ್ರ ಗೆದ್ದೆ ಎಂದು ಬೀಗುವುದು ಆಟಗಾರನ ಲಕ್ಷಣವಲ್ಲ.



> "ನಮ್ಮ ದೈನಂದಿನ ಬದುಕಿನಲ್ಲಿ ನಮ್ಮ ಸುಖ ಸಂತೋಷಕ್ಕಾಗಿ ದುಡಿಯುವ ಮಂದಿ ಅನೇಕರಿರುತ್ತಾರೆ. ಅವರು ವಾಹನ ಚಾಲಕರಿರಬಹುದು, ಸಹಾಯಕರಿರಬಹುದು, ಮನೆಕೆಲಸದವರಿರಬಹುದು. ಅವರು ಸಕಾಲಕ್ಕೆ ಸೇವೆ ಒದಗಿಸದೇ ಇದ್ದಲ್ಲಿ ದಿನದ ವೇಳಾಪಟ್ಟಿಯೇ ಅಯೋಮಯವಾಗಿರುತ್ತದೆ. ಅವರ ಅಮೂಲ್ಯ ಸೇವೆಗೆ ಆಗಾಗ್ಗೆ ಧನ್ಯವಾದ ಹೇಳುವ ಸೌಜನ್ಯ ಬೆಳೆಸಿಕೊಳ್ಳಬೇಕು. ಸಂಬಳ ಕೊಡುತ್ತೇವೆ ಸೇವೆ ಮಾಡುತ್ತಾರೆ? ಎಂಬ ತಾತ್ಸಾರ ಮನೋಭಾವ ಹೊಂದಿರಬಾರದು. ನಮಗಿಂತ ಚಿಕ್ಕವರಿಗೆ ಹೇಳಿದ ಧನ್ಯವಾದಕ್ಕೆ ಅವರು ಪ್ರತಿಯಾಗಿ ನೀಡುವ ಗೌರವ ನಿಜಕ್ಕೂ ಬೆಲೆ ಕಟ್ಟಲು ಸಾಧ್ಯವಿಲ್ಲ. ಧನ್ಯವಾದ ಎಂಬುದು ದೊಡ್ಡವರಿಗೆ ಬಳಸಬೇಕಾದ ದೊಡ್ಡ ಪದ ಎಂದು ಭಾವಿಸಬಾರದು. ನಮ್ಮೊಟ್ಟಿಗೆ ಇರುವವರಿಗೆ ತಿಳಿಸಿದಲ್ಲಿ ಅದಕ್ಕೆ ಮೌಲ್ಯ ಬರುತ್ತದೆ. ಅನೇಕ ದೊಡ್ಡವರಿಗೆ ನಾವು ತಿಳಿಸುವ ಧನ್ಯವಾದಕ್ಕೆ ಬೆಲೆಯೇ ಇರುವುದಿಲ್ಲ.

ಮಾಡುವ ಕೆಲಸಕ್ಕೆ ಸರ್ಕಾರ ಸಂಬಳ ಕೊಟ್ಟರೂ, ಕೆಲಸ ಮಾಡುವುದು ತಮ್ಮ ಕರ್ತವ್ಯವಾಗಿದ್ದರೂ, ಆ ಕೆಲಸಕ್ಕೆ ಲಂಚ ಪಡೆಯುವವರಿಗೆ ಕೃತಜ್ಞತೆ ಸಲ್ಲಿಸುವವರು ಕಡಿಮೆ. ಏಕೆಂದರೆ ಕೃತಜ್ಞತೆ ಎಂಬ ಅಮೂಲ್ಯವಾದ ಸಂಗತಿಗೆ ಲಂಚ ಪಡೆಯುವವರು ಅರ್ಹರಾಗಿರುವುದಿಲ್ಲ. ಕಾಸು ತೆಗೆದುಕೊಂಡವರು ದೊಡ್ಡ ಭಿಕ್ಷುಕರಂತೆ ಕಂಡರೆ ಆಶ್ಚರ್ಯವಿಲ್ಲ. ಇನ್ನೊಂದೆಡೆ ಸ್ಥಿತಿವಂತರ ಸೌಕರ್ಯಕ್ಕಾಗಿ ಹತ್ತಾರು ಜನ ಶ್ರಮಿಸುತ್ತಿರುತ್ತಾರೆ. ತಮ್ಮ ಸಹಾಯಕರುಗಳ ಬಗ್ಗೆ ಕನಿಷ್ಠ ಸಹಾನುಭೂತಿಯೂ ಇರುವುದಿಲ್ಲ. ಅಂತಹವರಿಗೆ ಅವರ ಸಹಾಯಕರುಗಳು ಸಹ ತೋರಿಕೆಯ ಕೃತಜ್ಞತೆಯನ್ನು ತೋರುತ್ತಾರೆ. ಅವರ ಅನುಪಸ್ಥಿತಿಯಲ್ಲಿ ಅವರನ್ನು ಇನ್ನಿಲ್ಲದಂತೆ ಹೀಯಾಳಿಸುತ್ತಾರೆ.

ಕೆಲಸವಾಗುವವರೆಗೆ ತುಂಬಾ ವಿನಯವಂತರಂತೆ ನಡೆದುಕೊಳ್ಳುವ ಅನೇಕರು ಕೆಲಸವಾದ ನಂತರ ಮುಖ ತಿರುಗಿಸಿ ಹೋಗಿಬಿಡುತ್ತಾರೆ. ಇವರು ಅವಕಾಶವಾದಿಗಳು. ಅತಿವಿನಯಂ ದೂರ್ತ ಲಕ್ಷಣಂ ಎಂಬ ಸಂಸ್ಕೃತದ ಈ ಮಾತಿಗೆ ಇಂಬು ಕೊಡುವಂತೆ ನಡೆದುಕೊಳ್ಳುತ್ತಾರೆ. ಅನಗತ್ಯವಾಗಿ ಗೌರವ ತೋರುವ ಮೂಲಕ ತುಂಬಾ ವಿಧೇಯತೆ ತೋರುವ ಇವರು ಒಳಗೊಂದು ಹೊರಗೊಂದು ಮನೋಭಾವ ಹೊಂದಿರುತ್ತಾರೆ. ಪ್ರಕೃತಿ ಪ್ರಿಯರ ಸಾಹಿತಿಗಳಾದ ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರು ಎಲ್ಲರೂ ದೊಡ್ಡ ಮನುಷ್ಯರೆಂದು ಕರೆದರೆಂದು ನಾವು ಹಾಗೆ ನಟಿಸಲು ತೊಡಗಬಾರದು ಎಂಬ ಅರ್ಥಪೂರ್ಣವಾದ ಮಾತನ್ನು ಹೇಳಿದ್ದಾರೆ. ತಮ್ಮ ಸ್ವಾರ್ಥ ಸಾಧನೆಗೆ ಬಹುಪರಾಕ್ ಹೇಳುವ ಹೊಗಳು ಭಟ್ಟರ ಮಾತನ್ನು ನಂಬಿ ತಾನು ದೊಡ್ಡವ ಎಂದು ಬೀಗುವ ಅವಶ್ಯವಿಲ್ಲ. ತಾನು ತಾನಾಗಿದ್ದರೆ ಅದೇ ದೊಡ್ಡತನ, ದೊಡ್ಡವನಂತೆ ನಟಿಸಿಬಿಟ್ಟರೆ ಅದು ದಡ್ಡತನವಾಗುತ್ತದೆ.

ನಮ್ಮ ದೈನಂದಿನ ಬದುಕಿನಲ್ಲಿ ನಮ್ಮ ಸುಖ ಸಂತೋಷಕ್ಕಾಗಿ ದುಡಿಯುವ ಮಂದಿ ಅನೇಕರಿರುತ್ತಾರೆ. ಅವರು ವಾಹನ ಚಾಲಕರಿರಬಹುದು, ಸಹಾಯಕರಿರಬಹುದು, ಮನೆಕೆಲಸದವರಿರ ಬಹುದು. ಅವರು ಸಕಾಲಕ್ಕೆ ಸೇವೆ ಒದಗಿಸದೇ ಇದ್ದಲ್ಲಿ ದಿನದ ವೇಳಾಪಟ್ಟಿಯೇ ಅಯೋಮಯವಾಗಿರುತ್ತದೆ. ಅವರ ಅಮೂಲ್ಯ ಸೇವೆಗೆ ಆಗಾಗ್ಗೆ ಧನ್ಯವಾದ ಹೇಳುವ ಸೌಜನ್ಯ ಬೆಳೆಸಿಕೊಳ್ಳಬೇಕು. ಸಂಬಳ ಕೊಡುತ್ತೇವೆ, ಸೇವೆ ಮಾಡುತ್ತಾರೆ ಎಂಬ ತಾತ್ಸಾರ ಮನೋಭಾವ ಹೊಂದಿರಬಾರದು. ನಮಗಿಂತ ಚಿಕ್ಕವರಿಗೆ ಹೇಳಿದ ಧನ್ಯವಾದಕ್ಕೆ ಅವರು ಪ್ರತಿಯಾಗಿ ನೀಡುವ ಗೌರವ ನಿಜಕ್ಕೂ ಬೆಲೆ ಕಟ್ಟಲು ಸಾಧ್ಯವಿಲ್ಲ. ಧನ್ಯವಾದ ಎಂಬುದು ದೊಡ್ಡವರಿಗೆ ಬಳಸಬೇಕಾದ ದೊಡ್ಡ ಪದ ಎಂದು ಭಾವಿಸಬಾರದು. ನಮ್ಮೊಟ್ಟಿಗೆ ಇರುವವರಿಗೆ ತಿಳಿಸಿದಲ್ಲಿ ಅದಕ್ಕೆ ಮೌಲ್ಯ ಬರುತ್ತದೆ. ಅನೇಕ ದೊಡ್ಡವರಿಗೆ ನಾವು ತಿಳಿಸುವ ಧನ್ಯವಾದಕ್ಕೆ ಬೆಲೆಯೇ ಇರುವುದಿಲ್ಲ.

ಸಕಾಲದಲ್ಲಿ ಕೆಲಸವು ಸರಿಯಾಗಿ ಆಗದಿದ್ದರೆ ಮನುಷ್ಯನಿಗೆ ಕೋಪ ಬರುವಷ್ಟು ಬೇಗ, ಕೆಲಸವು ಸರಿಯಾದ ಸಮಯಕ್ಕೆ ಆಗಿಬಿಟ್ಟರೆ ಕೃತಜ್ಞತಾ ಭಾವ ಮೂಡದಿರುವುದು ದುರದೃಷ್ಟಕರ. ಮನುಷ್ಯ ತನ್ನ ಅಸಹನೆಯನ್ನು ಕೋಪದ ಮೂಲಕ ವ್ಯಕ್ತಪಡಿಸುವಂತೆ, ಸಂತೋಷವನ್ನು ಸಹ ಕೃತಜ್ಞತೆಯಿಂದ ವ್ಯಕ್ತಪಡಿಸಬಹುದು. ಕೃತಜ್ಞತೆ ಸಲ್ಲಿಸುವಾಗ ಅಧಿಕಾರ, ಅಂತಸ್ತು, ಸಂಪತ್ತು, ವಯಸ್ಸು ಇವಾವುವು ಗಣನೆಗೆ ಬರಬಾರದು. ಕಿರಿಯರು ಹಿರಿಯರಿಗೆ ಅಗತ್ಯ ನೆರವು ನೀಡಿದಾಗ, ಬಡವ ಸಿರಿವಂತರಿಗೆ ಸಕಾಲಿಕ ಸೇವೆ ಒದಗಿಸಿದಾಗ, ಕಿರಿಯ ಸಹೋದ್ಯೋಗಿಗಳು ಸಹಾಯ ಮಾಡಿ ಒತ್ತಡ ಕಡಿಮೆ ಮಾಡಿದಾಗ ಯಾವುದೇ ಬಿಗುಮಾನವಿಲ್ಲದೆ ಕೃತಜ್ಞತೆ ಹೇಳಬೇಕು. ಅದು ವ್ಯಕ್ತಿತ್ವದ ಒಂದು ಅಂಗವಾಗಬೇಕು.

ಹೂರಣ: ದೊಡ್ಡವರು ಚಿಕ್ಕವರಿಂದ ಪಡೆದ ಸಹಾಯಕ್ಕೆ ಕೃತಜ್ಞತೆ ಹೇಳಿದರೆ ಇನ್ನೂ ದೊಡ್ಡವರಾಗುತ್ತಾರೆ, ಇಲ್ಲವಾದರೆ.......!

ಸ್ವರಶ್ರೀ ವಿಶೇಷ ಪ್ರಶಸ್ತಿ ಪ್ರದಾನ



ಪೇರೆಂಟ್ಸ್ ಅಸೋಸಿಯೇಷನ್ ಆಫ್ ಡೆಫ್ ಚಿಲ್ಡ್ರನ್ ಅವರು ನಡೆಸುತ್ತಿರುವ ಇನ್‌ಸ್ಟಿಟ್ಯೂಟ್ ಆಫ್ ಮದರ್ ಅಂಡ್ ಡೆಫ್ ಚೈಲ್ಡ್ ಶಾಲೆಯ ಹಿರಿಯ ವಿದ್ಯಾರ್ಥಿನಿ ಕುಮಾರಿ ವೈಭವಿ ವಿ ಕುಲಕರ್ಣಿ ನೃತ್ಯ ಕ್ಷೇತ್ರದಲ್ಲಿ ಸಲ್ಲಿಸಿರುವ ಗಮನಾರ್ಹ ಸೇವೆಯನ್ನು ಗುರುತಿಸಿ ಬೆಂಗಳೂರಿನ ಸ್ವರಶ್ರೀ ಸಂಗೀತ ಶಾಲೆಯ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಸ್ವರಶ್ರೀ ವಿಶೇಷ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಎನ್‌ಡಿಎ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ನಾಯಕತ್ವ ಶ್ಲಾಘಿಸುವ ನಿರ್ಣಯ ಅಂಗೀಕಾರ



ನವದೆಹಲಿ, ಮೇ.25– ದೆಹಲಿಯಲ್ಲಿ ಭಾನುವಾರ ನಡೆದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟದ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳ ಸಭೆಯಲ್ಲಿ ಸಶಸ್ತ್ರ ಪಡೆಗಳ ಶೌರ್ಯ ಮತ್ತು ಪ್ರಧಾನಿ ನರೇಂದ್ರ ಮೋದಿಯವರ ಧೈರ್ಯಶಾಲಿ ನಾಯಕತ್ವವನ್ನು ಶ್ಲಾಘಿಸುವ ನಿರ್ಣಯ ಅಂಗೀಕರಿಸಲಾಯಿತು.

ನಿರ್ಣಯ ಪ್ರಸ್ತಾಪಿಸಿದ ಶಿವಸೇನಾ ನಾಯಕ ಮತ್ತು ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ಏಕನಾಥ್ ಶಿಂಧೆ 'ಆಪರೇಷನ್ ಸಿಂಧೂರ್' ಭಾರತೀಯರ ಆತ್ಮ ವಿಶ್ವಾಸವನ್ನು ಹೆಚ್ಚಿಸಿದೆ ಎಂದು ಹೇಳಿದ್ದಾರೆ.

ಮೋದಿಯವರ ನಾಯಕತ್ವವನ್ನು ಶ್ಲಾಘಿಸುತ್ತಾ, ಪ್ರಧಾನಿ ಯಾವಾಗಲೂ ಸಶಸ್ತ್ರ ಪಡೆಗಳನ್ನು ಬೆಂಬಲಿಸಿದ್ದಾರೆ ಮತ್ತು ಆಪರೇಷನ್ ಸಿಂಧೂರ್ ಕಾರ್ಯಾಚರಣೆಯ ಮೂಲಕ ಭಯೋತ್ಪಾದಕರು ಮತ್ತು ಅವರನ್ನು ಬೆಂಬಲಿಸುತ್ತಿದ್ದವರಿಗೆ ತಕ್ಕ ಉತ್ತರ ನೀಡಿದೆ ಎಂದು ಎನ್‌ಡಿಎ ನಾಯಕರು ಹೇಳಿದ್ದಾರೆ.

ಪ್ರಧಾನಿ ಮೋದಿ, ಕೇಂದ್ರ ಸಚಿವರಾದ ಅಮಿತ್ ಶಾ, ರಾಜನಾಥ್ ಸಿಂಗ್ ಮತ್ತು ಭಾರತೀಯ ಜನತಾ ಪಕ್ಷದ ಅಧ್ಯಕ್ಷರಾದ ಜೆ ಪಿ ನಡ್ಡಾ ಸಹ ಎನ್‌ಡಿಎನ ಒಂದು ದಿನದ ಸಮಾವೇಶದಲ್ಲಿ ಭಾಗವಹಿಸಿದ್ದರು. ಅಲ್ಲದೆ ಸುಮಾರು 19 ಮುಖ್ಯಮಂತ್ರಿ ಮತ್ತು ಅನೇಕ ಉಪಮುಖ್ಯ ಮಂತ್ರಿಗಳು ಭಾಗವಹಿಸಿದ್ದರು. ಮೋದಿ ಸರ್ಕಾರದ 3ನೇ ಅವಧಿಯ ಮೊದಲ ವಾರ್ಷಿಕೋತ್ಸವ, ಜಾತಿ ಗಣತಿ ಸೇರಿದಂತೆ ಹಲವು ವಿಷಯಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು ಎಂದು ಮೂಲಗಳು ತಿಳಿಸಿವೆ.

ಆರೋಗ್ಯ ವಿಚಾರಣೆ...



ಮೈಸೂರಿನಲ್ಲಿ ನಡೆದ ಬಸವ ಜಯಂತಿ ಕಾರ್ಯಕ್ರಮಕ್ಕೆ ಆಗಮಿಸುವ ವೇಳೆ ಅಪಘಾತಕ್ಕೀ ಡಾಗಿ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಹೆಚ್.ಡಿ.ಕೋಟೆ ತಾಲೂಕು ಕಟ್ಟೆಮನುಗನಹಳ್ಳಿ ಯುವಕರನ್ನು ಅಖಿಲ ಭಾರತ ವೀರಶೈವ ಮಹಾಸಭಾ ರಾಷ್ಟ್ರೀಯ ಮಹಾ ಪ್ರಧಾನ ಕಾರ್ಯದರ್ಶಿ ಹಾಗೂ ಅರಣ್ಯ ಸಚಿವ ಈಶ್ವರ ಖಂಡ್ರೆ ಭಾನುವಾರ ಭೇಟಿಯಾಗಿ, ಆರೋಗ್ಯ ವಿಚಾರಿಸಿದರಲ್ಲದೆ ಚಿಕಿತ್ಸೆಗೆ ವೈಯಕ್ತಿಕ ಧನಸಹಾಯ ಮಾಡಿದರು. ಈ ವೇಳೆ ಮೈಸೂರು ಜಿಲ್ಲಾ ವೀರಶೈವ ಮಹಾಸಭಾದ ಅಧ್ಯಕ್ಷ ಹಿನಕಲ್ ಬಸವರಾಜು, ಮೈಸೂರು ಬಸವ ಬಳಗದ ಮಾಜಿ ಅಧ್ಯಕ್ಷ ಎಂ.ಪ್ರದೀಪ್‌ಕುಮಾರ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಬಿ.ಜೆ.ವಿಜಯ್‌ಕುಮಾರ್, ಮುಖಂಡರಾದ ಸುರೇಶ್, ಗೌಡಿಕೆ ಶ್ರೀ ಚಂದ್ರು, ಮಹೇಶ್(ರೆಡ್ಡಿ), ಮಾಸ್ಟರ್ ಮಹದೇವಸ್ವಾಮಿ, ಬಹದ್ದೂರ್ ಸತೀಶ್ ಮತ್ತಿತರರಿದ್ದರು.

ಶಾಸಕರಿಗೆ ಅಭಿನಂದನೆ



ಮೈಸೂರಿನ ವಿನಾಯಕನಗರದ ಶ್ರೀ ಮಹಾಲಕ್ಷ್ಮೀ ದೇವಸ್ಥಾನದ 8ನೇ ವಾರ್ಷಿಕೋತ್ಸವದ ಪ್ರಯುಕ್ತ ನೆರವೇರಿದ ವಿಶೇಷ ಪೂಜೆ ಹಾಗೂ ಅನ್ನಸಂತರ್ಪಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಶಾಸಕ ಕೆ.ಹರೀಶ್‌ಗೌಡ ಅವರನ್ನು ಟ್ರಸ್ಟ್ ವತಿಯಿಂದ ಅಭಿನಂದಿಸಲಾಯಿತು. ಈ ವೇಳೆ ಟ್ರಸ್ಟ್ ಅಧ್ಯಕ್ಷ ಮಂಜುನಾಥ್, ಸಹ ಕಾರ್ಯದರ್ಶಿ ಕೃಷ್ಣ, ರಾಮಚಂದ್ರ, ಯೋಗೇಶ್, ಸಚಿನ್, ದಶರಥ ಹೇಮಂತ್, ಮಾದೇಶ್ ಮತ್ತಿತರರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No.114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಸೋಮವಾರ 26 ಮೇ 2025

ಎನ್‌ಸಿಸಿ ಕೆಡೆಟ್‌ಗಳಿಗೆ ಸಂಚಾರ ನಿಯಮ ಜಾಗೃತಿ



ಮೈಸೂರಿನ ಬೋಗಾದಿ ಸಮೀಪದ ಗದ್ದಿಗೆ ರಸ್ತೆಯಲ್ಲಿರುವ ಜವಾಹರಲಾಲ್ ನೆಹರು ನವೋದಯ ಶಾಲೆಯಲ್ಲಿ 600 ಎನ್‌ಸಿಸಿ ಕೆಡೆಟ್‌ಗಳಿಗೆ ಸಂಚಾರ ನಿಯಮ ಪಾಲನೆ ಹಾಗೂ ರಸ್ತೆ ಸುರಕ್ಷತೆ ಬಗ್ಗೆ ಜಾಗೃತಿ ಮೂಡಿಸಲಾಯಿತು.

ಮೈಸೂರು, ಮೇ 25(ಆರ್‌ಕೆ)– ಮೈಸೂರಿನ ಬೋಗಾದಿ ಸಮೀಪ ಗದ್ದಿಗೆ ರಸ್ತೆಯಲ್ಲಿರುವ ಜವಾಹರಲಾಲ್ ನೆಹರು ನವೋದಯ ಶಾಲೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 600 ಎನ್‌ಸಿಸಿ ಕೆಡೆಟ್‌ಗಳಿಗೆ ಸಂಚಾರ ನಿಯಮ ಪಾಲನೆ ಹಾಗೂ ರಸ್ತೆ ಸುರಕ್ಷತೆ ಬಗ್ಗೆ ಜಾಗೃತಿ ಮೂಡಿಸಲಾಯಿತು.

ವಿವಿ ಪುರಂ ಸಂಚಾರ ಠಾಣೆ ಸಬ್ ಇನ್ಸ್‌ಪೆಕ್ಟರ್ ಗೌತಮ್‌ಗೌಡ ಹಾಗೂ ಎನ್.ಆರ್.ಸಂಚಾರ ಠಾಣೆ ಸಬ್ ಇನ್ಸ್‌ಪೆಕ್ಟರ್ ಸಿದ್ದೇಶ್ ಪಾಲ್ಗೊಂಡು ಸಂಚಾರ ನಿಯಮದ ಬಗ್ಗೆ ಉಪನ್ಯಾಸ ನೀಡಿದರು.

ಸಾರ್ವಜನಿಕರ ಅಮೂಲ್ಯ ಪ್ರಾಣ ರಕ್ಷಿಸುವ ಉದ್ದೇಶದಿಂದ ಸಂಚಾರ ನಿಯಮಗಳನ್ನು ಪಾಲಿಸಬೇಕಾಗಿದೆ. ಅತೀ ವೇಗ, ಅಜಾಗರೂಕತೆ ಚಾಲನೆ, ಮದ್ಯಪಾನ ಮಾಡಿ ವಾಹನ ಓಡಿಸುವುದರಿಂದ ನಿಯಂತ್ರಣ ತಪ್ಪಿ ಅಪಘಾತಗಳು ಸಂಭವಿಸುತ್ತವೆ. ಅದರಿಂದ ವಾಹನ ಚಾಲಕರು, ಸವಾರರಿಗಷ್ಟೇ ಅಲ್ಲದೇ, ಇತರ ಅಮಾಯಕರಿಗೂ ಗಾಯಗಳಾಗಿ ಶಾಶ್ವತ ಅಂಗವಿಕಲರಾಗಬಹುದು ಅಥವಾ ಮೃತಪಡುವ ಸಾಧ್ಯತೆಗಳಿರುತ್ತವೆ ಎಂಬುದನ್ನು ಸಿದ್ದೇಶ್ ಎನ್‌ಸಿಸಿ ಕೆಡೆಟ್‌ಗಳಿಗೆ ನಿದರ್ಶನಗಳ ಸಮೇತ ವಿವರಿಸಿದರು.

ಹೆಲ್ಮೆಟ್, ಸೀಟ್ ಬೆಲ್ಟ್ ಧರಿಸದೇ ವಾಹನ ಚಾಲನೆ, ತ್ರಿಬಲ್ ರೈಡಿಂಗ್, ಒನ್ ವೇ ವಿರುದ್ಧ ಚಾಲನೆ, ನೋ ಪಾರ್ಕಿಂಗ್ ಸ್ಥಳದಲ್ಲಿ ವಾಹನ ನಿಲ್ಲಿಸುವುದು, ಸಿಗ್ನಲ್ ಜಂಪ್, ವ್ಹೀಲಿಂಗ್ ಮಾಡುವುದು, ಸೈಲೆನ್ಸರ್ ಬದಲಿಸಿಕೊಂಡು ಕರ್ಕಶ ಶಬ್ದ ಸೂಸುವಂತೆ ವಾಹನ ಚಾಲನೆ ಮಾಡಿ ಇತರರಿಗೆ ಕಿರಿಕಿರಿ ಉಂಟು ಮಾಡುವುದು, ಡಿಎಲ್ ಹೊಂದಿರದ ಅಪ್ರಾಪ್ತರು ವಾಹನ ಚಾಲನೆ ಮಾಡುವುದು ಕಾನೂನಿಗೆ ವಿರುದ್ಧ ಕ್ರಮವಾದ್ದರಿಂದ ಸಾಮಾನ್ಯವಾಗಿ ಯುವಕರು ಸಂಚಾರ ನಿಯಮ ಉಲ್ಲಂಘಿಸುತ್ತಿರುವುದು ಕಂಡು ಬರುತ್ತಿದೆ ಎಂದು ಸಿದ್ದೇಶ್ ಎನ್‌ಸಿಸಿ ಕೆಡೆಟ್‌ಗಳಿಗೆ ತಿಳಿಸಿದರು.

ನಿಯಮ ಪಾಲಿಸುವುದರಿಂದ ಅಪಘಾತವಾಗುವುದನ್ನು ತಪ್ಪಿಸಿ ಅಮೂಲ್ಯ ಪ್ರಾಣ ರಕ್ಷಿಸಿಕೊಳ್ಳಬಹುದಾಗಿದೆ. ಕಾನೂನು, ಪೊಲೀಸರಿಗೆ ಹೆದರಿ ಹೆಲ್ಮೆಟ್ ಧರಿಸುವುದು ಸರಿಯಲ್ಲ. ಅಪಾಯದಿಂದ ತಪ್ಪಿಸಿಕೊಳ್ಳಲು ಕಡ್ಡಾಯವಾಗಿ ಸಂಚಾರ ನಿಯಮ ಪಾಲಿಸುವಂತೆಯೂ ಕಿವಿಮಾತು ಹೇಳಿದರು. ಇಂದು ಮೈಸೂರು–ಬೆಂಗಳೂರು ಹೆದ್ದಾರಿಯ ಕಳಸ್ತವಾಡಿಯಲ್ಲಿರುವ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಟ್ರಸ್ಟ್‌ನ ಧರ್ಮಸ್ಥಳ ಮಾನವ ಸಂಪನ್ಮೂಲ ತರಬೇತಿ ಕೇಂದ್ರದಲ್ಲೂ ಸಿದ್ದೇಶ್, ಅಲ್ಲಿನ ಪ್ರಶಿಕ್ಷಣಾರ್ಥಿಗಳಿಗೆ ಸಂಚಾರದ ಅರಿವು ಮೂಡಿಸಿದರು.

ಮೈಸೂರು ವಿವಿ ಪೀಠೋಪಕರಣ, ಸಿಸಿ ಕ್ಯಾಮರಾ ಖರೀದಿಯಲ್ಲಿ ಅವ್ಯವಹಾರ

ವಿವಿ ಕುಲಪತಿ, ಕುಲಸಚಿವರ ವಿರುದ್ಧ ಲೋಕಾಯುಕ್ತಕ್ಕೆ ದೂರು

ಮೈಸೂರು, ಮೇ25(ಜಿಎ)–ಮೈಸೂರು ವಿಶ್ವವಿದ್ಯಾನಿಲಯದ ಪೀಠೋಪಕರಣ, ಸಿಸಿ ಕ್ಯಾಮರಾ ಖರೀದಿಯಲ್ಲಿ ವಿವಿಯ ಕುಲಪತಿ ಹಾಗೂ ಕುಲಸಚಿವರು ಅವ್ಯವಹಾರ ನಡೆಸಿದ್ದಾರೆ ಎಂದು ಆರೋಪಿಸಿರುವ ವಕೀಲ ಜಿ.ಎನ್.ಕಾರ್ತಿಕ್ ಈ ಸಂಬಂಧ ಲೋಕಾಯುಕ್ತಕ್ಕೆ ದೂರು ನೀಡಿರುವುದಾಗಿ ತಿಳಿಸಿದ್ದಾರೆ.

ಮೈಸೂರಿನ ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿವಿಯ ಸ್ಕೂಲ್ ಆಫ್ ಇಂಜಿನಿಯರಿಂಗ್ ವಿಭಾಗಕ್ಕೆ ಅವಶ್ಯವಿರುವ ಪೀಠೋಪಕರಣ ಖರೀದಿಸಲು 2024ರ ಮಾರ್ಚ್ 14ರಂದು ಟೆಂಡರ್ ಕರೆಯಲಾಗಿದೆ. ಅದರಲ್ಲಿ ಶೀತಲ್ ಪ್ರಾಡೆಕ್ಟ್, ಓಪನ್ ಸಿಸ್ಟೆನ್ಸ್ ಅಂಡ್ ಇಂಜಿನಿಯರಿಂಗ್ಸ್, ಅರವಿಂದ ಇಂಟೀರಿಯರ್, ಚೈಲ್ಡ್ ವುಡ್ ಪ್ಲೇ ಮತ್ತು ಲೈಫ್ ಲಿಂಕ್ ಅಸೋಸಿಯೇಟ್ ಸಂಸ್ಥೆಗಳು ಪಾಲ್ಗೊಂಡಿವೆ. ಇವುಗಳಲ್ಲಿ ಲೈಫ್ ಲಿಂಕ್ ಅಸೋಸಿಯೇಟ್ ಸಂಸ್ಥೆಯೂ 1,49,99,900 ರೂ. ಕಡಿಮೆಗೆ ಬಿಡ್ ಮಾಡಿದ್ದಾರೆ. ಆದರೆ, ತಾಂತ್ರಿಕ ಕಾರಣ ನೀಡಿ ಅವರನ್ನು ಟೆಂಡರ್ ಪ್ರಕ್ರಿಯೆಯಿಂದ ತಿರಸ್ಕರಿಸಿ, ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಮತ್ತು ಹಿಂದಿನ ಕುಲಸಚಿವೆ ವಿ.ಆರ್.ಶೈಲಜಾರಿಗೆ ಆಪ್ತರಾದ ಶೀತಲ್ ಪ್ರಾಡೆಕ್ಟ್ ಮತ್ತು ಅರವಿಂದ ಇಂಟೀರಿಯರ್ ಸಂಸ್ಥೆಗಳಿಗೆ 2,16,11,525 ರೂ. ಟೆಂಡರ್ ನೀಡುವ ಮೂಲಕ 67 ಲಕ್ಷ ರೂ. ನಷ್ಟ ಮಾಡಿದ್ದಾರೆ ಎಂದರು.

4,850 ರೂ. ಇರುವ ಒಂದು ಡೆಸ್ಕ್ ಅನ್ನು ಶೀತಲ್ ಪ್ರಾಡೆಕ್ಟ್ ಸಂಸ್ಥೆಯೂ ಅರವಿಂದ ಇಂಟಿರಿಯರ್‌ಗೆ ನೀಡಿದ್ದು, ಅವರು ಶೇ.7 ಪಟ್ಟು ಅಧಿಕ ಮೊತ್ತವಾದ 28,500 ರೂ.ಗೆ ಮಾರಾಟ ಮಾಡಿದ್ದಾರೆ. ಈ ಸಂಬಂಧ ಲೋಕಾಯುಕ್ತಕ್ಕೆ ದೂರು ಸಲ್ಲಿಸಲಾಗಿದ್ದು, ದೂರಿನ ನಂತರ ಸಂಬಂಧಪಟ್ಟವರಿಗೆ ಲೋಕಾಯುಕ್ತ ನೋಟಿಸ್ ನೀಡಿದ್ದಾರೆ. ಸೋಮವಾರ ಎಫ್‌ಐಆರ್ ಆಗುವ ಸಾಧ್ಯತೆ ಇದೆ ಎಂದರು.

ಮೈಸೂರು ವಿಶ್ವವಿದ್ಯಾನಿಯಕ್ಕೆ ವಿಶ್ವದಾದ್ಯಂತ ಹೆಸರಿದೆ. ಇಂತಹ ಸಂಸ್ಥೆಯನ್ನು ಹಾಳು ಮಾಡುವುದು ಸರಿಯಲ್ಲ. ವಿವಿಯಲ್ಲಿ ನಡೆಯುತ್ತಿರುವ ಅವ್ಯವಹಾರಗಳು ಬೆಳಕಿಗೆ ಬರುವ ಸಾಧ್ಯತೆ ಇದ್ದು, ಪ್ರತಿ ವರ್ಷ ಮಂಡಿಸುವ 400 ಕೋಟಿ ರೂ. ಬಜೆಟ್‌ನಲ್ಲಿ ಎಷ್ಟು ಅವ್ಯವಹಾರ ನಡೆದಿರಬೇಕು ಎಂಬುದನ್ನು ಮುಂದಿನ ದಿನಗಲ್ಲಿ ಬಯಲಿಗೆಳೆಯುತ್ತೇವೆ ಎಂದು ತಿಳಿಸಿದರು.

ಬಿ–ಖಾತೆಗೆ ಹೆಚ್ಚುವರಿ ಸ್ವತ್ತು ತೆರಿಗೆ ಕಟ್ಟಿಸಿಕೊಳ್ಳುತ್ತಿರುವುದು ನ್ಯಾಯಸಮ್ಮತವಲ್ಲ

ಮೈಸೂರು, ಮೇ25(ಜಿಎ)–ನಗರ ಪಾಲಿಕೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಭೂ ಪರಿವರ್ತನೆ, ನಕ್ಷೆ ಮಂಜೂರಾತಿ ಮಾಡಿಕೊಳ್ಳದೆ ಕಂದಾಯ ಭೂಮಿಗಳಲ್ಲಿ ಕಟ್ಟಡಗಳನ್ನು ಕಟ್ಟಿಕೊಂಡಿದ್ದರೆ ಅಂತಹವರಿಗೆ ಬಿ ಖಾತಾ ನೀಡಲು ನಗರಪಾಲಿಕೆ ಅಧಿಕಾರಿಗಳು ಹೆಚ್ಚುವರಿ ಸ್ವತ್ತು ತೆರಿಗೆ ಕಟ್ಟಿಸಿಕೊಳ್ಳುತ್ತಿದ್ದು, ಇದು ನ್ಯಾಯಸಮ್ಮತವಲ್ಲ ಎಂದು ವಕೀಲ ಎನ್.ಪುನೀತ್ ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರದ ಆದೇಶದಂತೆ ಕರ್ನಾಟಕ ಮುನ್ಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು ಅಧಿನಿಯಮ 2024ರಂತೆ ತಿದ್ದುಪಡಿ ಮಾಡಿ ನಗರಪಾಲಿಕೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಕಂದಾಯ ಜಾಗದಲ್ಲಿ ನಿರ್ಮಿಸಿರುವ ಮನೆಗಳಿಗೆ ಬಿ ಖಾತೆ ಅವಧಿಯನ್ನು 3 ತಿಂಗಳು ವಿಸ್ತರಿಸಿದೆ. ಅದರಂತೆ ವಾಸಕ್ಕೆ ಬಳಸುತ್ತಿರುವ ಕಟ್ಟಡಕ್ಕೆ ಮೊದಲ ವರ್ಷಕ್ಕಾಗಿ ಎರಡು ಪಟ್ಟು ಸ್ವತ್ತು ತೆರಿಗೆ ವಿಧಿಸಬಹುದು ಹಾಗೂ ನಂತರದ ವರ್ಷಗಳಲ್ಲಿ ಸ್ವತ್ತು ತೆರಿಗೆಯನ್ನು ಮಾತ್ರ ವಿಧಿಸತಕ್ಕದ್ದು, ಅದನ್ನು ಒಂದು ಪ್ರತ್ಯೇಕ ರಿಜಿಸ್ಟರ್‌ನಲ್ಲಿ ನಿರ್ವಹಿಸಬೇಕು ಎಂದರು.

ಪಾಲಿಕೆಯ ವಲಯ ಕಚೇರಿಗಳಲ್ಲಿ ಅಧಿಕಾರಿಗಳು ಬಿ ಖಾತಾ ಪಡೆಯಲು ಬರುವ ಸಾರ್ವಜನಿಕರ ಬಳಿ ಪ್ರಸಕ್ತ ವರ್ಷದಿಂದ ಹಿಂದಿನ 6 ವರ್ಷಗಳಿಗೆ ಕಂದಾಯ ಕಟ್ಟಬೇಕು. ಹಾಗಾದರೆ ಮಾತ್ರ ಬಿ ಖಾತೆ ನೀಡಲಾಗುವುದು ಎಂದು ಹೇಳಿ, ಸಾರ್ವಜನಿಕರ ಬಳಿ 6 ವರ್ಷಗಳಿಗೆ ಕಂದಾಯ ಕಟ್ಟಿಸಿಕೊಳ್ಳುತ್ತಿದ್ದಾರೆ. ಈಗಾಗಲೇ ಯಾವುದೇ ಪಾಲಿಕೆ ದಾಖಲೆಗಳು ಇಲ್ಲದೆ ಮನೆಗಳಿಗೆ ಬಿ ಖಾತೆ ಸಿಗುತ್ತಿದೆ ಎಂಬ ಭರದಲ್ಲಿ ಸಾರ್ವಜನಿಕರು ನಗರಪಾಲಿಕೆ ಅಧಿಕಾರಿಗಳು ತಿಳಿಸಿದಂತೆ 6 ವರ್ಷಗಳಿಗೆ ಲಕ್ಷಾಂತರ ರೂ. ತಂದು ಕಟ್ಟಿ ಬಿ ಖಾತೆ ಪಡೆಯುತ್ತಿದ್ದಾರೆ ಎಂದರು.

ಸರ್ಕಾರದ ಆದೇಶದಲ್ಲಿಯೇ ಕಟ್ಟಡಕ್ಕೆ ಮೊದಲ ವರ್ಷಕ್ಕಾಗಿ ಎರಡು ಪಟ್ಟು ಸ್ವತ್ತು ತೆರಿಗೆ ವಿಧಿಸಬಹುದು ಮತ್ತು ನಂತರದ ವರ್ಷಗಳಿಗೆ ಸ್ವತ್ತು ತೆರಿಗೆಯನ್ನು ಮಾತ್ರ ವಿಧಿಸಬೇಕು. ಆದರೆ ಅಧಿಕಾರಿಗಳು ಹೆಚ್ಚಿನ ತೆರಿಗೆ ವಿಧಿಸಿ ಜನರನ್ನು ಸಂಕಷ್ಟಕ್ಕೆ ದೂಡುತ್ತಿದ್ದಾರೆ. ಇದು ನನ್ನದೇ ಅನುಭವವಾಗಿದ್ದು, ಇದನ್ನು ಪ್ರಶ್ನಿಸಿದ ಬಳಿಕ ಒಂದು ವರ್ಷದ ತೆರಿಗೆಯನ್ನು ಮಾತ್ರ ಪಾವತಿಸಿಕೊಂಡಿರುವುದಾಗಿ ಅವರು ವಿವರಿಸಿದರು.

ಸಾಮೂಹಿಕ ಉಪನಯನ ಕಾರ್ಯಕ್ರಮ

ಮೈಸೂರು: ಮೈಸೂರಿನ ನರಸಿಂಹರಾಜ ವಿಪ್ರ ಸಂಘವು ಜೂ.2ರಂದು ರಾಜೇಂದ್ರ ನಗರ (ಕೆಸರೆ) 10ನೇ ಕ್ರಾಸ್‌ನಲ್ಲಿರುವ ಶ್ರೀ ಗಾಯತ್ರಿ ರಾಮಮಂದಿರದಲ್ಲಿ ಸಾಮೂಹಿಕ ಉಪನಯನ ಏರ್ಪಡಿಸಲಾಗಿದೆ. ವಟುಗಳ ನೋಂದಣಿಗೆ ಮೇ 30 ಕೊನೆ ದಿನಾಂಕ. ಮಾಹಿತಿಗೆ ಮೊ. 9886089350, 9900026127, 9341911582 ಸಂಪರ್ಕಿಸಿ.

ರಂಗಭೂಮಿ ಪ್ರಯೋಗಶೀಲತೆ ಜನರ ಮನಸ್ಸಿನ ಮೇಲೆ ಸಾತ್ವಿಕ, ವೈಚಾರಿಕ ಮನೋಭಾವ ಮೂಡಿಸುವಂತಿರಬೇಕು

ವಿಚಾರ ಸಂಕಿರಣದಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ನಾಗರಾಜ ಮೂರ್ತಿ ಅಭಿಪ್ರಾಯ



ಕರ್ನಾಟಕ ನಾಟಕ ಅಕಾಡೆಮಿ, ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ ಸಹಯೋಗದಲ್ಲಿ ಕಲಾಮಂದಿರದ ಆವರಣದಲ್ಲಿರುವ ಕಿರುರಂಗಮಂದಿರದಲ್ಲಿ 'ಅಧುನಿಕ ಕನ್ನಡ ರಂಗಭೂಮಿ–ಪ್ರಯೋಗಶೀಲತೆ' ವಿಷಯ ಕುರಿತು ನಡೆದ ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ಕನ್ನಡ–ಸಂಸ್ಕೃತಿ ಇಲಾಖೆ ನಿರ್ದೇಶಕಿ ಕೆ.ಎಂ.ಗಾಯತ್ರಿ ಉದ್ಘಾಟಿಸಿದರು.

ಮೈಸೂರು, ಮೇ25(ಜಿಎ)–ರಂಗಭೂಮಿಯ ಪ್ರಯೋಗಶೀಲತೆಯು ಜನರ ಮನಸ್ಸಿನ ಮೇಲೆ ಸಾತ್ವಿಕ ಮತ್ತು ವೈಚಾರಿಕ ಮನೋಭಾವ ಮೂಡಿಸುವಂತೆ ಇರಬೇಕು ಎಂದು ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ.ನಾಗರಾಜ ಮೂರ್ತಿ ಅಭಿಪ್ರಾಯಪಟ್ಟರು.

ಕರ್ನಾಟಕ ನಾಟಕ ಅಕಾಡೆಮಿ, ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ ಸಹಯೋಗದಲ್ಲಿ ಕಲಾಮಂದಿರದ ಆವರಣದಲ್ಲಿರುವ ಕಿರುರಂಗ ಮಂದಿರದಲ್ಲಿ 'ಅಧುನಿಕ ಕನ್ನಡ ರಂಗಭೂಮಿ–ಪ್ರಯೋಗಶೀಲತೆ' ವಿಷಯ ಕುರಿತು ನಡೆದ ರಾಜ್ಯ ಮಟ್ಟದ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಭಾರತೀಯ ರಂಗಭೂಮಿಗೆ ಅತ್ಯಂತ ಹೆಚ್ಚು ಕ್ರಿಯಾಶೀಲತೆ ನೀಡಿರುವುದು ಕನ್ನಡ ರಂಗಭೂಮಿ. ಬಹಳಷ್ಟು ನಿರ್ದೇಶಕರು ವೈವಿಧ್ಯತೆ ನೀಡಿದ್ದಾರೆ ಎಂದರು.

ಇತ್ತೀಚಿನ ದಿನಗಳಲ್ಲಿ ರಂಗಭೂಮಿಯ ವೈಶಿಷ್ಟ್ಯತೆ ಹಿಮ್ಮುಖವಾಗಿ ಚಲಿಸುತ್ತಿದೆ. ಕಳೆದ 2 ವರ್ಷಗಳ ಹಿಂದೆ ಭಾರತೀಯ ಸಂಸ್ಕೃತಿ ಎಂಬ ಹೆಸರಿನಲ್ಲಿ ವೈದಿಕ ಪರಂಪರೆಯ ವೈಭವೀಕರಣ ಹೆಚ್ಚಾಗಿದೆ. ಭಾರತೀಯ ಸಂಸ್ಕೃತಿ ಎಂದರೆ, ಭಾರತದ ವೈದಿಕ ಸಂಸ್ಕೃತಿಯಲ್ಲ. ಆದಿವಾಸಿ, ಬುಡಕಟ್ಟು ಸಮುದಾಯದ ಸಂಸ್ಕೃತಿ ನಿಜವಾದ ಸಂಸ್ಕೃತಿ ಎಂದು ತಿಳಿಸಿದರು.

ಮಹಿಳೆಯರನ್ನು ಕೀಳಾಗಿ ಕಾಣುವ ಮತ್ತು ಇತಿಹಾಸವನ್ನು ತಿರುಚುವ ನಾಟಕ ಪ್ರದರ್ಶನ ಮೈಸೂರಿನ ಹಿರಿಯ ಸಾಹಿತಿ, ರಂಗಾಯಣದ ಮಾಜಿ ನಿರ್ದೇಶಕರಿಂದ ಮೈಸೂರಿನಲ್ಲಿ ನಡೆದಿದ್ದು, ಇದನ್ನು ಕಂಡು ಬೇಸರ ವ್ಯಕ್ತವಾಯಿತು. ರಂಗಭೂಮಿಯ ಕಲಾವಿದರು ಸದಾ ಎಚ್ಚರಿಕೆಯಿಂದ ಇರಬೇಕು. ರಂಗಭೂಮಿ ಸಮಾಜವನ್ನು ತಿದ್ದುವ ದೊಡ್ಡ ಮಾಧ್ಯಮವಾಗಿದೆ. ಹಾಗಾಗಿ ಮಾಡುವ ಪ್ರತಿಯೊಂದು ಪ್ರಯೋಗವನ್ನು ಜನರು ಸೂಕ್ಷ್ಮವಾಗಿ ನೋಡುತ್ತಾರೆ. ಸಾಮಾಜಿಕ ಸಮತೋಲನ ಕಾಪಾಡಿಕೊಳ್ಳಬೇಕು. ಜನರಿಗೆ ಹೇಗೆ ಹತ್ತಿರವಾಗಬೇಕು ಎಂದು ಜನರ ಸಂಸ್ಕೃತಿಯನ್ನು ರಂಗರೂಪ ನೀಡುತ್ತೇವೆ ಎಂದು ಕಾಯಕ ಸಮುದಾಯದವರಿಗೆ ನೋವಾಗದಂತೆ ಮಾಡಬಾರದು ಎಂದರು. ಬಿ.ವಿ.ಕಾರಂತರು ಪ್ರಯೋಗಶೀಲತೆ, ವೃತ್ತಿ ರಂಗಭೂಮಿಗಾಗಿ ರಂಗಾಯಣ ಕಟ್ಟಿದರು. ರಂಗಾಯಣದ ನಾಟಕ ಎಂದರೆ ರಾಜ್ಯದ ಜನರು ನೋಡುತ್ತಾರೆ. ರಂಗಾಯಣ ಉತ್ತಮ ಮಾರ್ಗ ನೀಡಿದೆ. ಅದನ್ನು ಅನುಸರಿಸಬೇಕು. ವೃತ್ತಿ ರಂಗಭೂಮಿಗಾಗಿ ಇರುವ ರಂಗಾಯಣವನ್ನು ಸರ್ಕಾರ ವೃತ್ತಿ ರಂಗಭೂಮಿ ಬಿಟ್ಟು ಬೇರೆ ಕೆಲಸ ಮಾಡಬಾರದು. ಅದರಿಂದ ಅಪಚಾರವಾಗುತ್ತದೆ. ಪ್ರಯೋಗಶೀಲತೆಯಿಂದ ಸಮಾಜಮುಖಿಯಾಗಿರಬೇಕು ಎಂದರು.

ರಂಗಭೂಮಿಯಿಂದ ಸಮಾಜದಲ್ಲಿ ಬದಲಾವಣೆ ಸಾಧ್ಯ. ಇತ್ತೀಚಿನ ವರ್ಷಗಳಲ್ಲಿ ರಂಗಭೂಮಿಯ ಕಡೆ ಯುವಕರು ಆಸಕ್ತಿ ತೋರುವುದಿಲ್ಲ ಎಂಬ ಆರೋಪವಿತ್ತು. ಆದರೆ ಪ್ರಸ್ತುತ ಯುವಕ ಯುವತಿಯರು ರಂಗ ತರಬೇತಿಯನ್ನು ಪಡೆಯುತ್ತಿದ್ದಾರೆ. ಇದು ಆಶಾದಾಯಕ ಬೆಳವಣಿಗೆ ಎಂದು ಕನ್ನಡ–ಸಂಸ್ಕೃತಿ ಇಲಾಖೆ ನಿರ್ದೇಶಕಿ ಕೆ.ಎಂ.ಗಾಯತ್ರಿ ಸಂತಸ ವ್ಯಕ್ತಪಡಿಸಿದರು.

ರಂಗ ಪ್ರಯೋಗದ ಜೊತೆಗೆ ವಿಚಾರ ಸಂಕಿರಣಗಳು ನಡೆದಾಗ ಹಿರಿಯ ರಂಗ ನಿರ್ದೇಶಕರ ಅನುಭವವನ್ನು ಕಿರಿಯ ಕಲಾವಿದರು ಕಲಿಯಲು ಅನುಕೂಲವಾಗುತ್ತದೆ. ಹೊಸ ತಲೆಮಾರಿನ ಸಮುದಾಯಗಳ ಆಲೋಚನೆಗಳು ವಿಭಿನ್ನವಾಗಿವೆ. ಆಧುನಿಕತೆಯ ಪ್ರಭಾವದಿಂದ ತಂತ್ರಜ್ಞಾನವೂ ಬದಲಾಗುತ್ತಿದೆ. ಇದರ ಪರಿಣಾಮವಾಗಿ ಸಾಹಿತ್ಯ ಮತ್ತು ರಂಗಭೂಮಿಯಲ್ಲೂ ಸಾಕಷ್ಟು ಬದಲಾವಣೆಗಳು ಆಗುತ್ತಿವೆ. ಕಲಾ ಪ್ರಕಾರಗಳು ತಂತ್ರಜ್ಞಾನವನ್ನು ಬಳಸಿಕೊಂಡು ಸಮಾಜಮುಖಿಯಾಗಿ ತೊಡಗಿಸಿಕೊಳ್ಳಬೇಕಾದ ಅಗತ್ಯವಿದೆ ಎಂದು ಸಲಹೆ ನೀಡಿದರು.

ಯಾವುದೇ ಒಂದು ಕೃತಿಯನ್ನು ರಂಗಪಠ್ಯವಾಗಿ ರೂಪಿಸಿ ನಾಟಕವಾಗಿ ಪರಿವರ್ತಿಸುವಾಗ ಮೂಲ ಕೃತಿಯ ಆಶಯಕ್ಕೆ ಧಕ್ಕೆ ಆಗದ ರೀತಿಯಲ್ಲಿ ಎಚ್ಚರಿಕೆ ವಹಿಸಬೇಕು. ನಾಟಕ, ಸಾಹಿತ್ಯ ಇತ್ಯಾದಿ ಕಲಾ ಪ್ರಕಾರಗಳಿಗೆ ಸಂಬಂಧಿಸಿದ ವಿಮರ್ಶೆಗಳು ವಸ್ತುನಿಷ್ಠವಾಗಿ ಆಗಬೇಕು. ಆಗ ಸಾಹಿತ್ಯ ಚಟುವಟಿಕೆಗಳು ಚೆನ್ನಾಗಿ ನಡೆಯುತ್ತವೆ ಎಂದರು. ಕಾರ್ಯಕ್ರಮದಲ್ಲಿ ರಂಗಾಯಣದ ಮಾಜಿ ನಿರ್ದೇಶಕ ಸಿ.ಬಸವಲಿಂಗಯ್ಯ, ಚಲನಚಿತ್ರ ನಿರ್ದೇಶಕ ಬಿ.ಸುರೇಶ್, ಕರ್ನಾಟಕ ನಾಟಕ ಅಕಾಡೆಮಿ ಸದಸ್ಯ ಸಂಚಾಲಕರಾದ ಡಾ.ಎಂ.ಎ.ಜಾಹೀದಾ, ಹಿರಿಯ ರಂಗಕರ್ಮಿಗಳಾದ ಶಿವಾಜಿ ರಾವ್ ಜಾಧವ್, ಕೃಷ್ಣ ಜನಮನ, ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ ಅಧ್ಯಕ್ಷ ರಾಜೇಶ್ ಹೆಚ್.ತಲಕಾಡು ಮತ್ತಿತರರು ಉಪಸ್ಥಿತರಿದ್ದರು.



ಸ್ವಾಗತ...
ಕಾರ್ಯ ನಿಮಿತ್ತ ಇತ್ತೀಚೆಗೆ ಮೈಸೂರಿಗೆ ಆಗಮಿಸಿದ್ದ ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರನ್ನು ಮೈಸೂರು ಕಾಂಗ್ರೆಸ್ ಮುಖಂಡರು ಅದ್ದೂರಿಯಾಗಿ ಸ್ವಾಗತಿಸಿದರು. ಅಲ್ಲದೆ, ಮಾಜಿ ಕಾರ್ಪೋರೇಟರ್ ಲೋಕೇಶ್ ಪಿಯಾ ನೇತೃತ್ವದಲ್ಲಿ ಖಾಸಗಿ ಹೋಟೆಲ್‌ನಲ್ಲಿ ಬೃಹತ್ ಹಾರ ಹಾಕಿ, ಸನ್ಮಾನಿಸಲಾಯಿತು. ಈ ವೇಳೆ ಶಾಸಕರಾದ ಕೆ.ಹರೀಶ್‌ಗೌಡ, ಅನಿಲ್ ಚಿಕ್ಕಮಾಧು ಅವರನ್ನೂ ಅಭಿನಂದಿಸಲಾಯಿತು.

ಮೇ 29, ವೀರ ಸಾವರ್ಕರ್ ಸಮ್ಮಾನ್ ಪ್ರಶಸ್ತಿ ಪ್ರದಾನ ಸಮಾರಂಭ

ಮೈಸೂರು, ಮೇ25(ಎಂಟಿವೈ)– ಮೈಸೂರಿನ ಕಲಾಮಂದಿರದಲ್ಲಿ ಮೇ 29ರಂದು ಸಂಜೆ 5.30ಕ್ಕೆ ಸಾವರ್ಕರ್ ಪ್ರತಿಷ್ಠಾನದ ವತಿಯಿಂದ ವೀರ ಸಾವರ್ಕರ್ ಸಮ್ಮಾನ್ ಪ್ರಶಸ್ತಿ ಪ್ರಧಾನ ಸಮಾರಂಭ ಆಯೋಜಿಸಿದೆ. ಸಾವರ್ಕರ್‌ರ 142ನೇ ಜಯಂತಿ ಅಂಗವಾಗಿ 2025ನೇ ಸಾಲಿನ ವೀರ ಸಾವರ್ಕರ್ ಸಮ್ಮಾನ್ ಪ್ರಶಸ್ತಿಗೆ ಬೆಂಗಳೂರಿನ ವಂದೇ ಮಾತರಂ ಪಾಠಶಾಲೆಯ ಸಂಸ್ಥಾಪಕ, ಲೇಖಕ ಡಾ.ಜಿ.ಬಿ.ಹರೀಶ್ ಅವರನ್ನು ಆಯ್ಕೆ ಮಾಡಲಾಗಿದೆ. ಮೇ 29ರಂದು ಕಲಾಮಂದಿರದಲ್ಲಿ ಸಂಜೆ 5.30ಕ್ಕೆ ನಡೆಯಲಿರುವ ಕಾರ್ಯಕ್ರಮದಲ್ಲಿ ಸಂಸದ ಯದುವೀರ ಒಡೆಯರ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಮುಖ್ಯ ಅತಿಥಿಯಾಗಿ ವೈದ್ಯ ಡಾ.ಚಂದ್ರಶೇಖರ್ ಪಾಲ್ಗೊಳ್ಳಲಿದ್ದು, ಪ್ರತಿಷ್ಠಾನದ ಅಧ್ಯಕ್ಷೆ ಡಾ.ಎಸ್.ಯಶಸ್ವಿನಿ ಅಧ್ಯಕ್ಷತೆ ವಹಿಸಲಿದ್ದಾರೆ. ಪ್ರತಿಷ್ಠಾನದ ರಾಕೇಶ್ ಭಟ್, ಶಿವಕುಮಾರ್ ಚಿಕ್ಕಕಾನ್ಯ, ಸಂದೇಶ್ ಪಾಲ್ಗೊಳ್ಳಲಿದ್ದಾರೆ.

ಬೂಕರ್ ಪುರಸ್ಕೃತ ಬಾನು ಮುಷ್ತಾಕ್ ಕನ್ನಡಿಗರ ಹೆಮ್ಮೆಯ ಮಗಳು

ಮೈಸೂರು ಡಿಡಿಪಿಐ ಕಚೇರಿಯ ಸಹಾಯಕ ಸಂಯೋಜನಾಧಿಕಾರಿ ಜಿ.ವೆಂಕಟಾಚಲ ಅಭಿಮತ



ಮೈಸೂರು ನಮನ ಕಲಾಮಂಟಪದಲ್ಲಿ ಹೊಯ್ಸಳ ಕನ್ನಡ ಸಂಘ, ಸವಿಗನ್ನಡ ಬಳಗದಿಂದ ಭಕ್ತಕವಿ ಪುತಿನ, ದಾಂಪತ್ಯ ಕವಿ ಕೆಎಸ್‌ನ ಸಂಸ್ಮರಣಾ ಕಾರ್ಯಕ್ರಮದಲ್ಲಿ ಸಾಧಕರನ್ನು ಸನ್ಮಾನಿಸಲಾಯಿತು.

ಮೈಸೂರು, ಮೇ 25(ಎಸ್‌ಪಿಎನ್)– ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿಗೆ ಭಾಜನರಾದ ಕನ್ನಡದ ಹೆಸರಾಂತ ಸಾಹಿತಿ ಬಾನು ಮುಷ್ತಾಕ್ ಅವರು ಕನ್ನಡಿಗರ ಹೆಮ್ಮೆಯ ಮಗಳು. ಅವರ ಸಾಹಿತ್ಯ ಕ್ಷೇತ್ರದ ಸಾಧನೆ ಇಂದಿನ ಯುವ ಸಮೂಹಕ್ಕೆ ಮಾರ್ಗದರ್ಶಕ ಎಂದು ಶಾಲಾ ಶಿಕ್ಷಣ ಇಲಾಖೆ ಮೈಸೂರು ಡಿಡಿಪಿಐ ಕಚೇರಿ ಸಹಾಯಕ ಸಂಯೋಜನಾಧಿಕಾರಿ ಜಿ.ವೆಂಕಟಾಚಲ ಅಭಿಪ್ರಾಯಪಟ್ಟರು.

ಮೈಸೂರು ಕೃಷ್ಣಮೂರ್ತಿಪುರಂನ ನಮನ ಕಲಾಮಂಟಪದಲ್ಲಿ ಹೊಯ್ಸಳ ಕನ್ನಡ ಸಂಘ ಹಾಗೂ ಸವಿಗನ್ನಡ ಬಳಗದ ವತಿಯಿಂದ ಭಕ್ತಕವಿ ಪುತಿನ, ದಾಂಪತ್ಯ ಕವಿ ಕೆಎಸ್‌ನ ಸಂಸ್ಮರಣೆ ಹಾಗೂ ವಿವಿಧ ಕ್ಷೇತ್ರದ ಸಾಧಕರಿಗೆ ಅಭಿನಂದಿಸುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಲೇಖಕಿ ಬಾನು ಮುಷ್ತಾಕ್ ರಚಿಸಿದ 12 ಸಣ್ಣಕಥೆಗಳ ಅನುವಾದಿತ ಸಂಕಲನ 'ಹಾರ್ಟ್ ಲ್ಯಾಂಪ್'ಗೆ ಬೂಕರ್ ಪ್ರಶಸ್ತಿ ಬಂದಿರುವುದು ಕನ್ನಡ ಸಾಹಿತ್ಯ, ಭಾಷಾ ಕ್ಷೇತ್ರ ಹೆಮ್ಮೆ ಪಡುವಂತಹುದು. ಈ ಕಾರ್ಯಕ್ಕೆ ಸಹಕರಿಸಿರುವ ಅನುವಾದಕಿ ದೀಪಾ ಭಸ್ತಿ ಅವರ ಕಾರ್ಯ ಶ್ಲಾಘನೀಯ ಎಂದರು.

1990 ಮತ್ತು 2023ರ ನಡುವೆ ಪ್ರಕಟಗೊಂಡ ಕಥೆಗಳ ಈ ಸಂಕಲನವನ್ನು ದೀಪಾ ಭಸ್ತಿ ಅವರು ಕನ್ನಡದಿಂದ ಇಂಗ್ಲಿಷ್‌ಗೆ ಅನುವಾದಿಸಿ, ಪ್ರಪಂಚಕ್ಕೆ ಕನ್ನಡ ಸಾಹಿತ್ಯದ ಮತ್ತೊಬ್ಬ ಲೇಖಕರನ್ನು ಪರಿಚಯಿಸಿದ್ದಾರೆ. ಈ ಸಂಕಲನದಲ್ಲಿ ಮುಸ್ಲಿಂ ಸಮುದಾಯದ ಹೆಣ್ಣು ಮಕ್ಕಳ ದೈನಂದಿನ ಬದುಕಿನ ಬವಣೆಗಳನ್ನು ಉಲ್ಲೇಖಿಸಿದ್ದಾರೆ. ಯುವ ದಂಪತಿಗಳ ಸುಖ ಸಂಸಾರಕ್ಕೆ ಕೆ.ಎಸ್.ನರಸಿಂಹಸ್ವಾಮಿ ಕವಿತೆಗಳು ಪ್ರೇರಣೆಯಾದರೆ, ಪುತಿನ ಬರಹಗಳು ಸುಂದರ ಬದುಕು, ವ್ಯಕ್ತಿತ್ವ ರೂಪಿಸಿಕೊಳ್ಳಲು ಸಹಕಾರಿಯಾಗಲಿವೆ ಎಂದರು.

ಈ ವೇಳೆ ಕರ್ನಾಟಕ ಬಯಲಾಟ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಡಾ.ಡಿ.ಕೆ.ರಾಜೇಂದ್ರ, ಹಿರಿಯ ಸಂಶೋಧಕಿ, ಅತ್ತಿಮಬ್ಬೆ ಪ್ರಶಸ್ತಿ ಪುರಸ್ಕೃತ ಡಾ.ವೈ.ಸಿ.ಭಾನುಮತಿ, ಸಂತ ಶಿಶುನಾಳ ಷರೀಫರ ಪ್ರಶಸ್ತಿ ಪುರಸ್ಕೃತರಾದ ಹಿರಿಯ ಗಾಯಕ ಪ್ರೊ.ಎಸ್.ಮಲ್ಲಣ್ಣ ಅವರನ್ನು ಅಭಿನಂದಿಸಲಾಯಿತು. ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಕೆ.ಎಸ್.ನರಸಿಂಹ ಸ್ವಾಮಿ ಅವರ ಕುರಿತು ಎಸ್‌ಡಿಎಂ ಕಾಲೇಜಿನ ಕನ್ನಡ ಪ್ರಾಧ್ಯಾಪಕಿ ಡಾ.ವಿನೋಧ ಮಾತನಾಡಿದರು. ಅಭಿನಂಧಿತರ ಕುರಿತು ಹಿರಿಯ ಲೇಖಕಿ ಉಪಾನರಸಿಂಹನ್, ಹಿರಿಯ ಲೇಖಕಿ ಬಿ.ಕೆ.ಮೀನಾಕ್ಷಿ ಮಾತನಾಡಿದರು. ಈ ವೇಳೆ ಮೈಸೂರು ರಂಗನಾಥ್, ಹಿರಿಯ ರಂಗಕರ್ಮಿ ರಾಜಶೇಖರ ಕದಂಬ ಇದ್ದರು.

ವಿವಿಧ ವೃತ್ತಿಗಳ ತರಬೇತಿ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು: ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ವತಿಯಿಂದ 2025–26ನೇ ಸಾಲಿಗೆ ನಂಜನಗೂಡು ತಾಲೂಕಿನ ತಗಡೂರು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯು ವಿವಿಧ ವೃತ್ತಿಗಳ ಪ್ರವೇಶಕ್ಕೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ಮೇ 28ರವರೆಗೆ www.cite.karnataka.gov.in ಅಥವಾ ಸೈಬರ್ ಸೆಂಟರ್‌ಗಳಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. NCVT ಸಂಯೋಜನೆಯಲ್ಲಿ ELECTRICIAN, ELECTRONIC MECHANIC, FITTER ವೃತ್ತಿಯು 2 ವರ್ಷ ಅವಧಿಯನ್ನು ಒಳಗೊಂಡಿದೆ. ಹೆಚ್ಚಿನ ಮಾಹಿತಿಗಾಗಿ ತಗಡೂರು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಕಚೇರಿ ದೂ.ಸಂ: 08221–220200 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಸಂಸ್ಥೆ ಪ್ರಾಚಾರ್ಯರು ತಿಳಿಸಿದ್ದಾರೆ.

ಕೆ.ಆರ್.ಕ್ಷೇತ್ರದಲ್ಲಿ ಬಿಜೆಪಿ ತಿರಂಗಾಯಾತ್ರೆ, ಬೈಕ್ ರ್‍ಯಾಲಿ



ಕೆ.ಆರ್.ಕ್ಷೇತ್ರದ ಬಿಜೆಪಿ ಘಟಕದಿಂದ 'ಆಪರೇಷನ್ ಸಿಂಧೂರ' ಯಶಸ್ಸು ಹಿನ್ನೆಲೆಯಲ್ಲಿ ತಿರಂಗಾಯಾತ್ರೆ ನಡೆಸಲಾಯಿತು.

ಮೈಸೂರು, ಮೇ 25(ಎಸ್‌ಪಿಎನ್)– 'ಆಪರೇಷನ್ ಸಿಂಧೂರ'ದ ಯಶಸ್ಸು ಸಮಸ್ತ ಯೋಧರು ಹಾಗೂ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರಕ್ಕೆ ಸಲ್ಲಬೇಕು. ಇದರ ವಿಜಯೋತ್ಸವವನ್ನು ದೇಶದ ಪ್ರತಿ ಮನೆಮನೆಯಲ್ಲೂ ಆಚರಿಸಬೇಕು ಎಂದು ಮಾಜಿ ಸಂಸದ ಪ್ರತಾಪಸಿಂಹ ಅಭಿಪ್ರಾಯಪಟ್ಟರು.

ಮೈಸೂರು ಅಗ್ರಹಾರದ ನೂರೊಂದು ಗಣಪತಿ ದೇವಸ್ಥಾನ ಮುಂಭಾಗದಲ್ಲಿ ಕೃಷ್ಣರಾಜ ಕ್ಷೇತ್ರದ ಬಿಜೆಪಿ ಘಟಕದ ವತಿಯಿಂದ 'ಆಪರೇಷನ್ ಸಿಂಧೂರ' ಕಾರ್ಯಾಚರಣೆ ಯಶಸ್ಸು ಹಿನ್ನೆಲೆಯಲ್ಲಿ ಹಮ್ಮಿಕೊಂಡಿದ್ದ ತಿರಂಗಾಯಾತ್ರೆಯಲ್ಲಿ ಪಾಲ್ಗೊಂಡು ಮಾತನಾಡಿದರು.

ಜಮ್ಮು–ಕಾಶ್ಮೀರದ ಪಹಲ್ಗಾಮ್‌ನಲ್ಲಿ ಉಗ್ರರು ನಡೆಸಿದ ಹತ್ಯಾಕಾಂಡ ಘನಘೋರ. ಇದಕ್ಕೆ ಪ್ರತಿಯಾಗಿ ಭಾರತೀಯ ಸೇನೆ 'ಆಪರೇಷನ್ ಸಿಂಧೂರ' ಶೀರ್ಷಿಕೆಯಡಿ ಪಾಕಿಸ್ತಾನದಲ್ಲಿ 9 ಉಗ್ರರ ಕ್ಯಾಂಪ್‌ಗಳ ಮೇಲೆ ದಾಳಿ ನಡೆಸಿದ ಕಾರ್ಯಾಚರಣೆ ಯಶಸ್ವಿಯಾಗಿದೆ ಎಂದು ಹೇಳಿದರು.

ಕೇಂದ್ರದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಬಂದ ಮೇಲೆ ಜಮ್ಮು–ಕಾಶ್ಮೀರದಲ್ಲಿ ಉಗ್ರರ ಹೆಡೆಮುರಿ ಕಟ್ಟಿದ್ದಾರೆ. ಕಲಂ 370 ರದ್ದುಗೊಳಿಸಿ, ಅಭಿವೃದ್ಧಿಗೆ ಒತ್ತು ನೀಡಿದ್ದಾರೆ. ಅಲ್ಲದೆ, ಶತ್ರು ಸೇನೆ ಒಂದು ಗುಂಡು ಹಾರಿಸಿದರೆ, ನೀವು ಎರಡು ಗುಂಡು ಹಾರಿಸಿ ಎಂಬ ನೀತಿಯನ್ನು ಅನುಷ್ಠಾನಗೊಳಿಸಿದ ಪರಿಣಾಮ ಇಂದು ಭಯೋತ್ಪಾದಕರು ಭಾರತದ ಕಡೆಗೆ ಕಣ್ಣೆಟ್ಟು ನೋಡಲು ಭಯಪಡುವಂತಾಗಿದೆ ಎಂದರು.

ಆಪರೇಷನ್ ಸಿಂಧೂರ ಕಾರ್ಯಾಚರಣೆ ಹಲವು ಹೊಸತನಗಳಿಗೆ ಸಾಕ್ಷಿಯಾಗಿದೆ. ದೇಶಿ ಮದ್ದುಗುಂಡು, ಶಸ್ತ್ರಾಸ್ತ್ರಗಳ ಬಳಕೆ, ಗಡಿದಾಟದೇ ಉಗ್ರರ ಕ್ಯಾಂಪ್ ನಾಶಪಡಿಸಿದ್ದು, ಭಾರತೀಯ ಸೇನೆ ನಡೆಸಿದ ಎಲ್ಲಾ ಯುದ್ಧ ಪ್ರಯೋಗಗಳು ಜಗತ್ತಿಗೆ ಹೊಸತನದಂತೆ ಕಾಣುತ್ತಿವೆ. ನಮ್ಮ ಸೈನ್ಯ ಕಾರ್ಯಾಚರಣೆ ಕೈಗೊಂಡಿದ್ದು ಪಾಕಿಸ್ತಾನದ ಮೇಲೆ. ಆದರೆ, ಆ ರಾಷ್ಟ್ರಕ್ಕೆ ಶಸ್ತ್ರಾಸ್ತ್ರ ಪೂರೈಕೆ ಮಾಡಿದ್ದ ಟರ್ಕಿ ಮತ್ತು ಚೀನಾ ಶಸ್ತ್ರಾಸ್ತ್ರ ತಯಾರಿಕಾ ಕಂಪನಿಗಳ ಷೇರುಗಳು ಶೇ.9ರಷ್ಟು ಕುಸಿದಿದೆ. ಇದು ನಮ್ಮ ಸೇನೆಯ ತಾಕತ್ತು ಎಂದರು.

ಕಾಂಗ್ರೆಸ್‌ನ ಐತಿಹಾಸಿಕ ತಪ್ಪಿನಿಂದಾಗಿ ಜಮ್ಮು–ಕಾಶ್ಮೀರದಲ್ಲಿ ಇಂದಿಗೂ ಉಗ್ರರ ಉಪಟಳ ನಿಂತಿಲ್ಲ. ಆದರೆ, 2014ರ ನಂತರ ಭಾರತದ ಸ್ಥಾನಮಾನ ಜಗತ್ತಿನೆದುರು ಸಂಪೂರ್ಣ ಬದಲಾಗಿದೆ. ವಿಶ್ವದಲ್ಲೇ ಭಾರತದ ಆರ್ಥಿಕತೆ 4ನೇ ಸ್ಥಾನದಲ್ಲಿದೆ. ರಕ್ಷಣಾ ಕ್ಷೇತ್ರ ಸ್ವಾವಲಂಬನೆಯತ್ತ ಸಾಗುತ್ತಿದೆ. ಬೇರೆ ಬೇರೆ ರಾಷ್ಟ್ರಗಳ ನಿರ್ದೇಶನ, ಆದೇಶ ಪಾಲಿಸುವ ಜಾಯಮಾನ ಮುಗಿದಿದ್ದು, ಎಲ್ಲಾ ಕ್ಷೇತ್ರದಲ್ಲೂ ಭಾರತ ಸೂಪರ್‌ಪವರ್ ಆಗಿ ಹೊರಹೊಮ್ಮಿದೆ ಎಂದು ಹೇಳಿದರು.

ಶಾಸಕ ಟಿ.ಎಸ್.ಶ್ರೀವತ್ಸ 'ಆಪರೇಷನ್ ಸಿಂಧೂರ'ದ ಮೂಲಕ ಪಾಕಿಸ್ತಾನದ ಉಗ್ರ ನೆಲೆಯನ್ನು ಧ್ವಂಸಗೊಳಿಸಿದ ನಮ್ಮ ಭಾರತೀಯ ಸೈನ್ಯಕ್ಕೆ ನಿಮ್ಮೊಂದಿಗೆ ಇದ್ದೇವೆ ಎಂಬ ಮನೋಸ್ಥೈರ್ಯವನ್ನು ತುಂಬುವ ಸಲುವಾಗಿ ಈ ತಿರಂಗಾಯಾತ್ರೆ ನಡೆಸುತ್ತಿದ್ದೇವೆ ಎಂದು ತಿಳಿಸಿದರು.

ಎಲ್ಲರ ಆಕರ್ಷಿಸಿದ ತಿರಂಗಾಯಾತ್ರೆ: ಈ ವೇಳೆ ಪಾಕಿಸ್ತಾನದ ಉಗ್ರರ ವಿರುದ್ಧ ಭಾರತೀಯ ಸೇನಾ ಕಾರ್ಯಾಚರಣೆಯನ್ನು ಬೆಂಬಲಿಸಿ, ವಿವಿಧ ಘೋಷಣೆಗಳನ್ನು ಮೊಳಗಿಸಿದರು.

ಬಿಜೆಪಿ ಕಾರ್ಯಕರ್ತರು ಬೈಕ್ ರ್‍ಯಾಲಿ ಮೂಲಕ ತಿರಂಗಾ ಹಿಡಿದು ಅಗ್ರಹಾರದ ನೂರೊಂದು ಗಣಪತಿ ದೇವಸ್ಥಾನದ ಮುಂಭಾಗದಿಂದ ಹೊರಟು, ಬಸವೇಶ್ವರ ರಸ್ತೆ, ಕಂಸಾಳೆ ಮಹದೇವಸ್ವಾಮಿ ವೃತ್ತ, ಜೆಎಲ್‌ಬಿ ರಸ್ತೆ ಮೂಲಕ ಹಾದು ಮಾಧವ ಚಾರ್ ರಸ್ತೆಯಲ್ಲಿ ರ್‍ಯಾಲಿ ಕೊನೆಗೊಂಡಿತು.

ನಗರ ಬಿಜೆಪಿ ಮೈಸೂರು ನಗರ ಘಟಕದ ಅಧ್ಯಕ್ಷ ಎಲ್.ನಾಗೇಂದ್ರ, ಕೆ.ಆರ್.ಕ್ಷೇತ್ರದ ಬಿಜೆಪಿ ಅಧ್ಯಕ್ಷ ಗೋಪಾಲ ರಾಜೇಅರಸ್, ಮಾಜಿ ಮೇಯರ್ ಶಿವಕುಮಾರ್, ನಗರ ಪಾಲಿಕೆ ಮಾಜಿ ಸದಸ್ಯರಾದ ಮಾ.ವಿ.ರಾಮಪ್ರಸಾದ್, ಸೌಮ್ಯ ಉಮೇಶ್, ಜಗದೀಶ್, ಕೆ.ಜೆ.ರಮೇಶ್, ಎಲ್ ಜಗದೀಶ್, ಗೀತಾ ಯೋಗಾನಂದ, ಶಾರದಮ್ಮ, ಉಮೇಶ್ ಈಶ್ವರ್, ಬಿ.ವಿ.ಮಂಜುನಾಥ, ಪ್ರಧಾನ ಕಾರ್ಯದರ್ಶಿ ಕೇಬಲ್ ಮಹೇಶ್, ನಗರ ಉಪಾಧ್ಯಕ್ಷ ಜೋಗಿಮಂಜು, ವಿಶ್ವಣ್ಣ, ನಗರ ಯುವ ಮೋರ್ಚಾ ಅಧ್ಯಕ್ಷ ರಾಕೇಶ್‌ಗೌಡ, ಕಾರ್ಯದರ್ಶಿ ನಾಗೇಂದ್ರ, ಪ್ರಧಾನ ಕಾರ್ಯದರ್ಶಿ ಜಯರಾಮ್, ಜಯಶಂಕರ್, ಪ್ರದೀಪ್, ಕಿಶೋರ್, ಕೀರ್ತಿ, ನಿಶಾಂತ್, ವಿನಯ್ ಪಾಂಚಜನ್ಯ, ಓಂ ಶ್ರೀನಿವಾಸ, ಮನೋಜ್, ಚೇತನ್, ಮಧು, ಪಚ್ಚು ಮುಂತಾದವರಿದ್ದರು.

ಖಾಸಗಿ ಬಸ್ಸು ಡಿಕ್ಕಿ: ಮೊಪೆಡ್ ಸವಾರ ಸಾವು



ಕೆ.ಆರ್.ಪೇಟೆ, ಮೇ 25(ಶ್ರೀನಿವಾಸ್)– ಖಾಸಗಿ ಬಸ್ಸೊಂದು ಡಿಕ್ಕಿ ಹೊಡೆದ ಪರಿಣಾಮ ಮೊಪೆಡ್ ಸವಾರ ಸ್ಥಳದಲ್ಲಿಯೇ ಮೃತಪಟ್ಟಿರುವ ಘಟನೆ ತಾಲೂಕಿನ ಅಗಸರಹಳ್ಳಿ ಗ್ರಾಮದ ಬಳಿ ಮೈಸೂರು–ಕೆ.ಆರ್.ಪೇಟೆ ಮುಖ್ಯ ರಸ್ತೆಯಲ್ಲಿ ಸಂಭವಿಸಿದೆ.

ತಾಲೂಕಿನ ಶೀಳನೆರೆ ಹೋಬಳಿಯ ಭೈರಾಪುರ ಗ್ರಾಮದ ನಿವಾಸಿ ದುಬೈ ವೆಂಕಟೇಗೌಡ(75) ಮೃತ ದುರ್ದೈವಿ.

ಘಟನೆ ವಿವರ: ಭೈರಾಪುರದ ವೆಂಕಟೇಗೌಡ ಕೆಲಸದ ನಿಮಿತ್ತ ಕೆ.ಆರ್.ಪೇಟೆಗೆ ತಮ್ಮ ಟಿವಿಎಸ್ ಮೊಪೆಡ್‌ನಲ್ಲಿ ತೆರಳುತ್ತಿದ್ದರು. ಈ ವೇಳೆ ಅತಿವೇಗವಾಗಿ ಬಂದ ಖಾಸಗಿ ಬಸ್ ಮೊಪೆಡ್‌ಗೆ ಹಿಂದಿನಿಂದ ಡಿಕ್ಕಿ ಹೊಡೆದಿದೆ. ಇದರಿಂದ ಕೆಳಗೆ ಬಿದ್ದ ವೆಂಕಟೇಗೌಡನ ದೇಹದ ಮೇಲೆ ಬಸ್ಸಿನ ಚಕ್ರಗಳು ಹರಿದ ಪರಿಣಾಮ ವೆಂಕಟೇಗೌಡ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ವಿಷಯ ತಿಳಿಯುತ್ತಿದ್ದಂತೆಯೇ ಕೆ.ಆರ್.ಪೇಟೆ ಗ್ರಾಮಾಂತರ ಪೊಲೀಸ್ ಇನ್ಸ್‌ಪೆಕ್ಟರ್ ಆನಂದೇಗೌಡ ಅವರು ಸ್ಥಳಕ್ಕೆ ಸಿಬ್ಬಂದಿಗಳೊಂದಿಗೆ ಆಗಮಿಸಿ ಖಾಸಗಿ ಬಸ್ ಮತ್ತು ಚಾಲಕನನ್ನು ವಶಕ್ಕೆ ಪಡೆದು ಶವವನ್ನು ಕೆ.ಆರ್.ಪೇಟೆ ಪಟ್ಟಣದ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ಸಾಗಿಸಿದರು.

ಘಟನೆ ಕುರಿತು ಮೃತ ವೆಂಕಟೇಗೌಡ ಅವರ ಪತ್ನಿ ಸರೋಜಮ್ಮ ನೀಡಿದ ದೂರಿನ ಮೇರೆಗೆ ಕೆ.ಆರ್.ಪೇಟೆ ಗ್ರಾಮಾಂತರ ಪೊಲೀಸರು ಪ್ರಕರಣ ದಾಖಲಿಸಿ ಮುಂದಿನ ತನಿಖೆ ಕೈಗೊಂಡಿದ್ದಾರೆ.

ಮೃತ ವೆಂಕಟೇಗೌಡ ಸುಮಾರು 40 ವರ್ಷಗಳ ಕಾಲ ದುಬೈನಲ್ಲಿ ಕಂಪನಿಯೊಂದರಲ್ಲಿ ದುಡಿದು ಊರಿನಲ್ಲಿ ಜಮೀನು ಖರೀದಿಸಿ ಬೇಸಾಯ ಮಾಡಿಕೊಂಡು ಜೀವನ ನಡೆಸುತ್ತಿದ್ದರು. ಮೃತ ವೆಂಕಟೇಗೌಡ ಅವರ ಅಂತ್ಯಕ್ರಿಯೆ ಭಾನುವಾರ ಸಂಜೆ ಭೈರಾಪುರ ಗ್ರಾಮದಲ್ಲಿ ನಡೆಯಿತು.

ವಿದ್ಯುತ್ ಸ್ಪರ್ಶದಿಂದ ಬಾಲಕ ಸಾವು, ತಾಯಿಗೂ ಗಾಯ



ಪಾಂಡವಪುರ,ಮೇ 25(ನಾಗಸುಂದರ್)– ವಿದ್ಯುತ್ ಸ್ಪರ್ಶದಿಂದ ಐದು ವರ್ಷದ ಗಂಡು ಮಗು ಮೃತಪಟ್ಟಿದ್ದು, ತಾಯಿ ಕೂಡ ಗಾಯಗೊಂಡಿರುವ ಘಟನೆ ವರದಿಯಾಗಿದೆ.

ತಾಲೂಕಿನ ಬನ್ನಂಗಾಡಿ ಗ್ರಾಮ ಸುದೀರ್ ಎಂಬುವರ ಪುತ್ರ ಸಂಜು(5) ಮೃತ ಬಾಲಕ, ಶಿಲ್ಪ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಶಿಲ್ಪ ಹಾಗೂ ಮೃತ ಬಾಲಕ ಸಂಜು ಅವರ ಅಜ್ಜಿ ಮನೆ ಪಾಂಡವಪುರ ತಾಲೂಕಿನ ಚಿಕ್ಕಮರಳಿ ಗ್ರಾಮದಲ್ಲಿ ವಾಸವಾಗಿದ್ದರು. ಭಾನುವಾರ ಬೆಳಗ್ಗೆ ಸ್ನಾನದ ಮನೆಗೆ ಬಾಲಕ ಸಂಜು ಹೋಗಿ ಬಾಗಿಲು ಹಾಕಿಕೊಂಡು ಸ್ನಾನಕ್ಕೆ ಹೋದಾಗ ವಿದ್ಯುತ್ ಸ್ಪರ್ಶವಾಗಿ ಬಾಲಕ ಕೂಗಿಕೊಂಡಿದ್ದಾನೆ. ತಕ್ಷಣ ಮಗನನ್ನು ಕಾಪಾಡಲು ಹೋದ ತಾಯಿ ಶಿಲ್ಪ ಅವರು ಮಗುವನ್ನು ರಕ್ಷಿಸಲು ಮುಂದಾದರಾದರೂ ಮಗು ಬದುಕಲಿಲ್ಲ. ತಾಯಿ ಕೂಡ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಸಿಎಸ್ಪಿ ಭೇಟಿ: ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಭೇಟಿ ನೀಡಿದ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮೃತ ಬಾಲಕ ಸಂಜು ಅವರ ಅಂತಿಮ ದರ್ಶನ ಪಡೆದು ಮೃತರ ಕುಟುಂಬಕ್ಕೆ ಸಾಂತ್ವಾನ ಹೇಳಿದರು. ಬಳಿಕ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರ ಸೋದರ ರಾಘುವ ಅವರ ಸಹ ಆಸ್ಪತ್ರೆಗೆ ಭೇಟಿಕೊಟ್ಟು ಮೃತ ಕುಟುಂಬಕ್ಕೆ ಸಾಂತ್ವಾನ ಹೇಳಿದರು.

ಬಳಿಕ ಮೃತ ಬಾಲಕ ಸಂಜು ಅವರ ಅಂತ್ಯಕ್ರಿಯೆಯೂ ಬನ್ನಂಗಾಡಿ ಗ್ರಾಮದ ಹೊರವಲಯದಲ್ಲಿ ಭಾನುವಾರ ಸಂಜೆ ನೆರವೇರಿತು. ಘಟನೆ ಸಂಬಂಧ ಯಾವುದೇ ದೂರು ದಾಖಲಾಗಿಲ್ಲ.

ಇಂದು ಮಾವು, ಹಲಸು ಮೇಳ, ಸಸ್ಯ ಸಂತೆ–2025

ಮಂಡ್ಯ, ಮೇ 25– ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ಹಾಗೂ ತೋಟಗಾರಿಕೆ ಇಲಾಖೆಯ ವತಿಯಿಂದ ಮಾವು ಮತ್ತು ಹಲಸು ಮೇಳ ಹಾಗೂ ಸಸ್ಯ ಸಂತೆ–2025ರ ಕಾರ್ಯಕ್ರಮವನ್ನು ಮೇ. 26 ರಂದು ಮಧ್ಯಾಹ್ನ 12 ಗಂಟೆಗೆ ತೋಟಗಾರಿಕೆ ಇಲಾಖೆಯ ಆವರಣದಲ್ಲಿ ಉದ್ಘಾಟನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಈ ಮೇಳದಲ್ಲಿ ಸುಮಾರು 15 ಮಳಿಗೆಗಳಿದ್ದು ಜಿಲ್ಲೆಯ ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಮೇಳದಲ್ಲಿ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳಬಹುದು. ನೈಸರ್ಗಿಕವಾಗಿ ಮಾಗಿಸಿರುವ ವಿವಿಧ ತಳಿಯ ಮಾವು ಹಣ್ಣುಗಳ ಪ್ರದರ್ಶಿಸಲಾಗುವುದು ಎಂದು ತೋಟಗಾರಿಕೆ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮದ್ದೂರು ಪಟ್ಟಣ ಇನ್ಮುಂದೆ ನಗರಸಭೆಯಾಗಿ ಮೇಲ್ದರ್ಜೆಗೆ

ನಗರ ವ್ಯಾಪ್ತಿಗೆ 4 ಗ್ರಾಪಂಗಳು ಸೇರ್ಪಡೆ, ಮೇಲ್ದರ್ಜೆಗೇರಿಸುವ ಕಾರ್ಯ ಚುರುಕು

ಇನ್ನಷ್ಟು ಪ್ರದೇಶಗಳು ಮೇಲ್ದರ್ಜೆಗೇರಿಸಬೇಕೆಂಬ ಕೂಗು

ಇದರ ಜೊತೆಗೆ ಮೈಸೂರಿನ ಸನಿಹದಲ್ಲಿರುವ ಶ್ರೀರಂಗಪಟ್ಟಣ ಪುರಸಭೆಯನ್ನು ನಗರಸಭೆಗೇರಿಸಬೇಕೆಂಬ ಕೂಗಿದ್ದು, ಮದ್ದೂರು ತಾಲ್ಲೂಕಿನ ಕೊಪ್ಪ, ಬೆಸಗರಹಳ್ಳಿ, ಮಂಡ್ಯ ತಾಲೂಕಿನ ಕೆರಗೋಡು, ಮಳವಳ್ಳಿ ತಾಲೂಕಿನ ಹಲಗೂರು, ಶ್ರೀರಂಗಪಟ್ಟಣ ತಾಲೂಕಿನ ಅರಕೆರೆ ಹಾಗೂ ಕೆ.ಆರ್.ಪೇಟೆ ತಾಲೂಕಿನ ಕಿಕ್ಕೇರಿ ಗ್ರಾಮ ಪಂಚಾಯಿತಿಗಳು ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೇರಬೇಕೆಂಬ ಬೇಡಿಕೆ ಇದೆ.

ಎಂ.ಕೆ.ಮೋಹನ್‌ರಾಜ್

ಮದ್ದೂರು, ಮೇ 25– ಮದ್ದೂರು ಪಟ್ಟಣದ ಪುರಸಭೆಯನ್ನು ನಗರಸಭೆಯನ್ನಾಗಿ ಮೇಲ್ದರ್ಜೆಗೇರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ನಿರ್ಣಯ ಕೈಗೊಂಡಿರುವುದು ಪಟ್ಟಣದ ಜನತೆಗೆ ಹರ್ಷ ತಂದಿದೆ.

ಕ್ಷೇತ್ರದ ಹಾಲಿ ಮತ್ತು ಮಾಜಿ ಜನಪ್ರತಿನಿಧಿಗಳ ಶ್ರಮ, ಹೋರಾಟಗಾರರು ಹಾಗೂ ಸಾರ್ವಜನಿಕರ ಬೇಡಿಕೆಯ ಪರಿಣಾಮ ಶೀಘ್ರವಾಗಿ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನವಾಗಿ ಮದ್ದೂರು ಪಟ್ಟಣ ಇನ್ನು ಮುಂದೆ ನಗರಸಭೆಯಾಗಿ ಮೇಲ್ದರ್ಜೆಗೇರಲಿದೆ. ಈ ಮೂಲಕ ಮಂಡ್ಯ ಜಿಲ್ಲೆಯ ಮಂಡ್ಯ ನಗರಸಭೆ ಬಳಿಕ ಎರಡನೇ ನಗರಸಭೆಯಾಗಿ ಮದ್ದೂರು ಮೇಲ್ದರ್ಜೆಗೇರಲಿದೆ.

ಪುರಸಭೆಯನ್ನು ನಗರ ಸಭೆಯನ್ನಾಗಿ ಮಾಡಲು ಈ ಹಿಂದೆ ಶಾಸಕರಾಗಿದ್ದ ಡಿ.ಸಿ.ತಮ್ಮಣ್ಣ ಪ್ರಯತ್ನಿಸಿದ್ದರೂ ಜೊತೆಗೆ ಹಾಲಿ ಶಾಸಕರಾಗಿರುವ ಕೆ.ಎಂ.ಉದಯ್ ಹಾಗೂ ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಸಹ ಈ ಬಗ್ಗೆ ಸರ್ಕಾರದ ಗಮನ ಸೆಳೆದಿದ್ದರು. ಜೊತೆಗೆ ಈ ಬಗ್ಗೆ ಹಲವು ಇಲಾಖೆಗಳೊಂದಿಗೆ ಸರಣಿ ಸಭೆ ಸಹ ನಡೆಸಿ, ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಸಹ ಮುಖ್ಯಮಂತ್ರಿಗಳೊಂದಿಗೆ ಈ ಬಗ್ಗೆ ಮಾತುಕತೆ ನಡೆಸಿದ್ದರು.

ಹಲವು ಗ್ರಾಮಗಳ ಸೇರ್ಪಡೆ: ಮದ್ದೂರು ಪಟ್ಟಣ ನಗರಸಭೆಯಾಗುತ್ತಿರುವ ಹಿನ್ನೆಲೆಯಲ್ಲಿ ಪಟ್ಟಣಕ್ಕೆ ಹತ್ತಿರವಿರುವ ಗ್ರಾಮಾಂತರ ಪ್ರದೇಶವಾದ ಗೊರವನಹಳ್ಳಿ, ಚಾಮನಹಳ್ಳಿ, ಸೋಮನಹಳ್ಳಿ ಹಾಗೂ ಗೆಜ್ಜಲಗೆರೆ ಗ್ರಾಪಂ ವ್ಯಾಪ್ತಿಯ ಹಲವು ಹಳ್ಳಿಗಳನ್ನು ನಗರಸಭೆಗೆ ಸೇರಿಸಿಕೊಳ್ಳಲು ಕ್ರಮ ಕೈಗೊಂಡಿದ್ದು, ಈ ಸಂಬಂಧ ಗ್ರಾಪಂ.ಗಳಿಗೆ ಪುರಸಭಾ ಮುಖ್ಯಾಧಿಕಾರಿಗಳು ಪತ್ರ ವ್ಯವಹಾರ ಮಾಡಿದ್ದಾರೆ.

ನಗರಸಭೆಯನ್ನಾಗಿ ಮಾಡಲು ನಕ್ಷೆ ತಯಾರಿಸುವುದು, ಗಡಿ ಗೊತ್ತುಪಡಿಸುವುದು, ಜನಸಂಖ್ಯೆಗೆ ಅನುಗುಣವಾಗಿ ಯಾವ ಹಳ್ಳಿಗಳನ್ನು ಆಯ್ಕೆ ಮಾಡಿಕೊಳ್ಳಬೇಕು ಸೇರಿದಂತೆ ನಗರಸಭೆಯನ್ನಾಗಿ ಮೇಲ್ದರ್ಜೆಗೇರಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಅಧಿಕಾರಿಗಳೊಂದಿಗೆ ಮಾತುಕತೆ ಮಾಡಲಾಗಿದೆ. ಪಟ್ಟಣದ ಪುರಸಭೆಯಲ್ಲಿ ಪ್ರಸ್ತುತ ಸುಮಾರು 30,500 ಜನಸಂಖ್ಯೆಯಿದ್ದು, ನಗರಸಭೆಯಾಗಲು ಅಂದಾಜು 50 ರಿಂದ 1 ಲಕ್ಷ ಜನಸಂಖ್ಯೆ ಬೇಕಾಗುತ್ತದೆ ಆದ್ದರಿಂದ ಪಟ್ಟಣದ ಜತೆಗೆ ಅಕ್ಕ ಪಕ್ಕದ ಗ್ರಾಪಂ. ಕೆಲವು ಹಳ್ಳಿಗಳನ್ನು ಸೇರಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ.

ಮದ್ದೂರು ಪಟ್ಟಣದ ಪುರಸಭೆಯನ್ನು ನಗರಸಭೆಯನ್ನಾಗಿ ಮಾಡುತ್ತಿರುವುದು, ಕೆಮ್ಮಣ್ಣುನಾಲೆಯ ಆಧುನಿಕರಣಕ್ಕೆ 90 ಕೋಟಿ ವೆಚ್ಚದಲ್ಲಿ ಭೂಮಿ ಪೂಜೆ ಮಾಡಿರುವುದು ಹಾಗೂ ಪೇಟೆಬೀದಿಯ ರಸ್ತೆ ಅಗಲೀಕರಣ ಸಂಬಂಧ ಬಜೆಟ್‌ನಲ್ಲಿ ಪ್ರಸ್ತಾಪವಾಗಿರುವುದು ಸೇರಿದಂತೆ ಪಟ್ಟಣದಲ್ಲಿ ಹಲವಾರು ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿರುವುದು ಸಾರ್ವಜನಿಕರಿಗೆ ಹರ್ಷ ತಂದಿದೆ.

ಸಮಗ್ರ ಅಭಿವೃದ್ಧಿಗೆ ಅನುಕೂಲ: ಮದ್ದೂರು ಪಟ್ಟಣ ಪುರಸಭೆ ನಗರಸಭೆಯಾಗಿ ಮಾರ್ಪಟ್ಟು ಹೊಂದಿದರೆ ಮದ್ದೂರು ನಗರದ ಸಮಗ್ರ ಅಭಿವೃದ್ಧಿಗೆ ಅನುಕೂಲವಾಗುತ್ತದೆ. ಪಟ್ಟಣದ ವಾರ್ಡ್‌ಗಳ ಸಂಖ್ಯೆಯೂ ಹೆಚ್ಚಾಗುತ್ತದೆ. ಸಿಬ್ಬಂದಿ ಹಾಗೂ ಅಧಿಕಾರಿಗಳ ಸಮಸ್ಯೆ ದೂರಾಗುವ ಜತೆಗೆ ಸ್ವಚ್ಛತೆ ಮಾಡಲು ಪೌರ ಕಾರ್ಮಿಕರು ಸಂಖ್ಯೆಯೂ ಹೆಚ್ಚುತ್ತದೆ. ಕೇಂದ್ರ ಮತ್ತು ರಾಜ್ಯದ ಸರ್ಕಾರದಿಂದ ಹೆಚ್ಚಿನ ಅನುದಾನ ಜತೆಗೆ ವಿಶೇಷ ಯೋಜನೆಗಳು ಲಭ್ಯವಾಗುತ್ತವೆ. ಬಂಡವಾಳ ಹೂಡಿಕೆದಾರರಿಂದ ಕಾರ್ಖಾನೆಗಳು, ನಿರ್ಮಾಣವಾಗಿ ಮಹಿಳೆಯರಿಗೆ, ಯುವಕರಿಗೆ ಉದ್ಯೋಗ ಸಿಗುವುದರಿಂದ ನಿರುದ್ಯೋಗ ಸಮಸ್ಯೆ ದೂರವಾಗುತ್ತದೆ ಹಾಗೂ ನಗರ ವ್ಯಾಪ್ತಿಗೆ ಬರುವ ನಿವೇಶನಗಳು, ಜಮೀನುಗಳು ಹಾಗೂ ಕಟ್ಟಡಗಳ ಬೆಲೆಯೂ ಕೂಡ ಜಾಸ್ತಿಯಾಗುತ್ತದೆ ಎಂದು ಅಧಿಕಾರಿಗಳ ಅಭಿಪ್ರಾಯವಾಗಿದೆ.

ಕಸಾಗಿಯೇ ಉಳಿದ ಕೆ.ಎಂ.ದೊಡ್ಡಿ ಮೇಲ್ದರ್ಜೆಗೇರುವುದು: ಮಂಡ್ಯ ಜಿಲ್ಲೆಯ ಹಲವು ಪ್ರದೇಶಗಳು ಮೇಲ್ದರ್ಜೆಗೇರಬೇಕೆಂಬ ಕೂಗಿದ್ದು, ಈ ಪೈಕಿ ಮದ್ದೂರು ತಾಲೂಕಿನ ಕೆ.ಎಂ.ದೊಡ್ಡಿ (ಭಾರತೀನಗರ) ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೇರಬೇಕೆಂಬ ಕೂಗು ಇನ್ನು ಕನಸಾಗಿಯೇ ಉಳಿದುಕೊಂಡಿದೆ

ಪ್ರದೇಶವಾರು ಅಭಿವೃದ್ಧಿ, ಜನಸಂಖ್ಯೆ, ವಾಣಿಜ್ಯ ವಹಿವಾಟು, ಮೂಲಸೌಕರ್ಯದಲ್ಲಿ ಕೆ.ಎಂ.ದೊಡ್ಡಿ ಪಟ್ಟಣ ಪಂಚಾಯಿತಿಯನ್ನು ಮೀರಿ ಪುರಸಭೆ ಮಟ್ಟದಲ್ಲಿ ಬೆಳೆದಿದೆಯಾದರೂ ಸ್ಥಳೀಯ ರಾಜಕಾರಣದಿಂದ ಗ್ರಾಮ ಪಂಚಾಯಿತಿಯಾಗಿಯೇ ಉಳಿದುಕೊಂಡಿದೆ. ಮದ್ದೂರು ನಗರಸಭೆಯನ್ನಾಗಿ ಮೇಲ್ದರ್ಜೆಗೇರಿರುವ ಕಾರಣ ಶೀಘ್ರವೇ ಕೆ.ಎಂ.ದೊಡ್ಡಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಬೇಕೆಂಬ ಕೂಗು ಹೆಚ್ಚಾಗಿದೆ.

ಮಂಡ್ಯ ನಗರಪಾಲಿಕೆ ಮಾಡಲು ಮುಂದುವರೆದ ಪ್ರಯತ್ನ: ಮಂಡ್ಯ ನಗರವನ್ನು ಸಹ ನಗರಪಾಲಿಕೆ ಮಾಡಬೇಕೆಂಬ ಹಿನ್ನೆಲೆಯಲ್ಲಿ ಈ ಹಿಂದಿನಿಂದಲೂ ಪ್ರಯತ್ನ ನಡೆಯುತ್ತಿದ್ದು, ಕ್ಷೇತ್ರದ ಹಾಲಿ ಶಾಸಕ ರವಿಕುಮಾರ್ ಗಣಿಗ ಸಹ ಈ ಬಗ್ಗೆ ಪ್ರಸ್ತಾವನೆ ಸಲ್ಲಿಸಿದ್ದರು. ಮಂಡ್ಯ ಸುತ್ತಮುತ್ತಲಿನ ಕೆಲ ಗ್ರಾ.ಪಂಗಳ ಪ್ರದೇಶಗಳನ್ನು ಸೇರಿಸಿಕೊಂಡು ನಗರಪಾಲಿಕೆ ಮಾಡಬೇಕೆಂಬ ಚಿಂತನೆ ಇದ್ದು, ಇದು ಸಹ ಮುಂದಿನ ದಿನಗಳಲ್ಲಿ ಕೈಗೂಡುವ ಸಾಧ್ಯತೆ ಇದೆ.

ಶೀಘ್ರ ಮಳವಳ್ಳಿಗೂ ನಗರಸಭೆ ಭಾಗ್ಯ: ಈ ನಡುವೆ ಜಿಲ್ಲೆಯ ಮಳವಳ್ಳಿ ಪಟ್ಟಣವನ್ನು ನಗರಸಭೆಯನ್ನಾಗಿ ಮೇಲ್ದರ್ಜೆಗೇರಿಸಬೇಕೆಂಬ ಹಿನ್ನೆಲೆಯಲ್ಲಿ ಈ ಹಿಂದೆ ಶಾಸಕರಾಗಿದ್ದ ಡಾ.ಕೆ.ಅನ್ನದಾನಿ ನೇತೃತ್ವದಲ್ಲಿ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಮಳವಳ್ಳಿ ಪಟ್ಟಣ ಸಹ ಪುರಸಭೆಯಿಂದ ನಗರಸಭೆಯಾಗಿ ಮೇಲ್ದರ್ಜೆಗೇರುವ ಎಲ್ಲಾ ಅರ್ಹತೆ ಹೊಂದಿದ್ದು, ಮುಂದಿನ ದಿನಗಳಲ್ಲಿ ಈ ಪ್ರಯತ್ನ ಸಾಕಾರಗೊಳ್ಳುವ ಸಾಧ್ಯತೆ ಇದೆ.



ಮಂಡ್ಯ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವಿವರ

ಮಂಡ್ಯ ನಗರಸಭೆ, ಮದ್ದೂರು ನಗರಸಭೆ, ಮಳವಳ್ಳಿ ಪುರಸಭೆ, ಕೆ.ಆರ್.ಪೇಟೆ ಪುರಸಭೆ, ಶ್ರೀರಂಗಪಟ್ಟಣ ಪುರಸಭೆ, ಪಾಂಡವಪುರ ಪುರಸಭೆ, ನಾಗಮಂಗಲ ಪುರಸಭೆ, ಬೆಳ್ಳೂರು ಪಟ್ಟಣ ಪಂಚಾಯಿತಿ

ಪಾಂಡವಪುರ ಬಳಿ ಮಾನಸಿಕ ಅಸ್ವಸ್ಥ ಆತ್ಮಹತ್ಯೆಗೆ ಯತ್ನ

ಪಾಂಡವಪುರ, ಮೇ 25(ನಾಗಸುಂದರ್)– ಮಾನಸಿಕ ಅಸ್ವಸ್ಥ ವ್ಯಕ್ತಿಯೊಬ್ಬ ಆತ್ಮಹತ್ಯೆಗೆ ವಿಫಲ ಪ್ರಯತ್ನ ನಡೆಸಿ ಆಸ್ಪತ್ರೆಗೆ ದಾಖಲಾಗಿರುವ ಘಟನೆ ಭಾನುವಾರ ಸಂಭವಿಸಿದೆ.

ಉತ್ತರ ಕರ್ನಾಟಕ ಮೂಲದವನು ಎಂದು ಗುರುತಿಸಲಾಗಿರುವ 28 ವರ್ಷದ ಮಾನಸಿಕ ಅಸ್ವಸ್ಥ ವ್ಯಕ್ತಿಯೊಬ್ಬ ಭಾನುವಾರ ಬೆಳಗ್ಗೆ ಪಿಎಸ್‌ಎಸ್‌ಕೆ ಕಾರ್ಖಾನೆ ಬಳಿಯ ರೈಲ್ವೆ ನಿಲ್ದಾಣದ ಮೇಲ್ಸೆತುವೆಯಿಂದ ಜಿಗಿದು ವಿದ್ಯುತ್ ತಂತಿ ನಡುವೆ ಸಿಲುಕಿ ಕೊಂಡಿದ್ದಾನೆ. ಈ ಸಮಯದಲ್ಲಿ ವಿದ್ಯುತ್ ಸರಬರಾಜು ಸ್ಥಗಿತವಾಗಿದ್ದ ಕಾರಣ ಯಾವುದೇ ಅಪಾಯ ಸಂಭವಿಸಲಿಲ್ಲ. ಬಳಿಕ ವಿದ್ಯುತ್ ತಂತಿ ಹಿಡಿದು ನೇತಾಡಿಕೊಂಡು ಕೆಳಗೆ ಜಿಗಿದಿದ್ದಾನೆ. ಆಗಲೂ ಯಾವುದೇ ಅಪಾಯವಿಲ್ಲದೆ ಪ್ರಾಣಾಪಾಯದಿಂದ ಬದುಕುಳಿದಿದ್ದ ವ್ಯಕ್ತಿ ಬಳಿಕ ಪಿಎಸ್‌ಎಸ್‌ಕೆ ಶಾಲೆ ಕಾಪೌಂಡ್ ಪಕ್ಕದಲ್ಲಿ ಎಳನೀರು ಕೊಚ್ಚಲು ಬಳಸುತ್ತಿದ್ದ ಮಚ್ಚಿನಿಂದ ಕುತ್ತಿಗೆ ಕೊಯ್ದುಕೊಂಡಿದ್ದಾನೆ.

ಇದರಿಂದ ತೀವ್ರ ರಕ್ತಸ್ರಾವವಾಗಿ ಸಾವು ಬದುಕಿನ ನಡುವೆ ಹೋರಾಟ ನಡೆಸುತ್ತಿದ್ದ ಮಾನಸಿಕ ಅಸ್ವಸ್ಥನನ್ನು ಸಾರ್ವಜನಿಕರ ದೂರಿನ ಮೇರೆಗೆ ಪೊಲೀಸರು ಮೈಸೂರಿನ ಕೆ.ಆರ್. ಆಸ್ಪತ್ರೆಗೆ ದಾಖಲಿಸಿದ್ದಾರೆ. ಪಾಂಡವಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಕತ್ತರಘಟ್ಟ ಸಜೀವ ದಹನ ಪ್ರಕರಣ: ಸಮಗ್ರ ತನಿಖೆಗೆ ಒತ್ತಾಯ

ಕೆ.ಆರ್.ಪೇಟೆ, ಮೇ 25(ಶ್ರೀನಿವಾಸ್)– ತಾಲೂಕಿನ ಕತ್ತರಘಟ್ಟ ಗ್ರಾಮದ ದಲಿತ ಯುವಕ ಜಯಕುಮಾರ್ ಸಾವಿನ ಪ್ರಕರಣವನ್ನು ಸಮಗ್ರವಾಗಿ ತನಿಖೆ ನಡೆಸಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಬೇಕೆಂದು ಭಾರತ ಕಮ್ಯುನಿಸ್ಟ್ ಪಕ್ಷ (ಎಂ) ಮಂಡ್ಯ ಜಿಲ್ಲಾ ಸಮಿತಿ ಒತ್ತಾಯಿಸಿದೆ.

ಇಂದು ಕತ್ತರಘಟ್ಟ ಗ್ರಾಮದ ಜಯಕುಮಾರ್ ನಿವಾಸ ಮತ್ತು ಘಟನಾ ಸ್ಥಳಕ್ಕೆ ಭೇಟಿ ನೀಡಿದ ಸಿಪಿಐಎಂ ಪಕ್ಷದ ಜಿಲ್ಲಾ ಕಾರ್ಯದರ್ಶಿ ಟಿ.ಎಲ್.ಕೃಷ್ಣಗೌಡ, ಜಿಲ್ಲಾ ಮುಖಂಡರಾದ ಸಿ.ಕುಮಾರಿ, ಹನುಮೇಶ್, ಬಿ.ಆರ್.ಕೃಷ್ಣ ಮತ್ತು ಸುರೇಂದ್ರ ಇತರರ ನೇತೃತ್ವದಲ್ಲಿ ಮೃತ ದಲಿತ ಯುವಕ ಜಯಕುಮಾರ್ ಪತ್ನಿ ಲಕ್ಷ್ಮಿ ಅವರಿಗೆ ಸಾಂತ್ವನ ಹೇಳಿದರು.

ಘಟನೆಯನ್ನು ಪ್ರತ್ಯಕ್ಷವಾಗಿ ಪರಿಶೀಲಿಸಿದಾಗ ಆರೋಪಿ ಅನಿಲ್ ಕುಮಾರ್ ಮತ್ತು ಮೃತ ಜಯಕುಮಾರ್ ನಡುವೆ ಆಸ್ತಿ ವಿಚಾರಕ್ಕೆ ವೈಮನಸ್ಸು ಇದ್ದುದು ಗೊತ್ತಾಗಿದೆ. ಸರಿಯಾದ ಸಮಯಕ್ಕೆ ಪೊಲೀಸರು ಮತ್ತು ತಾಲೂಕು ಆಡಳಿತ ಮಧ್ಯಪ್ರವೇಶ ಮಾಡಿದ್ದರೆ ಘಟನೆಯನ್ನು ತಪ್ಪಿಸಲು ಅವಕಾಶ ಇತ್ತು. ಆದರೆ ಆಡಳಿತದ ನಿರ್ಲಕ್ಷ್ಯದಿಂದ ದಲಿತ ಯುವಕ ನೊಬ್ಬನ ಸಾವು ಸಂಭವಿಸಿದೆ, ಆದ್ದರಿಂದ ಜಯಕುಮಾರ್ ಕುಟುಂಬಕ್ಕೆ ಸರ್ಕಾರವು ಕನಿಷ್ಠ 25 ಲಕ್ಷ ರೂಪಾಯಿ ಪರಿಹಾರ ಮತ್ತು ಆತನ ಪತ್ನಿಗೆ ಸರ್ಕಾರಿ ಉದ್ಯೋಗ ನೀಡಬೇಕು ಮತ್ತು ಮಕ್ಕಳ ಶಿಕ್ಷಣದ ಜವಾಬ್ದಾರಿಯನ್ನು ಸರ್ಕಾರವೇ ವಹಿಸಿಕೊಳ್ಳಬೇಕೆಂದು ಸಿಪಿಐಎಂ ನಿಯೋಗವು ಸರ್ಕಾರವನ್ನು ಒತ್ತಾಯಿಸಿದೆ.



ಜಯಕುಮಾರ್ ನಿವಾಸಕ್ಕೆ ಭೇಟಿ ನೀಡಿದ್ದ ಸಿಪಿಐಎಂ ಪಕ್ಷದ ಮುಖಂಡರು.

ಒಂದನೇ ಪುಟದಿಂದ

ಕೊಡಗಿನಲ್ಲಿ ರಣ ಮಳೆಗೆ ಜನತೆ ತತ್ತರ



ವಿದ್ಯುತ್ ಕಂಬಗಳು ಬಿದ್ದಿವೆ. ಗ್ರಾಮೀಣ ಭಾಗದಲ್ಲಿ ನದಿ ತೊರೆಗಳು ತುಂಬಿ ಹರಿಯುತ್ತಿವೆ. ವಿದ್ಯುತ್ ಸಂಪರ್ಕ ಕಡಿತಗೊಂಡಿದ್ದು, ಜನಜೀವನ ಅಸ್ತವ್ಯಸ್ತಗೊಂಡಿದೆ. ಸೆಸ್ಕ್ ಮಡಿಕೇರಿ ವಿಭಾಗದಲ್ಲಿ ಗಾಳಿ ಮಳೆಗೆ 200ಕ್ಕೂ ಅಧಿಕ ವಿದ್ಯುತ್ ಕಂಬಗಳು ಬಿದ್ದಿವೆ. ಪವರ್ ಮೆನ್‌ಗಳು, ಗ್ಯಾಂಗ್‌ಮೆನ್‌ಗಳು ಹಾಗೂ ಶಾಖಾಧಿಕಾರಿಗಳು ಸಾರ್ವಜನಿಕರ ಸಹಕಾರದಿಂದ ತೆರವು ಕಾರ್ಯಾಚರಣೆ ನಡೆಸುತ್ತಿದ್ದಾರೆ. ಗ್ರಾಹಕರಿಗೆ ವಿದ್ಯುತ್ ಮರು ಸಂಪರ್ಕ ಒದಗಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ಸೆಸ್ಕ್ ಕಾರ್ಯಪಾಲಕ ಎಂಜಿನಿಯರ್ ಎಂ.ರಾಮಚಂದ್ರ ತಿಳಿಸಿದ್ದಾರೆ.

ಗಾಳಿ ಮಳೆಯಿಂದ ವಿರಾಜಪೇಟೆ ತಾಲೂಕಿನ ಆರ್ಜಿ ಗ್ರಾಮದ ಕಲ್ಲುಬಾಣೆಯಲ್ಲಿ ಕೆ.ಕೆ.ಮಜೀದ್ ಎಂಬುವವರ ವಾಸದ ಮನೆಯ ಮೇಲೆ ಮರ ಬಿದ್ದು ಭಾಗಶಃ ಹಾನಿಯಾಗಿದೆ. ಕುಶಾಲನಗರ ತಾಲೂಕಿನ ವಾಲ್ನೂರು– ತ್ಯಾಗತ್ತೂರು ಗ್ರಾಮದ ನಿವಾಸಿ ಜೀರನ್ ಎಂಬುವವರ ಮನೆಯ ಮೇಲೆ ತೆಂಗಿನ ಮರ ಬಿದ್ದು ಹಾನಿಯಾಗಿದೆ. ಆದರೆ, ಅದೃಷ್ಟವಶಾತ್ ಮನೆಯಲ್ಲಿದ್ದವರಿಗೆ ಯಾವುದೇ ಅಪಾಯ ಸಂಭವಿಸಿಲ್ಲ. ವಿರಾಜಪೇಟೆ ಪಟ್ಟಣದ ಮುಖ್ಯ ರಸ್ತೆಗಳು ಜಲಾವೃತಗೊಂಡು ವ್ಯಾಪಾರ ವಹಿವಾಟು, ಜನಜೀವನ ಅಸ್ತವ್ಯಸ್ತಗೊಂಡಿತು. ಮಡಿಕೇರಿಯ ಕಾವೇರಿ ಹಾಲ್‌ಗೆ ನೀರು ನುಗ್ಗಿ ವಿವಾಹ ಸಮಾರಂಭಕ್ಕೆ ಅಡಚಣೆ ಉಂಟಾಯಿತು. ಮಡಿಕೇರಿ– ಸಂಪಾಜೆ ಹೆದ್ದಾರಿಯ ಕಾಟಕೇರಿ ಬಳಿ ಬೃಹತ್ ಮರ ಬಿದ್ದು ವಾಹನ ಸಂಚಾರ ಸ್ಥಗಿತಗೊಂಡಿತ್ತು. ನಂತರ ತೆರವು ಕಾರ್ಯಾಚರಣೆ ನಡೆಯಿತು. ಸಿದ್ದಾಪುರ, ಚೆಟ್ಟಳ್ಳಿ, ಸೋಮವಾರಪೇಟೆ, ಕುಶಾಲನರ, ನಾಪೋಕ್ಲು, ಬೆಟ್ಟಗೇರಿ ಭಾಗದಲ್ಲೂ ರಸ್ತೆಗೆ ಮರಗಳು ಬಿದ್ದಿವೆ.

ಕಳೆದ 24 ಗಂಟೆಗಳಲ್ಲಿ ತಲಕಾವೇರಿ– ಭಾಗಮಂಡಲದಲ್ಲಿ ದಾಖಲೆಯ 8 ಇಂಚು ಮಳೆಯಾಗಿದೆ. ಹುದಿಕೇರಿ 125 ಮಿ.ಮೀ, ಶಾಂತಳ್ಳಿ 100 ಮಿ.ಮೀ, ಪೊನ್ನಂಪೇಟೆ 93 ಮಿ.ಮೀ, ನಾಪೋಕ್ಲು 72 ಮಿ.ಮೀ, ಮಡಿಕೇರಿ ತಾಲೂಕು ಸರಾಸರಿ 85.67 ಮಿ.ಮೀ, ವಿರಾಜ ಪೇಟೆ 109.6 ಮಿ.ಮೀ, ಸೋಮವಾರ ಪೇಟೆ 55 ಮಿ.ಮೀ, ಪೊನ್ನಂಪೇಟೆ ತಾಲೂಕು 81.44 ಮಿ.ಮೀ ಹಾಗೂ ಕುಶಾಲನಗರ ತಾಲೂಕಿನಲ್ಲಿ 38.5 ಮಿ.ಮೀ ಮಳೆಯಾಗಿದೆ.

ಮುಂದಿನ ಮೂರು ದಿನಗಳ ಕಾಲ ಮಳೆಯ ಪ್ರಮಾಣ ಹೆಚ್ಚಾಗಲಿದ್ದು, ಕೊಡಗು ಜಿಲ್ಲೆಯಾದ್ಯಂತ ರೆಡ್ ಅಲರ್ಟ್ ಘೋಷಿಸಲಾಗಿದೆ. ಮೇ 26 ರಿಂದ ಆರಂಭಗೊಳ್ಳಬೇಕಿದ್ದ ಜಿಲ್ಲೆಯ ಖಾಸಗಿ ಶಾಲೆಗಳು ಮಳೆಯ ಕಾರಣದಿಂದ ಮೇ 29ಕ್ಕೆ ಆರಂಭಗೊಳ್ಳಲಿವೆ.

ಶಿರಾಡಿಘಾಟ್ ರಸ್ತೆಯಲ್ಲಿ ಭೂಕುಸಿತ

ನಿರಂತರ ಮಳೆಗೆ ಮಣ್ಣು ಕುಸಿತ ಕಂಡಿದೆ. ತಡೆಗೋಡೆ ನಿರ್ಮಿಸಿದ್ದರೂ, ಮೇಲಿನಿಂದ ರಸ್ತೆಗೆ ಮಣ್ಣು ಕುಸಿಯುತ್ತಿದೆ. ಮೇಲ್ಭಾಗದಲ್ಲಿರುವ ಕಾಫಿ, ಸಿಲ್ವರ್ ಹಾಗೂ ಇತರೆ ಮರಗಳು ಮಣ್ಣಿನ ಸಮೇತ ನೆಲಕ್ಕುರುಳಿವೆ. ಬಿರುಗಾಳಿ ಸಹಿತ ಮಳೆ ಸುರಿಯುತ್ತಿರುವುದರಿಂದ ಭೂಕುಸಿತ ಆಗಿದೆ. ವಾಹನ ಸವಾರರು ಆತಂಕದಿಂದ ಪ್ರಯಾಣಿಕರು ಪರಿಸ್ಥಿತಿ ಎದುರಾಗಿದೆ.

ಹೋಟೆಲ್ ಗೋಡೆ ಕುಸಿತ, ನಾಲ್ವರಿಗೆ ಗಾಯ: ಭಾರೀ ಮಳೆಗೆ ಹೋಟೆಲ್‌ನ ಗೋಡೆ ಕುಸಿದು ಮೂವರು ಮಹಿಳೆಯರು ಹಾಗೂ ಓರ್ವ ವ್ಯಕ್ತಿ ಗಾಯಗೊಂಡ ಘಟನೆ ಸಕಲೇಶಪುರ ಪಟ್ಟಣದಲ್ಲಿ ನಡೆದಿದೆ. ಗಾಯಾಳುಗಳನ್ನು ಸಫಿಯಾ, ಫಯಿಮಾ ಭಾನು, ಶಹನಾಜ್ ಮತ್ತು ನಿಜಾರ್ ಎಂದು ಗುರುತಿಸಲಾಗಿದೆ.

ಗಾಯಗೊಂಡ ಮಹಿಳೆಯರು ಸಕಲೇಶಪುರದ ಹೊಸ ಬಸ್ ನಿಲ್ದಾಣದ ಬಳಿ ಹೋಟೆಲ್ ಹಾಗೂ ಕ್ಯಾಂಟಿನ್‌ನ್ನು ನಡೆಸುತ್ತಿದ್ದರು. ಮಳೆಯಿಂದ ಶಿಥಿಲಗೊಂಡಿದ್ದ ಒಂದು ಭಾಗದ ಗೋಡೆ ಕುಸಿದಿದೆ. ಮಳಿಗೆಗಳು ದೇವಾಲದಕೆರೆ ಗ್ರಾಮದ ಅಶೋಕಗೌಡ ಎಂಬವರಿಗೆ ಸೇರಿದ್ದು ಎಂದು ತಿಳಿದು ಬಂದಿದೆ. ಗಾಯಾಳುಗಳಿಗೆ ಸಕಲೇಶಪುರ ಕ್ರಾಫರ್ಡ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ವಿಧಾನಸೌಧ ಗೈಡೆಡ್ ಟೂರ್‌ಗೆ ಚಾಲನೆ

ಇದನ್ನ ಹತ್ತಿರದಿಂದ ನೋಡುವ ಸದವಕಾಶ ಲಭ್ಯವಿದೆ ಎಂದು ಹೆಚ್.ಕೆ. ಪಾಟೀಲ್ ಹೇಳಿದರು. ಇದು ಕೇವಲ ಕಟ್ಟಡ ವಲ್ಲ. ಜಗತ್ತಿನ ಅತ್ಯಂತ ಸುಂದರವಾದ ಕಟ್ಟಡ, ವಿದ್ಯಾರ್ಥಿಗಳಿಗೆ, ಆಸಕ್ತರಿಗೆ ಇದರ ದರ್ಶನ ಮಾಡಿಸುವ ದೃಷ್ಟಿಯಿಂದ ಅವಕಾಶವನ್ನು ಕಲ್ಪಿಸಿಕೊಡಲಾಗುತ್ತಿದೆ. ಇಲ್ಲಿಯವರಿಗೆ ಕೇವಲ ಆಡಳಿತ ಕಾರ್ಯಗಳಿಗಷ್ಟೇ ಸೀಮಿತವಾಗಿದ್ದ ವಿಧಾನಸೌಧವು, ಇನ್ನು ಮುಂದೆ ಪ್ರವಾಸಿ, ಪ್ರೇಕ್ಷಣೀಯ ಸ್ಥಳದ ಸಾಲಿಗೆ ಸೇರ್ಪಡೆಯಾಗಲಿದೆ. ಜೂನ್ 1ರಿಂದ ಸೀಮಿತ ದಿನಗಳಲ್ಲಿ ವಿಧಾನಸೌಧವು ಸಾರ್ವಜನಿಕ ವೀಕ್ಷಣೆಗೆ ಲಭ್ಯವಾಗಲಿದೆ ಎಂದು ಅವರು ತಿಳಿಸಿದರು.

ವಿಧಾನಸೌಧ ಪ್ರವಾಸ ಕಾರ್ಯಕ್ರಮವು ಮನೋರಂಜನೆಯ ಪ್ರವಾಸವಾಗಬಾರದು, ಶೈಕ್ಷಣಿಕ ಅಧ್ಯಯನದ ಪ್ರವಾಸವಾಗಬೇಕು. ಪ್ರಜಾಪ್ರಭುತ್ವದ ಮಹತ್ವವನ್ನು ಸಾರ್ವಜನಿಕರು ತಿಳಿದುಕೊಳ್ಳುವಂತಾಗಬೇಕು. ವಿದ್ಯಾರ್ಥಿಗಳು ಮುಂದೆ ರಾಜಕೀಯ ಕ್ಷೇತ್ರಕ್ಕೂ ಬರಬೇಕು, ಉತ್ತಮ ರಾಜಕೀಯ ಪಟುಗಳಾಗಲು ಶಕ್ತಿಸೌಧ ಸ್ಫೂರ್ತಿ ನೀಡುವಂತಾಗಬೇಕು ಎಂದು ಹೆಚ್‌ಕೆ ಪಾಟೀಲ್ ಇದೇ ವೇಳೆ ಸಲಹೆ ನೀಡಿದರು. ಕಳೆದ 75 ವರ್ಷಗಳಿಂದ ಆಡಳಿತಾತ್ಮಕ ಕಾರ್ಯಗಳಿಗಷ್ಟೇ ಸೀಮಿತವಾಗಿದ್ದ ವಿಧಾನಸೌಧ ಇನ್ನು ಮುಂದೆ ಪ್ರೇಕ್ಷಣೀಯ ಸ್ಥಳದ ಸಾಲಿಗೆ ಸೇರ್ಪಡೆಯಾಗಿದೆ. ಜೂನ್ 1 ರಿಂದ ಪ್ರತಿ ಭಾನುವಾರ, ಎರಡನೇ ಹಾಗೂ ನಾಲ್ಕನೇ ಶನಿವಾರದಂದು ವಿಧಾನಸೌಧ ಗೈಡೆಡ್ ಟೂರ್‌ಗೆ ಅವಕಾಶ ಇದೆ. ಪ್ರವಾಸಿಗರಿಗೆ ತಲಾ 50 ರೂ. ಪ್ರವೇಶ ಶುಲ್ಕ ವಿಧಿಸಲಾಗಿದೆ. 15 ವರ್ಷದೊಳಗಿನ ಮಕ್ಕಳಿಗೆ ಹಾಗೂ ಎಸ್‌ಎಸ್‌ಎಲ್‌ಸಿವರೆಗಿನ ವಿದ್ಯಾರ್ಥಿಗಳಿಗೆ ಪ್ರವೇಶ ಉಚಿತ ಇರಲಿದೆ. 30 ಜನರನ್ನೊಳಗೊಂಡ ಒಂದು ಬ್ಯಾಚ್‌ನಂತೆ 10 ಬ್ಯಾಚ್‌ಗಳಿಗೆ ವಿಧಾನಸೌಧ ವೀಕ್ಷಣೆಗೆ ಅವಕಾಶವಿದೆ. ಸದ್ಯಕ್ಕೆ 10 ಜನ ಗೈಡ್‌ಗಳು ವಿಧಾನಸೌಧದ ಭವ್ಯತೆ, ಪರಂಪರೆ, ಇತಿಹಾಸ, ಕಟ್ಟಡ ಶೈಲಿ, ಅಧಿವೇಶನಗಳ ಬಗ್ಗೆ ವಿವರಣೆ ಕೊಡಲಿದ್ದಾರೆ. ಗ್ರ್ಯಾಂಡ್ ಸ್ಟೆಪ್ಸ್, ಕಟ್ಟಡ ಶೈಲಿ, ಸಭಾಂಗಣಗಳು, ವೀಕ್ಷಕರ ಗ್ಯಾಲರಿ, ವಿಧಾನಸೌಧ ಫೌಂಡೇಷನ್ ಸ್ಟೋನ್, ಗಣ್ಯರ ಪ್ರತಿಮೆಗಳು, ಭುವನೇಶ್ವರಿ ಪ್ರತಿಮೆ, ಸಿಎಂ ಕೊಠಡಿ, ಸಂಪುಟ ಸಭೆ ಕೊಠಡಿ ಮುಂಭಾಗಗಳು, ವಿಧಾನಸೌಧದ ವಿಶಾಲ ಕಾರಿಡಾರ್‌ಗಳ ವೀಕ್ಷಣೆ ಮತ್ತು ವಿವರಣೆ ಇರಲಿದೆ.

ಹೇಗಿರಲಿದೆ ಶಕ್ತಿಸೌಧ ಗೈಡೆಡ್ ಟೂರ್?

- ಪ್ರತೀ ಭಾನುವಾರ ಹಾಗೂ ಎರಡನೇ ಮತ್ತು ನಾಲ್ಕನೇ ಶನಿವಾರ ವಿಧಾನಸೌಧ ಪ್ರವಾಸ
- ಆನ್‌ಲೈನ್‌ನಲ್ಲಿ ಮುಂಚಿತವಾಗಿ ಟಿಕೆಟ್ ಬುಕ್ ಮಾಡಬೇಕು.
- ಜೂನ್ 1 ರಿಂದ ಅಧಿಕೃತ ವಿಧಾನಸೌಧ ಪ್ರವಾಸ ಆರಂಭ.
- ವಿಧಾನಸೌಧ ಟೂರ್‌ಗೆ 16 ವರ್ಷ ಮೇಲ್ಪಟ್ಟವರಿಗೆ 50 ರೂಪಾಯಿ ದರ ನಿಗದಿ.
- 16 ವರ್ಷ ವಯಸ್ಸಿಗಿಂತ ಕಡಿಮೆ ಇರುವ ಮಕ್ಕಳಿಗೆ, ಎಸ್ಸೆಸ್ಸೆಲ್ಸಿವರೆಗಿನ ವಿದ್ಯಾರ್ಥಿಗಳಿಗೆ ಉಚಿತ ಪ್ರವೇಶ.
- https://kstdc.co/activities ವೆಬ್‌ಸೈಟ್‌ನಲ್ಲಿ ಟಿಕೆಟ್ ಬುಕ್ ಮಾಡಬೇಕು.
- ವಿಧಾನಸೌಧ ಟೂರ್ ಬೆಳಗ್ಗೆ 8 ರಿಂದ ಸಂಜೆ 5 ಗಂಟೆವರೆಗೆ ಇರಲಿದೆ.
- ಹತ್ತು ಬ್ಯಾಚ್‌ಗಳಿಗೆ ಮಾತ್ರ ಅವಕಾಶ. ಪ್ರತೀ ಬ್ಯಾಚ್‌ನಲ್ಲಿ 30 ಮಂದಿ.
- ವಿಧಾನಸೌಧ ಪ್ರವಾಸಕ್ಕೆ ಪ್ರತಿ ಬ್ಯಾಚ್‌ಗೂ ಒಂದೂವರೆ ಗಂಟೆ ಸಮಯ, ಒಂದೂವರೆ ಕಿಮೀ ನಡಿಗೆ ಇರಲಿದೆ.
- ವಿಕಾಸಸೌಧದ ಎಂಟ್ರಿ ಗೇಟ್ (ನಂಬರ್ 3) ಮೂಲಕ ಟೂರ್ ಆರಂಭವಾಗಲಿದೆ.
- 20 ನಿಮಿಷ ಮುಂಚೆ ಟೂರ್ ಆರಂಭಕ್ಕೂ ಮುನ್ನ ಹಾಜರಿರಬೇಕು.
- ಟಿಕೆಟ್ ಬುಕ್ ಮಾಡಿದವರು ಸರ್ಕಾರ ವಿತರಿಸಿರುವ ಯಾವುದಾದರೂ ಗುರುತಿನ ಚೀಟಿ ತರಬೇಕು.
- ವಿಧಾನಸೌಧ ಟೂರ್ ವೇಳೆ ನಿಗದಿತ ಸ್ಥಳದಲ್ಲಿ ಫೋಟೋ ತೆಗೆಯಲು ಅವಕಾಶ.
- ವಿಧಾನಸೌಧ ಟೂರ್‌ಗೆ 10 ಗೈಡ್‌ಗಳ ನೇಮಕ. ಕನ್ನಡ ಹಾಗೂ ಇಂಗ್ಲಿಷ್ ಭಾಷೆಯಲ್ಲಿ ವಿವರಣೆ ನೀಡಲಾಗುತ್ತದೆ.

ಮನೆಗೂ ಪೈಪ್ ನೀರು

ನಡುವಿನ ಹೊಂದಾಣಿಕೆ ಕೊರತೆಯು ಸಾಮಾಜಿಕ ಪರಕೀಯತೆ ಮತ್ತು ಆರ್ಥಿಕ ಅಸಮರ್ಥತೆಗೆ ಕಾರಣವಾಗಬಹುದು ಎಂದು ಹೇಳಿದರು. ತಾಂತ್ರಿಕ ಪ್ರಗತಿಯು ಲಭ್ಯತೆ, ಸಾಕ್ಷರತೆ, ಶಿಕ್ಷಣ ಮತ್ತು ಕೌಶಲ್ಯವನ್ನು ಮೀರಿಸುವ ಡಿಜಿಟಲ್ ಶ್ರೇಣೀಕರಣದ ಕಳವಳಕಾರಿಯಾಗಿದೆ. ನಾವು ಡಿಜಿಟಲ್ ವಿಭಜನೆಯನ್ನು ಮಾತ್ರವಲ್ಲ, ಡಿಜಿಟಲ್ ಸಾಮರ್ಥ್ಯದ ಅಂತರವನ್ನು ಕೂಡ ಕಡಿಮೆ ಮಾಡಬೇಕು ಎಂದು ಅವರು ಹೇಳಿದರು.

2047 ರವರೆಗಿನ ಪ್ರಯಾಣವು ಸಂಪೂರ್ಣವಾಗಿ ಆರ್ಥಿಕವಾಗಿರಲು ಸಾಧ್ಯವಿಲ್ಲ. ಅದು ಸಾಮಾಜಿಕವಾಗಿ ಸಾಮರಸ್ಯ ಮತ್ತು ಸಾಂವಿಧಾನಿಕವಾಗಿ ಆಧಾರವಾಗಿರಬೇಕು. ಹೆಚ್ಚುತ್ತಿರುವ ಧ್ರುವೀಕರಣ, ಸಂಸ್ಥೆಗಳ ಮೇಲಿನ ನಂಬಿಕೆಯು ನಮ್ಮ ಗಣರಾಜ್ಯದ ಅಡಿಪಾಯವನ್ನೇ ದುರ್ಬಲಗೊಳಿಸುತ್ತಿದೆ. ಬಹುತ್ವ, ನ್ಯಾಯ ಮತ್ತು ಕಾನೂನಿನ ನಿಯಮಕ್ಕೆ ನಮ್ಮ ಬದ್ಧತೆಯನ್ನು ನಾವು ಪುನರುಚ್ಚರಿಸಬೇಕು ಎಂದು ಅವರು ಹೇಳಿದರು.

ಜಾಗತಿಕ ಪುನರ್ರಚನೆಗಳ ಯುಗದಲ್ಲಿ, ಭಾರತವು ಜಾಗರೂಕರಾಗಿರಬೇಕು. ಪ್ರಾದೇಶಿಕ ಸಮಗ್ರತೆ, ರಾಷ್ಟ್ರೀಯ ಭದ್ರತೆ ಮತ್ತು ಕೋಮು ಸಾಮರಸ್ಯಕ್ಕೆ ಇರುವ ಸವಾಲುಗಳು ಪರಿಣಾಮಕಾರಿ ಮಾತ್ರವಲ್ಲದೆ ಸ್ಥಿತಿಸ್ಥಾಪಕ ಮತ್ತು ಎಲ್ಲರನ್ನೂ ಒಳಗೊಳ್ಳುವ ಆಡಳಿತ ಮಾದರಿಯ ಅಗತ್ಯವಿದೆ. ಭದ್ರತೆಯಿಲ್ಲದ ಅಭಿವೃದ್ಧಿ ದುರ್ಬಲವಾಗಿದೆ. ನ್ಯಾಯವಿಲ್ಲದ ಭದ್ರತೆ ಅಸಮರ್ಥನೀಯ ಎಂದು ಅವರು ಹೇಳಿದರು. ಸವಾಲುಗಳು ವ್ಯವಸ್ಥಿತ ರೂಪಾಂತರವನ್ನು ಬಯಸುತ್ತವೆ ಮತ್ತು ಪ್ರತಿಕ್ರಿಯೆಗಳು ಪುರಾವೆ ಆಧಾರಿತ ನೀತಿ ನಿರೂಪಣೆ, ಹಕ್ಕು ಆಧಾರಿತ ಕಲ್ಯಾಣ ಮತ್ತು ಸಹಕಾರಿ ಒಕ್ಕೂಟವಾದದಲ್ಲಿ ನೆಲೆಗೊಂಡಿರಬೇಕು ಎಂದು ಸಿಎಂ ಹೇಳಿದರು.

ಭಾರತ @2047 ಕೇವಲ ಘೋಷಣೆಯಾಗಿರಬಾರದು: ಅದು ನಮ್ಮೆಲ್ಲರಿಗೂ ಸವಾಲು ಮತ್ತು ಕರೆ ಆಗಿರಬೇಕು. ಅಸಮಾನತೆಯ ಅಂತರವನ್ನು ಸವಾಲು ಮತ್ತು ಸಬಲೀಕೃತ ರಾಜ್ಯಗಳ ಒಕ್ಕೂಟವಾಗಿ ಕರೆ ನೀಡಬೇಕು. ಭಾರತ @2047ರ ಹಾದಿಯು ಹಿಮಾಲಯ, ಗಂಗಾ ನದಿಯ ದಡದಿಂದ ಕಾವೇರಿ ಬಯಲಿನವರೆಗಿನ ಪ್ರತಿಯೊಂದು ರಾಜ್ಯದ ದೃಷ್ಟಿಕೋನಗಳು, ಸಾಮರ್ಥ್ಯಗಳು ಮತ್ತು ಆಕಾಂಕ್ಷೆಗಳೊಂದಿಗೆ ಸುಗಮವಾಗಿರಬೇಕು ಎಂದು ಅವರು ಹೇಳಿದರು.

ಅಮಾನತು ವಾಪಸ್

ಇದೀಗ ಬಿಜೆಪಿ ಶಾಸಕ ಅಮಾನತು ಆದೇಶವನ್ನು ಹಿಂಪಡೆಯಲು ಸಭೆಯಲ್ಲಿ ತೀರ್ಮಾನವಾಗಿದೆ. ಶಾಸಕರ ಅಮಾನತು ಆದೇಶವನ್ನು ಹಿಂಪಡೆಯಲಾಗಿದೆ. ಘಟನೆ ಬಗ್ಗೆ ಎಲ್ಲಾ ಶಾಸಕರು ವಿಷಾದ ವ್ಯಕ್ತಪಡಿಸಿದ್ದಾರೆ. ವಿಪಕ್ಷ ನಾಯಕರು ಕೂಡ ನನಗೆ ಮನವಿ ಸಲ್ಲಿಸಿದ್ದರು. ಇನ್ಮು ಮುಂದೆ ಹೀಗಾಗದಂತೆ ನೋಡಿಕೊಳ್ಳುವುದಾಗಿ ಭರವಸೆ ನೀಡಿದ್ದಾರೆ. 18 ಶಾಸಕರನ್ನು ಅಮಾನತು ಮಾಡಿ ಎರಡು ತಿಂಗಳಾಗಿದೆ ಈಗ ಸಂತೋಷದಿಂದ ಶಾಸಕರು ಅಮಾನತು ಹಿಂಪಡೆದಿದ್ದೇನೆ. ಯಾವುದೇ ಷರತ್ತು ಇಲ್ಲ. ಎಲ್ಲರೂ ನಮ್ಮ ಮಿತ್ರರು. ಆ ಸಮಯದಲ್ಲಿ ದುರ್ನಡತೆ ತೋರಿದ್ದಕ್ಕೆ ಕ್ರಮಕೈಗೊಂಡೆ. ಕ್ರಮತೆಗೆದುಕೊಳ್ಳುವುದಕ್ಕೆ ನನಗೆ ಅಧಿಕಾರವಿದೆ ಎಂದು ಸ್ಪೀಕರ್ ಯು.ಟಿ.ಖಾದರ್ ಹೇಳಿದ್ದಾರೆ.

ಸ್ಪೀಕರ್ ಯು.ಟಿ.ಖಾದರ್ ನೇತೃತ್ವದಲ್ಲಿ ನಡೆದ ಸಂಧಾನ ಸಭೆ ಸಭೆಯಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ವಿಪಕ್ಷ ನಾಯಕ ಆರ್. ಅಶೋಕ್, ಡೆಪ್ಯುಟಿ ಸ್ಪೀಕರ್ ರುದ್ರಪ್ಪ ಲಮಾಣಿ, ಕಾನೂನು ಸಚಿವ ಎಚ್.ಕೆ.ಪಾಟೀಲ್ ಭಾಗಿಯಾಗಿದ್ದರು.

ನೇಮಕದ ಹಿಂದೆ ಸಚಿವರೊಬ್ಬರ ಕೈವಾಡ

ಕೇಂದ್ರ ಸರ್ಕಾರದ ಜೊತೆ ಇದೇ ರೀತಿ ಸಂಘರ್ಷದ ಹಾದಿಯಲ್ಲಿ ಸಾಗುತ್ತಿದ್ದಾರೆ. ಅಭಿವೃದ್ಧಿ ವಿಚಾರ ಬದಿಗಿಟ್ಟು ರಾಜಕಾರಣ ಮಾಡುವುದು ರಾಜ್ಯ ಕಾಂಗ್ರೆಸ್ ಸರ್ಕಾರದ ರಾಜಕಾರಣವಾಗಿದೆ ಎಂದು ಟೀಕಿಸಿದರು. ಕೇಂದ್ರ ಸರ್ಕಾರದ ವಿರುದ್ಧ ದೆಹಲಿಯ ಜಂತರ್ ಮಂತರ್‌ನಲ್ಲಿ ನಡೆಯುವ ಪ್ರತಿಭಟನೆಯಲ್ಲಿ ಸಿದ್ದರಾಮಯ್ಯ ಭಾಗವಹಿಸುತ್ತಾರೆ. ಆದರೆ ದೇಶದ ಅಭಿವೃದ್ಧಿ ಬಗ್ಗೆ

ಚರ್ಚೆ ನಡೆಸಲು ಆಯೋಜಿಸುವ ಪ್ರಧಾನಮಂತ್ರಿ ಅಧ್ಯಕ್ಷತೆಯ ಸಭೆಗೆ ಗೈರು ಹಾಜರಾಗುತ್ತಾರೆ. ಇದು ಒಳ್ಳೆಯ ಬೆಳವಣಿಗೆಯಲ್ಲ ಎಂಬುದನ್ನು ಸಿದ್ದರಾಮಯ್ಯ ಅರಿಯಬೇಕು ಎಂದು ವಿಜಯೇಂದ್ರ ಸಲಹೆ ನೀಡಿದರು. ರಿಯಲ್ ಎಸ್ಟೇಟ್ ಮಾಫಿಯಾ ಒತ್ತಡಕ್ಕೆ ಮಣಿದ ಡಿ.ಕೆ.ಶಿವಕುಮಾರ್ ರಾಮನಗರ ಜಿಲ್ಲೆಯನ್ನು ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಬದಲಾಯಿಸಿದ್ದಾರೆ. ರಾಜ್ಯದ ಮೊದಲ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ನಾಮಕರಣ ಮಾಡಿದ್ದ ಹೆಸರು ಬದಲಾಯಿಸಿ ಅವರ ಹೆಸರಿಗೆ ಅವಮಾನ ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ರಾಮನಗರ ಹೆಸರಿನಲ್ಲಿ ಅಭಿವೃದ್ಧಿ ಸಾಧ್ಯವಾಗುತ್ತಿರಲಿಲ್ಲವೇ ಎಂದು ಪ್ರಶ್ನಿಸಿದ ವಿಜಯೇಂದ್ರ, ತಮ್ಮ ಆಸ್ತಿದರ ಹೆಚ್ಚಳ ಮಾಡಿಕೊಳ್ಳಲು ಹೆಸರು ಬದಲಾವಣೆ ಮಾಡುತ್ತಿದ್ದಾರೆ. ಯಾರ ಆಸ್ತಿ ಎಷ್ಟಿದೆ ಎಂದು ಮುಂದಿನ ದಿನದಲ್ಲಿ ಬಹಿರಂಗವಾಗಲಿದೆ ಎಂದು ಭವಿಷ್ಯ ನುಡಿದರು.

ಮೆಡಿಕಲ್ ಮಾಫಿಯಾಗೆ ಮಣಿದು ಜನ್ ಔಷಧ್ ಕೇಂದ್ರಕ್ಕೆ ಬೀಗ

ರಾಜ್ಯದ ಮೆಡಿಕಲ್ ಮಾಫಿಯಾಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಕೇಂದ್ರ ಸರ್ಕಾರದ ಜನ್ ಔಷದ್ ಕೇಂದ್ರಗಳನ್ನು ರಾಜ್ಯ ಕಾಂಗ್ರೆಸ್ ಸರ್ಕಾರ ಬಂದ್ ಮಾಡುತ್ತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಆರೋಪ ಮಾಡಿದರು.

ನರೇಂದ್ರ ಮೋದಿ ಕಂಡರೆ ಆಗುವುದಿಲ್ಲ, ಈ ಹಿನ್ನೆಲೆ ನರೇಂದ್ರ ಮೋದಿ ಫೋಟೋ ಕಾಣಬಾರದು ಎಂದು ಜನ್ ಔಷಧ್ ಕೇಂದ್ರಗಳನ್ನು ಬಂದ್ ಮಾಡಲಾಗುತ್ತಿದೆ ಎಂದು ದೂರಿದರು. ಬಡವರಿಗೆ ಕಡಿಮೆ ದರದಲ್ಲಿ ಔಷಧಿ ದೊರೆಯಲಿ ಎಂಬ ಕಾರಣದಿಂದ ಜನ್ ಔಷಧ್ ಕೇಂದ್ರ ತೆರೆಯಲಾಗಿತ್ತು. ಇದರಿಂದ ಕೆಲವು ಮೆಡಿಕಲ್ ಮಾಫಿಯಾಗಳ ಲಾಭ ಪಾತಾಳಕ್ಕೆ ಹೋಗಿತ್ತು. ಇವರಿಗೆ ಲಾಭ ಮಾಡಿಕೊಡಲು ಈಗ ಜನ್ ಔಷಧ್ ಕೇಂದ್ರ ಮುಚ್ಚಿಸಲಾಗುತ್ತಿದೆ ಎಂದು ಹೇಳಿದರು.

ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಿ ದೊರೆಯುತ್ತಿರಲಿಲ್ಲ, ಹೊರಗಡೆಯಿಂದ ಔಷಧಿ ತರಲು ವೈದ್ಯರು ಶಿಫಾರಸು ಮಾಡುತ್ತಿದ್ದರು. ಇಂತಹ ಸಂದರ್ಭದಲ್ಲಿ ಜನ್ ಔಷಧ್ ಕೇಂದ್ರ ಜನರಿಗೆ ಅನುಕೂಲವಾಗಿತ್ತು. ಆದರೆ ಈಗ ಜನ್ ಔಷಧ್ ಕೇಂದ್ರದ ವಿರುದ್ಧ ಅಪಪ್ರಚಾರ ಮಾಡಿ ಮುಚ್ಚಿಸಲಾಗುತ್ತಿದೆ. ತಮ್ಮ ವೈಫಲ್ಯ ಮುಚ್ಚಿಕೊಳ್ಳಲು ಕೇಂದ್ರ ಸರ್ಕಾರದ ವಿರುದ್ಧ ಆರೋಪ ಮಾಡುತ್ತಿದ್ದಾರೆ ಎಂದು ಆಪಾದಿಸಿದರು.

ಸಾಧಕರನ್ನು ನೇಮಕ ಮಾಡಬಹುದಲ್ಲವೆ

ಅಂತರಾಷ್ಟ್ರೀಯ ಮಟ್ಟದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಕುನಾಡಿನ ಬಹಳಷ್ಟು ಸಾಧಕರಿದ್ದಾರೆ. ಅವರ್ಯಾರು ಸರ್ಕಾರದ ಕಣ್ಣಿಗೆ ಬೀಳಲಿಲ್ಲವೇ ಎಂದು ಮರು ಪ್ರಶ್ನಿಸಿದ ಯದುವೀರ್, ಅವರದೇ ಪಕ್ಷದ ರಮ್ಯಾ ಅವರು ರಾಜ್ಯ ಸರ್ಕಾರದ ನಿರ್ಧಾರಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆ. ಈ ಮೂಲಕ ಕನ್ನಡಿಗರನ್ನೆ ರಾಯಭಾರಿಯಾಗಿ ಮಾಡಿದ್ದರೆ ಬ್ರ್ಯಾಂಡ್ ಮೌಲ್ಯ ಮತ್ತಷ್ಟು ಹೆಚ್ಚಾಗುತ್ತಿತ್ತು ಎಂದರು.

ಮೈಸೂರು ಸ್ಯಾಂಡಲ್ ಸೋಪ್‌ಗೆ ರಾಯಭಾರಿಯಾಗುವ ಆಸೆ ನನಗಿಲ್ಲ. ಮೈಸೂರು ರಾಜಮನೆತನ ಕಮರ್ಷಿಯಲ್ ಆಗಿ ಸೇವೆ ಮಾಡುವುದಿಲ್ಲ ನಾವು ಸದಾಕಾಲ ಕನ್ನಡದ ಬ್ರ್ಯಾಂಡ್ ಗಳ ಪರವಾಗಿಯೇ ನಾವು ಇರುತ್ತೇವೆ. ಈ ಹಿನ್ನೆಲೆ ರಾಯಭಾರಿಯಾಗಲು ನನ್ನ ಹೆಸರು ಸಾಮಾಜಿಕ ಜಾಲತಾಣದಲ್ಲಿ ಬರುತ್ತಿರುವುದಕ್ಕೆ ನನ್ನ ಸಹಮತ ಇಲ್ಲ ಎಂದು ಯದುವೀರ್ ಸ್ಪಷ್ಟಪಡಿಸಿದರು. ಮೈಸೂರು ಸ್ಯಾಂಡಲ್ ಸೋಪ್ ಕನ್ನಡಿಗರೆ ಕಟ್ಟಿ ಬೆಳೆಸಿದ ಸಂಸ್ಥೆಯಾಗಿದೆ. ಆದರೆ ಈಗ ಬಾಲಿವುಡ್ ನಟಿ ತಮನ್ನಾ ಭಾಟಿಯಾ ಅವರನ್ನು ರಾಯಭಾರಿಯಾಗಿ ನೇಮಕ ಮಾಡಿರುವ ರಾಜ್ಯ ಸರ್ಕಾರದ ತೀರ್ಮಾನಕ್ಕೆ ನಮ್ಮ ವಿರೋಧವಿದೆ ಎಂದು ಸ್ಪಷ್ಟಪಡಿಸಿದರು. ಮೈಸೂರು ಸ್ಯಾಂಡಲ್ ಸೋಪ್ ಅಂತರಾಷ್ಟ್ರೀಯ ಮಟ್ಟದಲ್ಲಿ ಬೆಳೆದ ಸಂಸ್ಥೆಯಾಗಿದ್ದು, ಇದಕ್ಕೆ ಕನ್ನಡಿಗರನ್ನೇ ರಾಯಭಾರಿಯಾಗಿ ನೇಮಕ ಮಾಡಬೇಕು ಎಂದು ಆಗ್ರಹಿಸಿದರು.

ಅಪರಿಚಿತ ವ್ಯಕ್ತಿಯ ಬರ್ಬರ ಹತ್ಯೆ

ಸುತ್ತಮುತ್ತಲಿನ ಯಾವುದೇ ಠಾಣೆಯಲ್ಲಿ ವ್ಯಕ್ತಿ ನಾಪತ್ತೆ ಪ್ರಕರಣ ದಾಖಲಾಗಿಲ್ಲ ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದ್ದು, ಪೊಲೀಸರು ಮೃತದೇಹದ ಛಾಯಾಚಿತ್ರವನ್ನು ರಾಜ್ಯದ ಎಲ್ಲಾ ಠಾಣೆಗಳಿಗೂ ರವಾನಿಸಿದ್ದಾರೆ. ಸ್ಥಳಕ್ಕೆ ಜಿಲ್ಲಾ ಎಸ್ಪಿ ವಿಷ್ಣುವರ್ಧನ್, ಮೈಸೂರು ಗ್ರಾಮಾಂತರ ಡಿವೈಎಸ್ಪಿ ಕರೀಂ ರಾವುತರ್ ಸೇರಿದಂತೆ ಹಿರಿಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದ್ದಾರೆ.

ವರನನ್ನೇ ಅಪಹರಿಸಿದ ನೃತ್ಯಗಾರ್ತಿಯರು



ಬಿಹಾರ: ಮದುವೆ ಸಮಾರಂಭದಲ್ಲಿ ಮನರಂಜನೆ ನೀಡಲೆಂದು ಕರೆಸಲಾಗಿದ್ದ ನೃತ್ಯಗಾರ್ತಿಯರೇ, ವರನನ್ನೇ ಮಂಟಪದಿಂದ ಅಪಹರಿಸಿರುವ ಘಟನೆ ಬಿಹಾರದಲ್ಲಿ ನಡೆದಿದೆ. ಆತನ ಮದುವೆಗೆಂದು ಡ್ಯಾನ್ಸರ್‌ಗಳನ್ನು ನೇಮಿಸಲಾಗಿತ್ತು. ಬಿಹಾರದ ಗೋಪಾಲ್ ಗಂಜ್ ಜಿಲ್ಲೆಯಲ್ಲಿ ಶನಿವಾರ ಬೆಳಗಿನ ಜಾವ 2 ಗಂಟೆ ಸುಮಾರಿಗೆ ಈ ಘಟನೆ ನಡೆದಿದೆ. ಘಟನಾ ಸ್ಥಳದಲ್ಲಿದ್ದ ಜನರ ಪ್ರಕಾರ, ಮದುವೆಗಾಗಿ ನೇಮಿಸಿಕೊಳ್ಳುವ ನೃತ್ಯ ತಂಡವಾದ ಲೌಂಡಾನಾಚ್‌ನ ಸದಸ್ಯರು ಕುಟುಂಬ ಸದಸ್ಯರ ಮೇಲೆ ಹಲ್ಲೆ ನಡೆಸಿ ವರನನ್ನು ಅಪಹರಿಸಿದ್ದಾರೆ ಎಂದು ಆರೋಪಿಸಲಾಗಿದೆ.

ನೃತ್ಯ ಮಾಡುತ್ತಿದ್ದ ಸಂದರ್ಭದಲ್ಲಿ ಯಾವುದೋ ವಿಚಾರಕ್ಕೆ ವಿವಾದ ಶುರುವಾಗಿತ್ತು, ಅದು ಹಿಂಸಾತ್ಮಕ ಘರ್ಷಣೆಯಾಗಿ ಮಾರ್ಪಟ್ಟಿತ್ತು. ಪರಿಸ್ಥಿತಿ ನಿಯಂತ್ರಣ ತಪ್ಪಿ, ಆ ತಂಡದವರು ಮದುವೆ ಮಂಟಪದೊಳಗೆ ನುಗ್ಗಿ, ವಧು ಮತ್ತು ಆಕೆಯ ಕುಟುಂಬ ಸೇರಿದಂತೆ ಅತಿಥಿಗಳ ಮೇಲೆ ದಾಳಿ ಮಾಡಿದರು. ನಾವು ಮದುವೆ ಸಮಾರಂಭದಲ್ಲಿ ನಿರತರಾಗಿದ್ದಾಗ, ಇದ್ದಕ್ಕಿದ್ದಂತೆ ಅವರು ಮನೆಗೆ ನುಗ್ಗಿ ವರನನ್ನು ಹೊಡೆಯಲು ಪ್ರಾರಂಭಿಸಿದರು. ಅವರು ವರನನ್ನು ಅಪಹರಿಸಿದರು.

ಮನೆಯೊಳಗಿನಿಂದ ಆಭರಣಗಳು, ಬೆಲೆಬಾಳುವ ವಸ್ತುಗಳನ್ನು ದೋಚಿದರು ಎಂದು ವಧುವಿನ ತಾಯಿ ಹೇಳಿದ್ದಾರೆ. ಹೊರಗಿನ ಕುರ್ಚಿಗಳನ್ನು ತುಂಡರಿಸಿ, ವರನನ್ನು ಥಳಿಸಿ ವಾಹನದಲ್ಲಿ ಕರೆದೊಯ್ದರು ಎಂದು ಸ್ಥಳೀಯರು ಹೇಳಿದರು. ದಾಳಿಕೋರರ ಈ ಘಟನೆಯಿಂದ ಇಡೀ ಕುಟುಂಬ ಭಯಭೀತರಾಗಿದ್ದಾರೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಟೀಂ ಮೈಸೂರ್‌ನಿಂದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪುರಸ್ಕಾರ



ಟೀಂ ಮೈಸೂರು ವತಿಯಿಂದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅಧಿಕ ಅಂಕ ಪಡೆದ 42 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ, ಆತ್ಮೀಯವಾಗಿ ಅಭಿನಂದಿಸಲಾಯಿತು.

ಮೈಸೂರು, ಮೇ 25(ಎಂಕೆ)–ಟೀಂ ಮೈಸೂರು ವತಿಯಿಂದ 2024–25ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ.85ಕ್ಕೂ ಹೆಚ್ಚು ಅಂಕಗಳನ್ನು ಪಡೆದು ತೇರ್ಗಡೆಯಾದ 42 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಾಯಿತು.

ಮೈಸೂರಿನ ಇಟ್ಟಿಗೆಗೂಡಿನಲ್ಲಿರುವ ಮಾರಿಯಮ್ಮನ ಸಮುದಾಯ ಭವನದಲ್ಲಿ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ ವಿದ್ಯಾರ್ಥಿಗಳನ್ನು ಸನ್ಮಾನಿಸಿದರು. ಬಳಿಕ ಮಾತನಾಡಿದ ಅವರು, ವಿದ್ಯಾರ್ಥಿಗಳ ಪ್ರತಿಭೆಗೆ ಮನ್ನಣೆ ನೀಡುವ ಇಂತಹ ವಿಶಿಷ್ಟ ಸೇವಾ ಕಾರ್ಯ ಹಾಗೂ ನಿಸ್ವಾರ್ಥ ಸಾಮಾಜಿಕ ಸೇವೆ ಸಲ್ಲಿಸುತ್ತಿರುವ ಟೀಂ ಮೈಸೂರು ತಂಡದ ಕಾರ್ಯವೈಖರಿಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವ (ಪರೀಕ್ಷಾಂಗ) ಪ್ರೊ.ಎನ್.ನಾಗರಾಜ್ ಮಾತನಾಡಿ, ವಿದ್ಯಾರ್ಥಿಗಳ ಸಾಧನೆ ಹಿಂದೆ ಶಿಕ್ಷಕರು ಹಾಗೂ ಪೋಷಕರ ಪರಿಶ್ರಮ ಇರಲಿದ್ದು, ಅವರನ್ನು ಮರೆಯಬಾರದು. ಅಂಕಗಳಿಗಿಂತ ನಿಮ್ಮ ವ್ಯಕ್ತಿತ್ವ ಮುಖ್ಯ, ಆತ್ಮವಿಶ್ವಾಸ ಪ್ರಧಾನವಾದುದು. ಪ್ರತಿಭೆ ಎಲ್ಲರಲ್ಲಿಯೂ ಅಡಗಿ ರುತ್ತದೆ. ಆದರೆ, ಅದನ್ನು ಸರಿಯಾಗಿ ಗುರ್ತಿಸಿ, ಸದ್ಬಳಕೆ ಮಾಡಿಕೊಂಡಾಗ ಮಾತ್ರ ಯಶಸ್ಸು ಸಾಧ್ಯ ಎಂದು ತಿಳಿಸಿದರು.

ಸೇಫ್ ವೀಲ್ಸ್ ಪ್ರಶಾಂತ್, ದಿ ಮೈಸೂರು ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಬಿ.ಕೋದಂಡರಾಮು, ಟೀಂ ಮೈಸೂರು ತಂಡದ ಗೋಕುಲ್ ಗೋವರ್ಧನ್, ಹರೀಶ್ ವಿ.ಶೆಟ್ಟಿ, ಕಿರಣ್ ಜೈ ರಾಮೇಗೌಡ, ಹಿರಿಯಣ್ಣ, ಹೇಮಂತ್‌ಕುಮಾರ್, ಅನಿಲ್ ಜೈನ್, ಮುರಳಿ, ರಾಮಪ್ರಸಾದ್, ದಾಮೋದರ್, ಮನೋಹರ, ಹರೀಶ್ ಶೆಟ್ಟಿ, ಸುನಿಲ್, ಗಣೇಶ್, ಪ್ರಸನ್ನ ರಾಜ್ ಗುರು, ನವೀನ್ ಶೆಟ್ಟಿ, ರಾಘವೇಂದ್ರ, ಸಚಿನ್, ಕೃಷ್ಣ, ನವೀನ್, ಹರೀಶ್ ಎಲೆಕ್ಟ್ರಿಕಲ್, ತಿಲಕ್, ಮನೋಜ್, ಸಹನಾ, ಶಾಂತಕುಮಾರಿ, ಗೌರವ್ ಸುಧಾ ಮುರಳಿ, ಮಂಜುಳಾ, ಉಮಾ ಹಿರಿಯಣ್ಣ, ಜ್ಯೋತಿ ರಾಮಪ್ರಸಾದ್, ಪೂಜಾಶ್ರೀ, ಸುಕೃತ ಮತ್ತಿತರರಿದ್ದರು.

ಶೀಲಾ ಅವರಿಗೆ ಆರ್ಯಭಟ ಅಂತರ ರಾಷ್ಟ್ರೀಯ ಪ್ರಶಸ್ತಿ



ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ (ಸೆಸ್ಕ್)ದ ನಿವೃತ್ತ ವ್ಯವಸ್ಥಾಪಕ ನಿರ್ದೇಶಕಿ ಜಿ.ಶೀಲಾ ಅವರಿಗೆ ಬೆಂಗಳೂರಿನ ಆರ್ಯಭಟ ಸಾಂಸ್ಕೃತಿಕ ಸಂಸ್ಥೆಯಿಂದ ಆರ್ಯಭಟ ಅಂತರ ರಾಷ್ಟ್ರೀಯ ಪ್ರಶಸ್ತಿ–2025 ಪ್ರದಾನ ಮಾಡಲಾಯಿತು.

ಮೈಸೂರು, ಮೇ 25(ಎಂಟಿವೈ)–ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ(ಸೆಸ್ಕ್)ದ ನಿವೃತ್ತ ವ್ಯವಸ್ಥಾಪಕ ನಿರ್ದೇಶಕಿ ಜಿ.ಶೀಲಾ ಅವರಿಗೆ ಬೆಂಗಳೂರಿನ ಆರ್ಯಭಟ ಸಾಂಸ್ಕೃತಿಕ ಸಂಸ್ಥೆ ಆರ್ಯಭಟ ಅಂತಾರಾಷ್ಟ್ರೀಯ ಪ್ರಶಸ್ತಿ–2025 ನೀಡಿ ಗೌರವಿಸಿದೆ.

ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಆರ್ಯಭಟ ಸಾಂಸ್ಕೃತಿಕ ಸಂಸ್ಥೆಯ 50ನೇ ವಾರ್ಷಿಕ ಆರ್ಯಭಟ ಸುವರ್ಣ ಸಂಭ್ರಮ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಆಡಳಿತ ಕ್ಷೇತ್ರ (ಇಂಜಿನಿಯರಿಂಗ್)ದಲ್ಲಿನ ಸೇವೆಯನ್ನು ಪರಿಗಣಿಸಿ ಜಿ.ಶೀಲಾ ಅವರಿಗೆ ಆರ್ಯಭಟ ಅಂತರ ರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಕರ್ನಾಟಕ ಕಾನೂನು ಆಯೋಗದ ಅಧ್ಯಕ್ಷರಾದ ನ್ಯಾಯಮೂರ್ತಿ ಡಾ.ಅಶೋಕ ಬಿ.ಹಿಂಚಿಗೇರಿ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ನಾಡೋಜ ಡಾ.ಮಹೇಶ್ ಜೋಶಿ, ಚಿತ್ರ ನಿರ್ದೇಶಕ ಎಸ್.ವಿ.ರಾಜೇಂದ್ರ ಸಿಂಗ್ ಬಾಬು, ಆರ್ಯಭಟ ಸಾಂಸ್ಕೃತಿಕ ಸಂಸ್ಥೆ ಸಂಸ್ಥಾಪಕ ಅಧ್ಯಕ್ಷ ಡಾ.ಹೆಚ್.ಎಲ್.ಎನ್.ರಾವ್ ಇನ್ನಿತರರಿದ್ದರು.

ಬಿಳಿಗಿರಿರಂಗನಬೆಟ್ಟದಲ್ಲಿ ಜೆಎಸ್‌ಎಸ್ ಜೀವನೋತ್ಸಾಹ ಶಿಬಿರ

ಯಾರು ಹೊಂದಾಣಿಕೆ ಮಾಡಿಕೊಳ್ಳುತ್ತಾರೋ ಅವರು ಜೀವನದಲ್ಲಿ ಸಂತೋಷವಾಗಿರುತ್ತಾರೆ...

ಚಿತ್ರ ನಟರೂ ಆದ ಮಾಜಿ ಶಾಸಕ ಮುಖ್ಯಮಂತ್ರಿ ಚಂದ್ರು ಅಭಿಮತ

ಮೈಸೂರು, ಮೇ 25–ಭಾರತ ಸುಂದರವಾದ ದೇಶ. ಇಲ್ಲಿ ಬದುಕಬೇಕಾದರೆ ಹೊಂದಾಣಿಕೆ ಅನಿವಾರ್ಯ. ಕೌಟುಂಬಿಕ ಹೊಂದಾಣಿಕೆ ಮತ್ತು ಸಾರ್ವಜನಿಕ ಹೊಂದಾಣಿಕೆ ಬಹಳ ಮುಖ್ಯ. ಯಾರು ಜೀವನದಲ್ಲಿ ಹೊಂದಾಣಿಕೆಯನ್ನು ಮಾಡಿಕೊಳ್ಳುತ್ತಾರೋ ಅವರು ಸಂತೋಷವಾಗಿರುತ್ತಾರೆ. ಇಂದು ದೇಹಕ್ಕೆ ಬರುವ ರೋಗಗಳೊಂದಿಗೂ ಹೊಂದಾಣಿಕೆ ಮಾಡಿಕೊಂಡು ಜೀವನ ಸಾಗಿಸಬೇಕು. ಜೀವನ ಉತ್ಸಾಹದಿಂದ ಕೂಡಿರಬೇಕಾದರೆ ಹೊಂದಾಣಿಕೆ ಅತಿಮುಖ್ಯ ಎಂದು ಚಿತ್ರನಟ, ಮಾಜಿ ಶಾಸಕರೂ ಆದ ಮುಖ್ಯಮಂತ್ರಿ ಚಂದ್ರು ಹೇಳಿದರು.

ಬಿಳಿಗಿರಿರಂಗನ ಬೆಟ್ಟದಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ಸಂಯುಕ್ತಾಶ್ರಯದಲ್ಲಿ ಸಾರ್ವಜನಿಕರಿಗಾಗಿ ಆಯೋಜಿಸಿರುವ ಜೀವನೋತ್ಸಾಹ ಶಿಬಿರದಲ್ಲಿ ಮಾತನಾಡಿದರು.



ಬಿಳಿಗಿರಿರಂಗನ ಬೆಟ್ಟದಲ್ಲಿ ಆಯೋಜಿಸಿದ್ದ ಜೀವನೋತ್ಸಾಹ ಶಿಬಿರವನ್ನು ಚಿತ್ರನಟ, ಮಾಜಿ ಶಾಸಕ ಮುಖ್ಯಮಂತ್ರಿ ಚಂದ್ರು ಉದ್ಘಾಟಿಸಿದರು.

ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಶಿಬಿರ ಉದ್ಘಾಟಿಸಿ ಮಾತನಾಡಿ, ಬದುಕಿನ ಉತ್ಸಾಹವನ್ನು ಹೆಚ್ಚಿಸುವ ಶಿಬಿರ ಇದಾಗಿದೆ. ಜೀವನದಲ್ಲಿ ಬರುವ ಸಮಸ್ಯೆಗಳನ್ನು ಛಲದಿಂದ ಎದುರಿಸಬೇಕು. ಎಲ್ಲಾ ಕಷ್ಟ–ನಷ್ಟ ಮತ್ತು ಸಮಸ್ಯೆಗಳಿಗೆ ಗೂಗಲ್‌ನಲ್ಲಿ ಉತ್ತರ ಲಭಿಸುವುದಿಲ್ಲ. ಹಳ್ಳಿಯ ಆಹಾರ ಪದ್ಧತಿಯು ಆರೋಗ್ಯಕರವಾಗಿರುತ್ತದೆ. ಇತ್ತೀಚಿನ ದಿನಮಾನಗಳಲ್ಲಿ ವೃದ್ಧಾಶ್ರಮಗಳ ಸಂಖ್ಯೆ ಹೆಚ್ಚಾಗುತ್ತಿರುವುದು ಖೇದಕರ ಸಂಗತಿ. ಹಿರಿಯರನ್ನು, ತಂದೆ–ತಾಯಿಗಳನ್ನು ಶ್ರದ್ಧಾಭಕ್ತಿ ಮತ್ತು ಗೌರವಗಳಿಂದ ಕಾಣಬೇಕು ಎಂದು ಹೇಳಿದರು.

ಚಾಮರಾಜನಗರ ಜಿಲ್ಲಾ ಪೊಲೀಸ್ ಅಧೀಕ್ಷಕಿ ಡಾ.ಬಿ.ಟಿ.ಕವಿತಾ, ಭಗವಂತನು ನೀಡಿದ ಈ ಜೀವನ ಸುಂದರವಾಗಿದೆ. ಇಂತಹ ಜೀವನವನ್ನು ಇನ್ನಷ್ಟು ಸುಂದರವಾಗಿಸಿಕೊಳ್ಳಲು ಇಂತಹ ಶಿಬಿರಗಳ ಅವಶ್ಯಕತೆಯಿದೆ. ಜೀವನವನ್ನು ನಮಗೋಸ್ಕರವೇ ಪ್ರೀತಿಸಬೇಕು. ನಿಸ್ವಾರ್ಥ ಜೀವನ ಸಾಗಿಸಬೇಕು. ಸಮಾಜ ಗುರುತಿಸುವಂತೆ ಮತ್ತು ಗೌರವಿಸುವಂತೆ ಬದುಕಬೇಕು. ಜೀವನದಲ್ಲಿ ಸರಳತೆ ಅತಿಮುಖ್ಯ. ನಿಸರ್ಗದ ಸಂಘದಿಂದ ಮನಸ್ಸು ಶಾಂತವಾಗುತ್ತದೆ ಎಂದು ತಿಳಿಸಿದರು.

ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯ ಡಾ.ಬಿ.ಪ್ರಭುದೇವ್, ಶ್ರೀಗಳರ ಆಶೀರ್ವಾದದಿಂದ ನಾನು ಉನ್ನತ ಮಟ್ಟಕ್ಕೆ ಬೆಳೆದು, ಉತ್ತಮವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗಿದೆ. ಸುತ್ತೂರು ಶ್ರೀಮಠ ನಡೆಸುವ ಯಾವುದೇ ಕಾರ್ಯಕ್ರಮಗಳು ಬಹಳ ಅಚ್ಚುಕಟ್ಟಾಗಿರುತ್ತವೆ. ಇಂತಹ ಸುಂದರ ಪರಿಸರದಲ್ಲಿ ಜೀವನಕ್ಕೆ ಬೇಕಾದ ಉತ್ತಮ ಅಂಶಗಳ ಕುರಿತು ಉಪನ್ಯಾಸಗಳನ್ನು ಏರ್ಪಡಿಸಿದ್ದಾರೆ. ನೀವೆಲ್ಲರೂ ಈ ಶಿಬಿರದಿಂದ ಉಪಯೋಗ ಪಡೆದು ಉತ್ಸಾಹದಿಂದ ಜೀವನ ಸಾಗಿಸಬೇಕು ಎಂದರು.

ಜೆಎಸ್‌ಎಸ್ ಕಾನೂನು ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ ಕೆ.ಎಸ್.ಸುರೇಶ್, ಭಾರತೀಯ ಪ್ರಜೆಯಾದವನು ಈ ನೆಲದ ಕಾನೂನನ್ನು ಅರಿತಿರಬೇಕು. ಭಾರತ ಜಗತ್ತಿನಲ್ಲೇ ಅತ್ಯಂತ ವೈವಿಧ್ಯಮಯವಾದ ದೇಶ. ವೈವಿಧ್ಯತೆಯಿದ್ದರೂ ಭಾರತೀಯತೆ ಎಂಬುದು ಎಲ್ಲರನ್ನು ಒಂದುಗೂಡಿಸುತ್ತದೆ. ಭಾರತದ ಕಾನೂನಿನ ಮುಂದೆ ಎಲ್ಲರೂ ಸಮಾನರು. ಕಾನೂನು ದೇಶದ ಏಕತೆಗೆ ಬುನಾದಿಯಾಗಿದೆ. ಭಾರತೀಯ ಕಾನೂನು ಜಗತ್ತಿನಲ್ಲೇ ಅತ್ಯಂತ ಶ್ರೇಷ್ಠ ಕಾನೂನಾಗಿದೆ ಎಂದು ಹೇಳಿದರು.

ಬಾಲಭವನದ ಅಧ್ಯಕ್ಷ ಬಿ.ಆರ್.ನಾಯ್ಡು, ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮದ ಅಧ್ಯಕ್ಷ ನಟರಾಜ್ ಜಾನಕಿರಾಮ್ ಮತ್ತು ಮುಖ್ಯಮಂತ್ರಿಗಳ ಮಾಧ್ಯಮ ಸಂಯೋಜಕ ಗಿರೀಶ್ ಕೋಟೆ ಇತರರು ಉಪಸ್ಥಿತರಿದ್ದರು.

ಜೂ.8ರಂದು ರಾಜ್ಯ ಮಟ್ಟದ ಈಜು ಸ್ಪರ್ಧೆ

ಮೈಸೂರು,ಮೇ 25(ಎಂಟಿವೈ)–ಇನ್ನರ್ ವೀಲ್ ಕ್ಲಬ್ ಆಫ್ ಮೈಸೂರು ಸೆಂಟ್ರಲ್ ಹಾಗೂ ಎಂಎಎಸ್‌ಪಿ ಅಕ್ವಾಟಿಕ್ ಕ್ಲಬ್ ಸಹಯೋಗದಲ್ಲಿ ಜೂ.8ರಂದು ಮೈಸೂರಲ್ಲಿ ರಾಜ್ಯಮಟ್ಟದ ನಾನ್ ಮೆಡಲಿಸ್ಟ್ ಈಜು ಸ್ಪರ್ಧೆ–2025 ಆಯೋಜಿಸಿದೆ.

ಮೈಸೂರು ವಿಶ್ವವಿದ್ಯಾನಿಲಯದ ಈಜುಕೊಳದಲ್ಲಿ ಅಂದು ಬೆಳಗ್ಗಿನಿಂದ ಸಂಜೆವರೆಗೂ ವಯೋಮಿತಿಗೆ ಅನುಗುಣವಾಗಿ 8 ಗುಂಪಿನಲ್ಲಿ ಈಜು ಸ್ಪರ್ಧೆ ನಡೆಯಲಿದೆ. 50 ಮೀಟರ್‌ನಿಂದ 200 ಮೀಟರ್ ಉದ್ದದ ವಿವಿಧ ಶೈಲಿಯ ಈಜು ಸ್ಪರ್ಧೆ ಆಯೋಜಿಸಲಾಗಿದ್ದು, ವಿವಿಧ ವಯೋಮಾನದ ಬಾಲಕ, ಬಾಲಕಿಯರು, ಪುರುಷ, ಮಹಿಳಾ ಸ್ಪರ್ಧಿಗಳು ಈಜು ಸ್ಪರ್ಧೆಯಲ್ಲಿ ಭಾಗವಹಿಸಬಹುದಾಗಿದೆ. ಈಜು ಸ್ಪರ್ಧೆಯಲ್ಲಿ ಭಾಗವಹಿಸುವವರು ಜೂ.2ರೊಳಗೆ ನೋಂದಣಿ ಮಾಡಿಕೊಳ್ಳಲು ಅವಕಾಶ ನೀಡಲಾಗಿದೆ. ಸ್ಥಳದಲ್ಲಿ ಹೆಸರು ನೋಂದಣಿ ಮಾಡಿಕೊಳ್ಳಲು ಅವಕಾಶವಿಲ್ಲ. ನುರಿತ ಈಜು ತಜ್ಞರು, ಈಜು ತರಬೇತಿದಾರರು ಈ ಪಂದ್ಯಾವಳಿಯನ್ನು ಸ್ಪರ್ಧೆ ನಡೆಸಲಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಮೊ. ಸಂಖ್ಯೆ 95911 87357, 9900110147, 9845073464 ಸಂಪರ್ಕಿಸುವಂತೆ ಇನ್ನರ್ ವೀಲ್ ಕ್ಲಬ್ ಆಫ್ ಮೈಸೂರು ಸೆಂಟ್ರಲ್ ಸಂಸ್ಥೆಯ ಕವಿತಾ ವಿನೋದ್ ಕೋರಿದ್ದಾರೆ.

ಶಿಕ್ಷಣದೊಂದಿಗೆ ನಿತ್ಯ ಗಾಯತ್ರಿ ಮಂತ್ರ ಪಠಿಸಿ



ಹೊಯ್ಸಳ ಕರ್ನಾಟಕ ಸಂಘದ ಆವರಣದಲ್ಲಿ ನಡೆದ ಸಾಮೂಹಿಕ ಉಪನಯನ

ಮೈಸೂರು, ಮೇ 25– ಶ್ರೀ ಚಿತ್ಕಲ ಟ್ರಸ್ಟ್ ಹಾಗೂ ಹೊಯ್ಸಳ ಕರ್ನಾಟಕ ಸಂಘದ ಸಹಯೋಗದೊಂದಿಗೆ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಹೊಯ್ಸಳ ಕರ್ನಾಟಕ ಸಂಘದ ಆವರಣದಲ್ಲಿ ಸಾಮೂಹಿಕ ಉಪನಯನ ಆಯೋಜಿಸಲಾಗಿತ್ತು. 17 ನೂತನ ವಟುಗಳು ಉಪನಯನದಲ್ಲಿ ಯಜ್ಞೋಪವಿತಧಾರಣೆ ಮಾಡಿದರು.

ಈ ಸಂದರ್ಭದಲ್ಲಿ ವಟುಗಳಿಗೆ ಆಶೀರ್ವದಿಸಿ ಮಾತನಾಡಿದ ಮಾಜಿ ಮುಡಾ ಅಧ್ಯಕ್ಷ ಎಚ್.ವಿ.ರಾಜೀವ್, ಉಪನೀತ ವಟುಗಳು ಪ್ರತಿ ದಿನವೂ ಸಂಧ್ಯಾವಂದನೆ ಮಾಡಬೇಕು. ಗಾಯತ್ರಿ ಮಂತ್ರ ಉಪದೇಶ ಪಡೆದಿರುವ ನೀವು ಶಿಕ್ಷಣದೊಂದಿಗೆ ನಮ್ಮ ಸಂಸ್ಕಾರವಾದ ಗಾಯತ್ರಿ ಮಂತ್ರ ಪಠಣ ಕಡ್ಡಾಯವಾಗಿ ಮಾಡಬೇಕು. ಗುರು ಹಿರಿಯರಿಗೆ ಗೌರವ ನೀಡುವುದನ್ನು ಮರೆಯದೆ, ನಮ್ಮ ಆಚಾರ, ವಿಚಾರ ಮರೆಯಬಾರದು ಎಂದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಸಂಘಟನಾ ಕಾರ್ಯದರ್ಶಿ ಎಸ್.ರಂಗನಾಥ, ಚಿತ್ಕಲ ಟ್ರಸ್ಟ್ ಅಧ್ಯಕ್ಷ ಗುರು ರಮೇಶ್, ಕಾರ್ಯದರ್ಶಿ ಪ್ರಭಾಕರ್, ನಿರ್ದೇಶಕರಾದ ಕೇಶವ ಚಂದ್ರ, ರವಿಶಂಕರ್, ಸುಬ್ರಹ್ಮಣ್ಯ, ಗಣೇಶ್ ಉಳ್ಳೂರ್, ಡಾ. ಕಾರ್ತಿಕ್ ಪಂಡಿತ್, ಹೊಯ್ಸಳ ಕರ್ನಾಟಕ ಸಂಘದ ನಿರ್ದೇಶಕರಾದ ಎಂ.ಎಸ್.ಪ್ರಶಾಂತ್, ಆದರ್ಶ ಸೇವಾ ಸಂಘದ ಅಧ್ಯಕ್ಷ ಜಿ.ಆರ್.ನಾಗರಾಜ್, ವಿಪ್ರ ಮುಖಂಡರಾದ ಪರಾಶರಣ್ ಮತ್ತಿತರರು ಉಪಸ್ಥಿತರಿದ್ದರು.

ಆಪರೇಷನ್ ಸಿಂಧೂರ್; ವಿಶ್ವವೇ ಭಾರತ ರಕ್ಷಣಾ ಕ್ಷೇತ್ರದತ್ತ ನೋಡುತ್ತಿದೆ

ಐಎಎಫ್‌ನ ನಿವೃತ್ತ ಗ್ರೂಪ್ ಕ್ಯಾಪ್ಟನ್ ಡಾ.ವಿನಯ್ ವಿಠಲ್ ಅಭಿಮತ

ಮೈಸೂರು,ಮೇ 25(ಎಸ್‌ಪಿಎನ್)–ಪಾಕಿಸ್ತಾನ ಉಗ್ರರ ವಿರುದ್ಧ ಭಾರತೀಯ ಸೇನೆ ನಡೆಸಿದ 'ಆಪರೇಷನ್ ಸಿಂಧೂರ್' ಕಾರ್ಯಾಚರಣೆಯಿಂದ ವಿಶ್ವವೇ ಭಾರತದ ರಕ್ಷಣಾ ಕ್ಷೇತ್ರದತ್ತ ನೋಡುವಂತಾಗಿದೆ ಎಂದು ಐಎಎಫ್‌ನ ನಿವೃತ್ತ ಗ್ರೂಪ್ ಕ್ಯಾಪ್ಟನ್ ಡಾ.ವಿನಯ್ ವಿಠಲ್ ಅಭಿಪ್ರಾಯಪಟ್ಟರು.

ಮೈಸೂರಿನ ಇಂಜಿನಿಯರ್ಸ್ ಸಂಸ್ಥೆ ಸಭಾಂಗಣದಲ್ಲಿ ದಿ ಇನ್ಸಿಟಿಟ್ಯೂಟ್ ಆಫ್ ಇಂಜಿನಿಯರ್ಸ್ ಮೈಸೂರು ಘಟಕದಿಂದ ಏರ್ಪಡಿಸಿದ್ದ 'ಆಪರೇಷನ್ ಸಿಂಧೂರ್ ಕಾರ್ಯಾಚರಣೆ; ಒಂದು ಅವಲೋಕನ' ವಿಷಯ ಕುರಿತು ಮಾತನಾಡಿದರು.



'ಆಪರೇಷನ್ ಸಿಂಧೂರ್ ಕಾರ್ಯಾಚರಣೆ; ಒಂದು ಅವಲೋಕನ' ವಿಷಯ ಕುರಿತು ಐಎಎಫ್‌ನ ನಿವೃತ್ತ ಗ್ರೂಪ್ ಕ್ಯಾಪ್ಟನ್ ಡಾ.ವಿನಯ್ ವಿಠಲ್ ಮಾತನಾಡಿದರು.

ಜಮ್ಮು–ಕಾಶ್ಮೀರದ ಪಹಲ್ಗಾಮ್ ಹತ್ಯಾಕಾಂಡದ ನಂತರ ಭಾರತೀಯ ಸೇನೆಯು ಪಾಕಿಸ್ತಾನದಲ್ಲಿನ 9 ಉಗ್ರರ ಕ್ಯಾಂಪ್‌ಗಳ ವಿರುದ್ಧ ಕ್ಷಿಪಣಿ ಮೂಲಕ ನಡೆಸಿದ ನಿರ್ದಿಷ್ಟ ಕಾರ್ಯಾಚರಣೆಯು ಯಶಸ್ವಿಯಾಗಿದ್ದು, ಇದರಿಂದ ಇಡೀ ಜಗತ್ತು ವಿಸ್ಮಯಗೊಂಡಿದೆ. ಈ ಕಾರ್ಯಾಚರಣೆಯಲ್ಲಿ ಬಳಸಿದ ಕ್ಷಿಪಣಿ ವ್ಯವಸ್ಥೆಗಳ ಬಗ್ಗೆ ಬೇರೆ ದೇಶಗಳು ಮತ್ತಷ್ಟು ಅವಲೋಕನ ಅಗತ್ಯ ಎಂಬ ನಿಲುವಿಗೆ ಬಂದಿದೆ. ಎಲ್ಲಾ ಕ್ಷೇತ್ರದ ಒಗ್ಗಟ್ಟು ಪಾಕಿಸ್ತಾನದಲ್ಲಿನ ಉಗ್ರರ ತಾಣಗಳ ಮೇಲೆ ನಿರ್ದಿಷ್ಟ ದಾಳಿ ಮಾಡಲು ಸಾಧ್ಯವಾಗಿದೆ ಎಂದರು.

ಭಾರತೀಯ ಸೈನ್ಯದ ಕಾರ್ಯ ವೈಖರಿ 2014ರ ನಂತರ ಸಂಪೂರ್ಣ ಬದಲಾಗಿದೆ. ವಾಯುಸೇನೆಗೆ ಅತ್ಯಾಧುನಿಕ ರಫೇಲ್ ಯುದ್ಧ ವಿಮಾನಗಳ ಜೋಡಣೆ, ಹಲವು ದೇಶಿ ಕ್ಷಿಪಣಿಗಳ ಪ್ರಯೋಗ, ಯೋಧರಿಗೆ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ನೀಡಿದೆ. ಇದು ಸೇನೆಯಲ್ಲಿ ಅಮೂಲಾಗ್ರ ಬದಲಾವಣೆಗೆ ಸಾಕ್ಷಿ. ಅಂತೆಯೇ 2014ರ ನಂತರ ರಕ್ಷಣಾ ಕ್ಷೇತ್ರದಲ್ಲಿ ಭ್ರಷ್ಟಾಚಾರ ಮುಕ್ತ ಆಡಳಿತಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದರಿಂದ ಇಂದು ನಮ್ಮ ಸೇನೆ ಬಲಿಷ್ಠ ರಾಷ್ಟ್ರಗಳ ಸಾಲಿಗೆ ಸೇರಿದೆ ಎಂದರು.

ಸೇನಾ ಕಾರ್ಯಾಚರಣೆ ಸಂದರ್ಭದಲ್ಲಿ ದೇಶದೊಳಗೆ ಕೇಂದ್ರ ಸರ್ಕಾರ ತೆಗೆದುಕೊಂಡ ರಾಜಕೀಯ ನಿಲುವು, ಸಮುದಾಯದಲ್ಲಿ ದೇಶದ ರಕ್ಷಣೆ ಬಗ್ಗೆ ಮೂಡಿದ ರಾಷ್ಟ್ರೀಯ ಭಾವನೆಗಳು, ಭಾರತೀಯ ಸೇನೆಗೆ ಆತ್ಮವಿಶ್ವಾಸ ಹೆಚ್ಚಲು ಕಾರಣವಾಯಿತು. ಭಾರತೀಯ ರಕ್ಷಣಾ ಇತಿಹಾಸದಲ್ಲಿ 'ಆಪರೇಷನ್ ಸಿಂಧೂರ್' ಒಂದು ಐತಿಹಾಸಿಕ ಮೈಲಿಗಲ್ಲು. ಸರ್ಕಾರದ ಗುರಿಯನ್ನು ಸೇನೆ ದೋಷರಹಿತವಾಗಿ ಕಾರ್ಯಗತಗೊಳಿಸಿದ ವಿಧಾನ ವಿಶ್ವದ ಬೇರೆಬೇರೆ ರಾಷ್ಟ್ರಗಳು ಗಮನ ಸೆಳೆಯಲು ಕಾರಣವಾಗಿದೆ ಎಂದರು.

ಭಾರತ, ಉಗ್ರರ ವಿರುದ್ಧ ಕೈಗೊಂಡ ಸೇನಾ ಕಾರ್ಯಾಚರಣೆ ಜಾಗತಿಕ ಮಟ್ಟದಲ್ಲಿ ಚರ್ಚೆಯಾಗುತ್ತಿದೆ. ಅಲ್ಲದೆ, ದೇಶಿಯವಾಗಿ ಉತ್ಪಾದಿಸಿದ ರಕ್ಷಣಾ ಸಾಮಗ್ರಿಗಳು ನಿಖರ ಗುರಿ ಮುಟ್ಟಿವೆ. ಇದರ ಹಿಂದೆ ನಮ್ಮ ಸೈನ್ಯದ ನೈಪುಣ್ಯತೆ ಎದ್ದು ಕಾಣುತ್ತಿದೆ. ಭಾರತ ಹಿಂದೆ ನಡೆಸಿದ ಯುದ್ಧಗಳಿಗೆ ಹೋಲಿಸಿದರೆ, ಈ ಬಾರಿ ಹೊಸಹೊಸ ಬೆಳವಣಿಗೆಗಳು ನಡೆದಿವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಹಿಂದೆ ಭಾರತ ಮತ್ತು ಪಾಕಿಸ್ತಾನ ನಡುವಿನ ಯಾವುದೇ ಗಂಭೀರ ಪರಿಸ್ಥಿತಿಯಲ್ಲೂ ಸಿಂಧೂ ನದಿ ನೀರು ಹಂಚಿಕೆ ಒಪ್ಪಂದದ ಮೇಲೆ ಭಾರತ ಯಾವುದೇ ನಿರ್ಧಾರ ತೆಗೆದುಕೊಂಡಿರಲಿಲ್ಲ. ಈ ಬಾರಿ ಒಪ್ಪಂದ ಮುರಿದು ಪಾಕಿಸ್ತಾನಕ್ಕೆ ಕಠಿಣ ಎಚ್ಚರಿಕೆ ನೀಡಿದೆ. ಈ ಹಿಂದೆ ನಮ್ಮ ಮೇಲೆ ನಡೆಯುತ್ತಿದ್ದ ಉಗ್ರರ ದಾಳಿಗಳಿಗೆ ಉತ್ತರ ಖಂಡನೆಗೆ ಸೀಮಿತವಾಗುತ್ತಿದ್ದವು. ಈ ಹಿಂದೆ ಉರಿ, ಬಾಲಾಕೋಟ್ ಹಾಗೂ ಪುಲ್ವಾಮ ದಾಳಿಗಳ ನಂತರ ಉಗ್ರರ ವಿರುದ್ಧ ತೆಗೆದುಕೊಂಡ ಸೇನಾ ಕಾರ್ಯಾಚರಣೆಗಿಂತ 'ಆಪರೇಷನ್ ಸಿಂಧೂರ್' ಹಲವು ಹೊಸತನಕ್ಕೆ ನಾಂದಿ ಹಾಡಿತು ಎಂದರಲ್ಲದೆ, ಇನ್ನು ಮುಂದೆ ಭಾರತದಲ್ಲಿ ಪಾಕಿಸ್ತಾನ ನಡೆಸುವ ಉಗ್ರರ ಕೃತ್ಯ ಆಕ್ಟ್ ಆಫ್ ವಾರ್‌ಗೆ ಸಮ ಎಂಬ ನಿಲುವಿಗೆ ಭಾರತ ಬಂದಿರುವುದು ಸ್ವಾಗತಾರ್ಹ ಎಂದರು.

ಈ ವೇಳೆ 'ಆಪರೇಷನ್ ಸಿಂಧೂರ್ ಕಾರ್ಯಾಚರಣೆ; ಒಂದು ಅವಲೋಕನ' ವಿಷಯ ಕುರಿತು ಸಂವಾದ ನಡೆಯಿತು. ಈ ವೇಳೆ ದಿ ಇನ್ಸಿಟಿಟ್ಯೂಟ್ ಆಫ್ ಇಂಜಿನಿಯರ್ಸ್ (ಇಂಡಿಯಾ) ಮೈಸೂರು ಘಟಕದ ಅಧ್ಯಕ್ಷ ಡಾ.ಆರ್.ದೀಪು, ಕಾರ್ಯಕ್ರಮ ಸಂಚಾಲಕ ಬಿ.ವಿ.ರವೀಂದ್ರನಾಥ್, ಬಿ.ಎಸ್.ಪ್ರಭಾಕರ, ಕಾರ್ಯದರ್ಶಿ ಡಾ.ಎಸ್.ಎ.ಮೋಹನಕೃಷ್ಣ ಇದ್ದರು.

ದೇಶ – ವಿದೇಶ


ಪಾಕ್ ಸರ್ಕಾರದೊಂದಿಗೆ ಮಾತುಕತೆ ನಿಷ್ಪ್ರಯೋಜಕ, ಸೇನೆ ಜತೆ ಮಾತನಾಡ್ತೀನಿ

ಇಸ್ಲಾಮಾಬಾದ್: ಭಾರತದ ಆಪರೇಷನ್ ಸಿಂಧೂರ್ ನಂತರ ಪಾಕಿಸ್ತಾನವನ್ನು ಭಯೋತ್ಪಾದಕರು ನಿಗ್ರಹಿಸುತ್ತಿರುವ ರಹಸ್ಯವು ಇಡೀ ಜಗತ್ತಿಗೆ ಬಹಿರಂಗವಾಗಿದೆ ಮತ್ತು ಶೆಹಬಾಜ್ ಷರೀಫ್ ಸರ್ಕಾರವು ಸೇನೆಯ ಮಡಿಲಲ್ಲಿ ಆಟವಾಡುತ್ತಿದೆ ಎಂಬುದು ಸ್ಪಷ್ಟವಾಗಿದೆ. ಈಗ ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಕೂಡ ಇದನ್ನು ಒಪ್ಪಿಕೊಂಡಿದ್ದಾರೆ. ಜೈಲಿನಲ್ಲಿರುವ ಇಮ್ರಾನ್ ಖಾನ್ ಸರ್ಕಾರಕ್ಕೆ ಕನ್ನಡಿಯನ್ನು ತೋರಿಸಿ, ಪಿಎಂಎಲ್–ಎನ್‌ನ ಕೈಗೊಂಬೆ ಸರ್ಕಾರದೊಂದಿಗೆ ಮಾತುಕತೆ ನಡೆಸುವುದು ನಿಷ್ಪ್ರಯೋಜಕವಾದ್ದರಿಂದ ಪಾಕಿಸ್ತಾನ ಸೇನೆಯೊಂದಿಗೆ ಮಾತುಕತೆ ನಡೆಸಲು ಬಯಸುತ್ತೇನೆ ಎಂದರು. ಪಾಕಿಸ್ತಾನ್ ತೆಹ್ರೀಕ್–ಇ–ಇನ್ಸಾಫ್ (ಪಿಟಿಐ) ಸಂಸ್ಥಾಪಕ ಇಮ್ರಾನ್ ಖಾನ್ ಆಗಸ್ಟ್ 2023 ರಿಂದ ಜೈಲಿನಲ್ಲಿದ್ದಾರೆ. ಇಮ್ರಾನ್ ಖಾನ್ ಎಕ್ಸ್‌ನಲ್ಲಿ ಪೋಸ್ಟ್ ಮಾಡಿ, ಕೈಗೊಂಬೆ ಪಾಕಿಸ್ತಾನ್ ಮುಸ್ಲಿಂ ಲೀಗ್–ನವಾಜ್ (ಪಿಎಂಎಲ್–ಎನ್) ಸರ್ಕಾರದೊಂದಿಗೆ ಯಾವುದೇ ರೀತಿಯ ಮಾತುಕತೆ ನಡೆಸುವುದು ನಿಷ್ಪ್ರಯೋಜಕ ಎಂದು ಬರೆದಿದ್ದಾರೆ.



ಬಿಜೆಪಿ ನಾಯಕನ ಅಶ್ಲೀಲ ವೀಡಿಯೋ ವೈರಲ್, ನರ್ತಕಿ ಜೊತೆ ಅಸಭ್ಯ ವರ್ತನೆ

ಭೋಪಾಲ್: ಮಧ್ಯಪ್ರದೇಶದಲ್ಲಿ ಬಿಜೆಪಿ ನಾಯಕ ಮನೋಹರ್‌ಲಾಲ್ ಧಕಾಡ್ ಅವರ ಸೆಕ್ಸ್ ವೀಡಿಯೋ ವಿವಾದ ವ್ಯಾಪಕ ಸುದ್ದಿಗೆ ಗ್ರಾಸವಾಗಿರುವಂತೆಯೇ ಮತ್ತೋರ್ವ ಬಿಜೆಪಿ ನಾಯಕನ ಅಶ್ಲೀಲ ವೀಡಿಯೋ ಸುದ್ದಿಗೆ ಗ್ರಾಸವಾಗುತ್ತಿದೆ.



ಮಧ್ಯಪ್ರದೇಶ ಬಿಜೆಪಿ ಹಿರಿಯ ನಾಯಕ ಹಾಗೂ ಸಿವ್ನಿ ಮಾಲ್ವಾದ ನಾಯಕ ಕಮಲ್ ರಘುವಂಶಿ ಅವರ ಹಳೆಯ ಅಶ್ಲೀಲ ವೀಡಿಯೋ ವ್ಯಾಪಕ ವೈರಲ್ ಆಗುತ್ತಿದೆ. ಏ.29ರಂದು ನಡೆದ ವಿವಾಹ ಸಮಾರಂಭದಲ್ಲಿ ರಘುವಂಶಿ ಮಹಿಳಾ ನರ್ತಕಿಯೊಂದಿಗೆ ಆಕ್ಷೇಪಾರ್ಹ ವರ್ತನೆಯಲ್ಲಿ ತೊಡಗಿರುವುದನ್ನು ಈ ವಿಡಿಯೋದಲ್ಲಿ ದಾಖಲಾಗಿದೆ.

ಕಾರ್ಯಕ್ರಮದಲ್ಲಿ ಸ್ಥಳೀಯ ನಿವಾಸಿಗಳು, ಸ್ಥಳೀಯ ರಾಜಕಾರಣಿಗಳು ಸೇರಿದಂತೆ ದೊಡ್ಡ ಜನಸಮೂಹವೇ ಭಾಗವಹಿಸಿತ್ತು. ಅದೇ ಕಾರ್ಯಕ್ರಮದಲ್ಲಿ ಬಿಜೆಪಿ ಮಹಿಳಾ ನಾಯಕಿಯರೂ ಇದ್ದರು. ವೈರಲ್ ವೀಡಿಯೊದಲ್ಲಿ, ಕಮಲ್ ರಘುವಂಶಿ ಅವಳೊಂದಿಗೆ ಅನುಚಿತವಾಗಿ ವರ್ತಿಸಿ ಆಕೆಯನ್ನು ಚುಂಬಿಸಿ ಅಶ್ಲೀಲವಾಗಿ ವರ್ತಿಸಿದರು. ಈ ಘಟನೆಯನ್ನು ಕೆಲವರು ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡರು.

ಭಯೋತ್ಪಾದನೆ ವಿರುದ್ಧ ಭಾರತಕ್ಕೆ ಜರ್ಮನಿ ಬೆಂಬಲ

ಬರ್ಲಿನ್: ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಇಂದು ಬರ್ಲಿನ್‌ನಲ್ಲಿ ಜರ್ಮನ್ ವಿದೇಶಾಂಗ ಸಚಿವ ಜೋಹಾನ್ ವಾಡೆಫುಲ್ ಅವರೊಂದಿಗೆ ದ್ವಿಪಕ್ಷೀಯ ಚರ್ಚೆ ನಡೆಸಿದರು. ಜಮ್ಮು–ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯ ನಂತರ ಪಾಕಿಸ್ತಾನದ ಭಯೋತ್ಪಾದಕ ಮೂಲಸೌಕರ್ಯವನ್ನು ಗುರಿಯಾಗಿಸಿಕೊಂಡು ಭಾರತವು 'ಆಪರೇಷನ್ ಸಿಂಧೂರ್' ನಡೆಸಿದ ನಂತರ ಭಾರತವು ಅಂತಾರಾಷ್ಟ್ರೀಯ ಸಮುದಾಯವನ್ನು ತಲುಪಲು ಪ್ರಾರಂಭಿಸಿರುವ ಹಿನ್ನೆಲೆಯಲ್ಲಿ ಈ ಸಭೆ ನಡೆಸಲಾಗಿದೆ. ಆಪರೇಷನ್ ಸಿಂಧೂರ್ ಕುರಿತು ತಮ್ಮ ಹೇಳಿಕೆಯಲ್ಲಿ ಜರ್ಮನಿಯ ವಿದೇಶಾಂಗ ಸಚಿವರು, ಭಯೋತ್ಪಾದನೆ ವಿರುದ್ಧದ ಯಾವುದೇ ಹೋರಾಟವನ್ನು ಜರ್ಮನಿ ಬೆಂಬಲಿಸುತ್ತದೆ. ಜಗತ್ತಿನಲ್ಲಿ ಎಲ್ಲಿಯೂ ಭಯೋತ್ಪಾದನೆಗೆ ಎಂದಿಗೂ ಸ್ಥಾನವಿರುವುದಿಲ್ಲ. ಅದಕ್ಕಾಗಿಯೇ ಭಯೋತ್ಪಾದನೆ ವಿರುದ್ಧ ಹೋರಾಡುವ ಮತ್ತು ಹೋರಾಡಬೇಕಾದ ಪ್ರತಿಯೊಬ್ಬರನ್ನು ನಾವು ಬೆಂಬಲಿಸುತ್ತೇವೆ ಎಂದು ಹೇಳಿದ್ದಾರೆ.



ಬುಡಕಟ್ಟು ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿ, ಹತ್ಯೆ

ಖಾಂಡ್ವಾ: ಮಧ್ಯ ಪ್ರದೇಶದ ಖಾಂಡ್ವಾ ಜಿಲ್ಲೆಯಲ್ಲಿ ಇಬ್ಬರು ಪುರುಷರು, 45 ವರ್ಷದ ಬುಡಕಟ್ಟು ಮಹಿಳೆಯೊಬ್ಬರ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿ, ಹತ್ಯೆ ಮಾಡಿದ್ದಾರೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ. ಜಿಲ್ಲಾ ಕೇಂದ್ರದಿಂದ ಸುಮಾರು 90 ಕಿ.ಮೀ ದೂರದಲ್ಲಿರುವ ಖಲ್ವಾ ತಹಸಿಲ್‌ನಲ್ಲಿರುವ ರೋಶ್ನಿ ಪೊಲೀಸ್ ಹೊರಠಾಣೆ ವ್ಯಾಪ್ತಿಯಲ್ಲಿ ಶನಿವಾರ ಈ ದಾರುಣ ಘಟನೆ ನಡೆದಿದ್ದು, ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಪ್ರಾಥಮಿಕ ತನಿಖೆಯಲ್ಲಿ, ಮಹಿಳೆಯ ಮೇಲೆ ಅತ್ಯಾಚಾರ ಎಸಗಿ, ತೀವ್ರ ಹಲ್ಲೆ ನಡೆಸಲಾಗಿದ್ದು, ಅವರು ತೀವ್ರ ರಕ್ತಸ್ರಾವವಾಗಿ ಸಾವನ್ನಪ್ಪಿದ್ದಾರೆ ಎಂದು ಖಾಂಡ್ವಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ(ಎಎಸ್‌ಪಿ) ರಾಜೇಶ್ ರಘುವಂಶಿ ಹೇಳಿದ್ದಾರೆ. ಖಂಡ್ವಾ ಜಿಲ್ಲಾ ಆಸ್ಪತ್ರೆಯಲ್ಲಿ ವಿಧಿವಿಜ್ಞಾನ ತಜ್ಞರ ನಿಕಟ ನಿಗಾದಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಗುತ್ತಿದೆ. ವರದಿ ಬಂದ ನಂತರ ಹೆಚ್ಚಿನ ವಿವರ ಲಭ್ಯವಾಗಲಿದೆ ಎಂದು ಅವರು ತಿಳಿಸಿದ್ದಾರೆ. ಮೃತ ಮಹಿಳೆಗೆ ಇಬ್ಬರು ಮಕ್ಕಳಿದ್ದು, ಸಂತ್ರಸ್ತೆ ಹಾಗೂ ಆರೋಪಿಗಳು ಕುರ್ಕು ಬುಡಕಟ್ಟು ಸಮುದಾಯಕ್ಕೆ ಸೇರಿದವರು ಎಂದು ಅಧಿಕಾರಿ ತಿಳಿಸಿದ್ದಾರೆ.

ರಷ್ಯಾದಿಂದ ಭಾರೀ ವೈಮಾನಿಕ ದಾಳಿ; ಬೆಂಕಿಯಲ್ಲಿ ಬೆಂದ ಉಕ್ರೇನ್ ರಾಜಧಾನಿ

ಕೈವ್: ಉಕ್ರೇನ್ ರಾಜಧಾನಿ ಕೈವ್ ನಗರದ ಮೇಲೆ ರಷ್ಯಾದಿಂದ ಭಾರಿ ವೈಮಾನಿಕ ದಾಳಿ ನಡೆದಿದೆ. ರಷ್ಯಾ ತನ್ನ ಕ್ಷಿಪಣಿ ಮತ್ತು ಡ್ರೋನ್‌ಗಳನ್ನು ಬಳಸಿ ಕೈವ್ ನಗರದ ಮೇಲೆ ಏರ್‌ಸ್ಟ್ರೈಕ್ ನಡೆಸಿದೆ.



ಕೈವ್ ನಗರದ ಮೇಲೆ ರಷ್ಯಾ ನಡೆಸಿದ ವಾಯು ದಾಳಿಯಲ್ಲಿ ಕನಿಷ್ಠ 12 ಜನರು ಮೃತಪಟ್ಟಿದ್ದಾರೆ. ಪೂರ್ವ ಭಾಗದಲ್ಲಿ ರಷ್ಯಾ ಸೇನೆ ನಿಧಾನವಾಗಿ ಮುನ್ನುಗ್ಗುತ್ತಿದ್ದು, ಡೊನೆಟ್ಸ್ಕ ಪ್ರದೇಶದಲ್ಲಿ ಎರಡು ಹಳ್ಳಿಗಳನ್ನು ಹಾಗೂ ಸುಮಿ ಪ್ರದೇಶದಲ್ಲಿ ಒಂದು ಹಳ್ಳಿಯನ್ನು ವಶಪಡಿಸಿಕೊಂಡಿದೆ. ಉಕ್ರೇನ್‌ನ ವಾಯುಸೇನೆ ಪ್ರಕಾರ ರಷ್ಯಾ 298 ಡ್ರೋನ್ ಮತ್ತು 69 ಕ್ಷಿಪಣಿಗಳನ್ನು ಕೈವ್ ನಗರದ ಮೇಲೆ ಉಡಾಯಿಸಿದೆ.

ಈ ಪೈಕಿ 266 ಡ್ರೋನ್ ಮತ್ತು 45 ಕ್ಷಿಪಣಿಗಳನ್ನು ಉಕ್ರೇನ್ ವಾಯುಸೇಣೆ ಹೊಡೆದುರುಳಿದೆ. ಆದರೆ ಉಳಿದ ಕ್ಷಿಪಣಿ, ಡ್ರೋನ್‌ಗಳು ಕೈವ್ ನಗರದ ಖಾರ್ಕಿವ್, ಮೈಕೋಲೈವ್, ಟೆರ್ನೋಪಿಲ್ ಸೇರಿದಂತೆ ಹಲವು ಪ್ರದೇಶಗಳಲ್ಲಿ ಭಾರೀ ಹಾನಿಯನ್ನುಂಟು ಮಾಡಿದೆ. ರಷ್ಯಾದ ಈ ವಾಯುದಾಳಿಯಿಂದಾಗಿ ಕೈವ್ ನಗರದ ಅಕ್ಷರಶಃ ಬೆಂಕಿಯಲ್ಲಿ ಬೆಂದಿದೆ.

ನಿಸರ್ಗಧಾಮದಲ್ಲಿ ತಡೆಗೋಡೆ ನೆಲಸಮ : ಕ್ರಮಕ್ಕೆ ವರ್ತಕರ ಆಗ್ರಹ



ನಿಸರ್ಗಧಾಮದಲ್ಲಿ ನಿರ್ಮಿಸಿದ್ದ ತಡೆಗೋಡೆಯನ್ನು ನೆಲಸಮಗೊಳಿಸಿರುವುದು.

ಕುಶಾಲನಗರ, ಮೇ 25– ಜಿಲ್ಲೆಯ ಪ್ರಮುಖ ಪ್ರವಾಸಿ ತಾಣ ಕಾವೇರಿ ನಿಸರ್ಗಧಾಮದಲ್ಲಿ 2017 ರಲ್ಲಿ ರೂ 48 ಲಕ್ಷ ವೆಚ್ಚದಲ್ಲಿ ಮುಖ್ಯ ರಸ್ತೆಯಿಂದ ಕಾವೇರಿ ನದಿ ತಟದ ತನಕ ನಿರ್ಮಿಸಿದ್ದ ತಡೆಗೋಡೆಯ. ಸುಮಾರು 30 ಅಡಿಗಳಷ್ಟು ಅಕ್ರಮವಾಗಿ ನೆಲಸಮಗೊಳಿಸಿದ್ದು, ಅರಣ್ಯ ಇಲಾಖೆ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ಎನ್.ಟಿ.ಸಿ. ವರ್ತಕರು ಆರೋಪಿಸಿದ್ದಾರೆ.

ನಿಸರ್ಗಧಾಮ ಒಳಪ್ರವೇಶಿಸುವ ಮಾರ್ಗದ ವಾಹನ ನಿಲುಗಡೆ ಸ್ಥಳಕ್ಕೆ ಹೊಂದಿಕೊಂಡಂತೆ 190 ಮೀ ತಡೆಗೋಡೆ ನಿರ್ಮಿಸಲಾಗಿದೆ. ಅಕ್ಕಪಕ್ಕದ ಖಾಸಗಿ ಜಮೀನಿನ ಮಾಲೀಕರು ನಿಸರ್ಗಧಾಮಕ್ಕೆ ಹೋಗುವ ರಸ್ತೆಯನ್ನು ಅತಿಕ್ರಮಣ ಮಾಡದಂತೆ ಮುಂಜಾಗ್ರತಾ ಕ್ರಮವಾಗಿ ಇಲಾಖೆಯವರು ತಡೆಗೋಡೆ ನಿರ್ಮಿಸಿದ್ದಾರೆ. ಆದರೆ ತಡೆಗೋಡೆಯ ಒಂದು ಭಾಗವನ್ನು 30 ಅಡಿಗಳಷ್ಟು ಅಕ್ರಮವಾಗಿ ನೆಲಸಮಗೊಳಿಸಿ ಪಕ್ಕದ ಜಾಗದ ಮಾಲೀಕರು ತಮ್ಮ ಜಮೀನಿಗೆ ತೆರಳಲು ಮಾರ್ಗ ಸೃಷ್ಟಿಸಿ ಗೇಟ್ ಕೂಡ ಅಳವಡಿಸಿರುವುದು ಕಂಡುಬಂದಿದೆ.

ಈ ಬಗ್ಗೆ ಇಲಾಖಾ ಅಧಿಕಾರಿಗಳಿಗೆ ಮಾಹಿತಿ ನೀಡಿದರೂ ಕೂಡ ಕಂಡೂ ಕಾಣದಂತೆ ಮೌನ ವಹಿಸಿರುವುದು ಅನುಮಾನಕ್ಕೆ ಎಡೆಮಾಡಿದ್ದು ಈ ಬಗ್ಗೆ ಸೂಕ್ತ ತನಿಖೆಯಾಗಬೇಕಿದೆ ಎಂದು ವರ್ತಕರಾದ ಸಲೀಂ, ಲೋಕೇಶ್, ಶರಿಯಾರ್, ಕಬೀರ್, ನಿಯಾದ್, ಆಸಿಫ್ ಒತ್ತಾಯಿಸಿದ್ದಾರೆ. ಕಾಂಪೌಂಡ್ ಕೆಡವಿರುವ ಕುರಿತು ಜಿಲ್ಲಾಧಿಕಾರಿ, ಅರಣ್ಯ ಇಲಾಖೆ ಹಿರಿಯ ಅಧಿಕಾರಿ ಹಾಗೂ ಲೋಕಾಯುಕ್ತಕ್ಕೆ ದೂರು ಸಲ್ಲಿಸುವುದಾಗಿ ತಿಳಿಸಿದ್ದಾರೆ.

ಕುಶಾಲನಗರದಲ್ಲಿ ಮಳೆಗೆ ಜನಜೀವನ ಅಸ್ತವ್ಯಸ್ತ




ಕುಶಾಲನಗರ ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಭಾನುವಾರ ನಿರಂತರವಾಗಿ ಸುರಿದ ಮಳೆಯಿಂದ ಜನಜೀವನ ಅಸ್ತವ್ಯಸ್ತಗೊಂಡಿರುವುದು.

ಕುಶಾಲನಗರ, ಮೇ 25– ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಭಾನುವಾರ ನಿರಂತರವಾಗಿ ಸುರಿದ ಮಳೆಯಿಂದ ಜನಜೀವನ ಅಸ್ತವ್ಯಸ್ತಗೊಂಡಿತು.

ಚಳಿಗಾಳಿಯೊಂದಿಗೆ ಮಳೆ ಸುರಿಯುತ್ತಿದ್ದರಿಂದ ಜನರು ಮನೆಯಿಂದ ಹೊರಗೆ ಬರಲು ಸಾಧ್ಯವಾಗದ ಪರಿಸ್ಥಿತಿ ಉಂಟಾಯಿತು. ಮಳೆ ನೀರು ಚರಂಡಿಯಲ್ಲಿ ತುಂಬಿ ರಸ್ತೆ ಮೇಲೆ ಹರಿದ ಪರಿಣಾಮ ವಾಹನ ಸಂಚಾರಕ್ಕೆ ತೊಂದರೆ ಉಂಟಾಯಿತು. ಬೀದಿಬದಿ ವ್ಯಾಪಾರಿಗಳು ತಮ್ಮ ಅಂಗಡಿಗಳನ್ನು ಮುಚ್ಚಿ ಸುರಕ್ಷಿತ ಸ್ಥಳಗಳಲ್ಲಿ ಆಶ್ರಯ ಪಡೆದುಕೊಂಡರು.

ಕೂಡಿಗೆ ನಡುವಿನ ರಸ್ತೆಯಲ್ಲಿ ಕೂಡ್ಲೂರು ಮಾವಿನ ತೋಪು ಬಳಿಯ ರಸ್ತೆಯು ಭಾನುವಾರ ಬಿದ್ದ ಮಳೆ ಸಂದರ್ಭದಲ್ಲಿ ರಸ್ತೆಯ ಮೇಲೆ ನೀರು ಹರಿದು ಜಲಾವೃತಗೊಂಡ ಪರಿಣಾಮ ವಾಹನ ಸಂಚಾರಕ್ಕೆ ತೊಂದರೆಯಾಯಿತು. ರಸ್ತೆಯಲ್ಲಿ ತೀವ್ರ ಹೊಂಡಗಳಿದ್ದು, ವಾಹನ ಸವಾರರಿಗೆ ತೊಂದರೆಯಾಯಿತು.

ಈ ರಸ್ತೆಯ ಅಂಚಿನಲ್ಲಿ ಕುಡಿಯುವ ನೀರಿನ ಪೈಪ್ ಲೈನ್ ಅಳವಡಿಸುತ್ತಿದ್ದು, ರಸ್ತೆಯಂಚಿನಲ್ಲಿರುವ ಮಣ್ಣನ್ನು ತೆರವುಗೊಳಿಸದ ಕಾರಣ ರಸ್ತೆಯಲ್ಲಿ ನೀರು ನಿಂತಿರುವುದು ಭಾನುವಾರ ಕಂಡುಬಂತು. ರಸ್ತೆಯ ಮೇಲಿನ ನೀರು ಹೊರಗೆ ಸರಾಗವಾಗಿ ಹೋಗಲು ರಸ್ತೆಯಂಚಿ ನಲ್ಲಿ ಸೂಕ್ತ ಚರಂಡಿ ವ್ಯವಸ್ಥೆ ಇಲ್ಲದೆ ರಸ್ತೆಯಲ್ಲಿ ನೀರು ನಿಂತು ಸಣ್ಣ–ಸಣ್ಣ ಕೆರೆಗಳ ಮಾದರಿಯಲ್ಲಿ ಗೋಚರಿಸಿತು.

ಸಾಲ ಸೌಲಭ್ಯ ಸದುಪಯೋಗ ಪಡಿಸಿಕೊಳ್ಳಿ



ಮಾಯಮುಡಿಯಲ್ಲಿ ವಿವಿಧ ಉತ್ಪನ್ನಗಳ ಮಾರಾಟ ಮೇಳವನ್ನು ಗ್ರಾಪಂ ಅಧ್ಯಕ್ಷ ಆಪಟ್ಟೀರ ಎಸ್.ಟಾಟು ಮೊಣ್ಣಪ್ಪ ಉದ್ಘಾಟಿಸಿದರು.

ಮಡಿಕೇರಿ, (ಪಿಎಸ್)– ಸಮಾಜದಲ್ಲಿ ಮಹಿಳೆಯರು ಸ್ವಾವಲಂಬಿಗಳಾಗಿ ಬದುಕು ಸಾಗಿಸಬೇಕು ಎನ್ನುವ ಉದ್ದೇಶದಿಂದ ಸರ್ಕಾರ ಸಾಲ ಸೌಲಭ್ಯವನ್ನು ಒದಗಿಸುತ್ತಿದ್ದು, ಇದನ್ನು ಪ್ರತಿಯೊಬ್ಬರು ಸದುಪಯೋಗ ಪಡಿಸಿಕೊಂಡು ಪ್ರಗತಿ ಸಾಧಿಸುವಂತೆ ಮಾಯಮುಡಿ ಗ್ರಾ.ಪಂ ಅಧ್ಯಕ್ಷ ಆಪಟ್ಟೀರ ಎಸ್.ಟಾಟು ಮೊಣ್ಣಪ್ಪ ಕರೆ ನೀಡಿದ್ದಾರೆ.

ಮಾಯಮುಡಿಯಲ್ಲಿ ಮಹಿಳೆಯರೇ ತಯಾರಿಸಿದ ವಿವಿಧ ಉತ್ಪನ್ನಗಳ ಮಾರಾಟ ಮೇಳವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಹಿಳೆಯರು ಸ್ವಾವಲಂಬಿಗಳಾಗಿ ಜೀವನ ಸಾಗಿಸಲು ಸರ್ಕಾರದ ಸೌಲಭ್ಯಗಳನ್ನು ಪಡೆದುಕೊಂಡು ತಯಾರಿಸುವ ಉತ್ಪನ್ನಗಳಿಗೆ ಗ್ರಾ.ಪಂನಿಂದ ಮಾರುಕಟ್ಟೆ ಕಲ್ಪಿಸುವ ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದರು.

ತಾವು ತಯಾರಿಸಿದ ವಸ್ತುಗಳಿಗೆ ಸೂಕ್ತ ಬೆಲೆ ಸಿಗಬೇಕಾದರೆ ಗ್ರಾಮ, ತಾಲೂಕು, ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲೂ ಮಾರುಕಟ್ಟೆ ವ್ಯವಸ್ಥೆ ಲಭಿಸಬೇಕು. ಸ್ವಂತ ಉದ್ದಿಮೆ ಸ್ಥಾಪಿಸಲು ಸಾಲ ಸೌಲಭ್ಯ ನೀಡಲಾಗುತ್ತಿದೆ ಎಂದರು.

ಮಾಜಿ ಶಾಸಕ ಸಿ.ಎಸ್.ಅರುಣ್ ಮಾಚಯ್ಯ, ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಆಪಟ್ಟೀರ ಎ.ಬೋಪಣ್ಣ, ಸಂಜೀವಿನಿ ಒಕ್ಕೂಟದ ಅಧ್ಯಕ್ಷೆ ಪಿ.ಎ.ಮಲ್ಲಿಗೆ, ಕಾರ್ಯದರ್ಶಿ ಟಿ.ಪಾರ್ವತಿ, ಗ್ರಾಪಂ ಸದಸ್ಯೆ ಪೊನ್ನಿಮಾಡ ಸರಸ್ವತಿ, ತಾಪಂ ಇಓ ಅಪ್ಪಣ್ಣ, ಎನ್‌ಆರ್‌ಎಲ್‌ಎಂ ಜಿಲ್ಲಾ ವ್ಯವಸ್ಥಾಪಕ ಜಗನ್ನಾಥ್, ತಾಲೂಕು ವ್ಯವಸ್ಥಾಪಕ ಮಂಜುನಾಥ್, ಕೃಷಿಯೇತರ ಎನ್‌ಆರ್‌ಎಲ್‌ಎಂನ ತಾಲೂಕು ವ್ಯವಸ್ಥಾಪಕರಾದ ಧನ್ಯ ಸೇರಿದಂತೆ ವಿವಿಧ ಮಹಿಳಾ ಸಂಘಟನೆಯ ಪ್ರಮುಖರು ಹಾಜರಿದ್ದರು.

ಉದ್ಯಮಿ ನಾಗೇಂದ್ರಪ್ರಸಾದ್‌ಗೆ ಆತಿಥ್ಯ ರತ್ನ ಪ್ರಶಸ್ತಿ



ಕುಶಾಲನಗರ, ಮೇ 25– ಪಟ್ಟಣದ ಕನ್ನಿಕಾ ಇಂಟರ್‌ನ್ಯಾಷನಲ್ ಹೋಟೆಲ್ ಮಾಲೀಕರು ಆದ ಕೊಡಗು ಜಿಲ್ಲಾ, ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಬಿ.ಆರ್.ನಾಗೇಂದ್ರ ಪ್ರಸಾದ್ ಆತಿಥ್ಯ ರತ್ನ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಕರ್ನಾಟಕ ಹೋಟೆಲ್‌ಗಳ ಮಾಲೀಕರ ಸಂಘದಿಂದ 2025–26ನೇ ಸಾಲಿನ ಆತಿಥ್ಯ ರತ್ನ ಪ್ರಶಸ್ತಿಗೆ ನಾಗೇಂದ್ರ ಪ್ರಸಾದ್ ಅವರನ್ನು ಆಯ್ಕೆ ಮಾಡಲಾಗಿದ್ದು, ಮೇ 29 ರಂದು ಗುರುವಾರ ಬೆಂಗಳೂರಿನಲ್ಲಿ ನಡೆಯುವ ಸಮಾರಂಭದಲ್ಲಿ ಆದಿ ಚುಂಚನಗಿರಿ ಮಠದ ಶ್ರೀ ನಿರ್ಮಲಾ ನಂದನಾಥ ಸ್ವಾಮೀಜಿ ಹಾಗೂ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಪ್ರಶಸ್ತಿ ಪ್ರಧಾನ ಮಾಡಲಿದ್ದಾರೆ ಎಂದು ಕಾರ್ಯಕ್ರಮ ಸಂಘಟಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಗೇಂದ್ರ ಪ್ರಸಾದ್ ಜಿಲ್ಲಾ, ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷರಾಗಿದ್ದು, ಹೋಟೆಲ್, ರೆಸಾರ್ಟ್ ಮತ್ತು ರೆಸ್ಟೋರೆಂಟ್ ಸಂಘದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ.

ನಾಳೆಯಿಂದ ಕಳಿನಮ್ಮೆ ಆರಂಭ



ಭಕ್ತರಿಂದ ಪ್ರಕೃತಿ ದತ್ತವಾಗಿ ಅಭಿವೃದ್ಧಿಗೊಂಡ ನಲ್ಲೂರು ಬೋಟೆಕಾರ ಈಶ್ವರ ಸ್ಥಾನ

ಗೋಣಿಕೊಪ್ಪ, ಮೇ 25 – ನಲ್ಲೂರು ಬೋಟೆಕಾರ ಈಶ್ವರ ಸ್ಥಾನವನ್ನು 10 ಲಕ್ಷ ರೂ. ವೆಚ್ಚದಲ್ಲಿ ಭಕ್ತರೇ ಅಭಿವೃದ್ಧಿ ಪಡಿಸುವ ಮೂಲಕ ಲೋಕಾರ್ಪಣೆ ಮಾಡಿದ್ದಾರೆ.

ಇದೇ 27, 28 ರಂದು ನಡೆಯುವ ಬೋಡ್‌ನಮ್ಮೆಯಲ್ಲಿ ಮಂಗಳವಾರ ಕಳಿನಮ್ಮೆ ನಡೆಯುತ್ತದೆ. ವಾರಕ್ಕೆ ಮುಂಚೆ ನಮ್ಮೆ ಕೆಟ್ಟ್ ಆರಂಭವಾಗಿ, ಮರ ಕಡಿಯುವುದು, ಹೊರಗೆ ಉಳಿಯುವುದು ನಿಷೇಧ ಹೇರಿಕೊಂಡು ಶುದ್ಧದಲ್ಲಿ ಆರಂಭಿಸಲಾಗುತ್ತದೆ. ಹಬ್ಬದ ದಿನ ಐನ್‌ಮನೆಗಳಿಗೆ ದೇವರ ದೋಳ್, ದೇವರ ಹಾಡಿನೊಂದಿಗೆ ತೆರಳಲಾಗುತ್ತದೆ. ನಂತರ ಮಂದ್‌ನಲ್ಲಿ ಬಂದು ಬಂಡ್ ಕಳಿ ಮೂಲಕ ಕುಶಿ ಪಡುವ ಆಚರಣೆ ಇದೆ. ಸಂಜೆಯಿಂದ ಮನೆ–ಮನೆಗಳಿಗೆ ಕಳಿ ಹಾಕಿಕೊಂಡು ಗ್ರಾಮಸ್ಥರು ತೆರಳುತ್ತಾರೆ. ಬುಧವಾರ ಬೆಳಗ್ಗೆ 9 ಗಂಟೆ ಸುಮಾರಿಗೆ ಕಳದಲ್ಲಿ ಸೇರುತ್ತದೆ. ಈಶ್ವರನ 2 ಕುದುರೆ, ಅಯ್ಯಪ್ಪನ 1 ಕುದುರೆ ಸಂಗಮವಾಗುತ್ತದೆ. ಮಧ್ಯಾಹ್ನದವರೆಗೆ ಬಂಡ್‌ಕಳಿ ನಡೆಯುತ್ತದೆ. ನಂತರ ಮೊಗಕಳಿಯನ್ನು ಪಣಿಕ ಜನಾಂಗ ನಡೆಸಿಕೊಡುವ ವಿಶೇಷ ಆಚರಣೆ ಇಲ್ಲಿದೆ ಮೂಲ ಸ್ಥಾನದಲ್ಲಿ ಪ್ರಸಾದ ಅರ್ಪಣೆ ನೆರವೇರುತ್ತದೆ. ಪುತ್ತರಿ ಸಂದರ್ಭ ಮಂದ್‌ನಲ್ಲಿ ಪುತ್ತರಿ ಕೋಲ್ ನಡೆಸಿ ನಂತರ ಗುಮ್ಮತ್‌ಮಾಡ್ ಮಂದ್‌ನಲ್ಲಿ ಕೋಲಾಟ್ ಕೂಡ ನಡೆಯುತ್ತದೆ.

ಬೋಟೆಕಾರ ಅಯ್ಯನಿಗೆ ಅರ್ಪಿಸಲು ಮೂರು ವರ್ಷಕ್ಕೊಮ್ಮೆ ಮಣ್ಣಿನಿಂದ ತಯಾರಿಸಿದ ಶ್ವಾನದ ರೂಪವನ್ನು ಮಾಯಮುಡಿ ಗ್ರಾಮದ ಮಡಿಕೆಬೀಡುವಿನಿಂದ ತೆಗೆದುಕೊಂಡು ಹೋಗುವ ಆಚರಣೆ ಇದೆ ಎಂದು ಸ್ಥಳೀಯರಾದ ಬೋಡಂಗಡ ಜಗದೀಶ್ ಮಾಹಿತಿ ನೀಡಿದರು. ಕೇರಳ ರಾಜ್ಯದ ಬೈತೂರು ಸ್ಥಾನದಲ್ಲಿರುವ ಬೇಟೆ ಕುರುಮನ್ ಸ್ಥಾನ ಇದರ ಮೂಲ ಸ್ಥಾನವಾಗಿದೆ. ಅಲ್ಲಿಂದ ಆಗಮಿಸಿರುವ ಹಿನ್ನೆಲೆ ಇದೆ. ಇಲ್ಲಿ ದೇವರಿಗೆ ಸೇರಿದ ಜಾಗ ಕೂಡ ಇದೆ. ಅಲ್ಲಿ ಹರಕೆ ಒಪ್ಪಿಸುವ ಪದ್ಧತಿ ಇದೆ.

ನಲ್ಲೂರು ಗ್ರಾಮಕ್ಕೆ ಆಗಮಿಸಿದ ಬೋಟೆಕಾರ ಈಶ್ವರ ದೇವರು ನೆಲೆಗಾಗಿ ತೀತರಮಾಡ ಕುಟುಂಬದ ಜನರನ್ನು ಸ್ಥಾನ ಕೇಳಿದಾಗ ನೆಲೆಗೆ ಜಾಗ ನೀಡಲಾಗಿದೆ. ಒಂದು ರಾತ್ರಿ ದೇವಸ್ಥಾನ ನಿರ್ಮಾಣ ಪೂರ್ಣಗೊಳ್ಳದ ಕಾರಣ ಅಪೂರ್ಣವಾಗಿ ಉಳಿದುಕೊಂಡಿದೆ. ತಿರಿಕೆ ಎಂದು ಕರೆಯುವ ಜಾಗಕ್ಕೆ ವಿಶೇಷ ಶಕ್ತಿ ಇದೆ. ಪಶ್ಚಿಮಾಭಿಮುಖವಾಗಿ ನಿಂತಿದೆ. ಇದರ ಸಮೀಪ ಮೊದಲು ಸ್ಥಾನ ಕೇಳಲು ಬಂದ ಜಾಗದಲ್ಲಿ ಮರಗಳಿಂದಲೇ ಅಂಬಲ ನಿರ್ಮಿಸಿದ್ದು, ಅರಳಿ ಮರ, ಹಲಸು ಮರಗಳೇ ಇಲ್ಲಿನ ಶಕ್ತಿಯ ರೂಪವಾಗಿದೆ. ಇಲ್ಲಿ ವಿಶೇಷ ಪೂಜೆ ನಡೆಯುತ್ತದೆ. ನೆಲೆಗೆ ಜಾಗ ಕೇಳಿದ ಸಂದರ್ಭ ಗ್ರಾಮದಲ್ಲಿದ್ದ ತೀತರಮಾಡ, ಬೋಡಂಗಡ, ಪುಳ್ಳಂಗಡ, ಸೋಮೇಂಗಡ, ಕೊಡ್ಜಿಮಡ ಕುಟುಂಬದ ಪ್ರಮುಖರು ಅವಕಾಶ ಮಾಡಿಕೊಟ್ಟರು. ಪ್ರಸ್ತುತ ಕಿರಿಯಕ್‌ಮಡ, ಸುಳ್ಳೆರ, ಮಲಚೀರ, ಕೊಕ್ಕಲೆಮಾಡ, ಚೆಟ್ರುಮಡ, ಪುಚ್ಚಿಮಾಡ, ಕನ್ನಂಡ ಸೇರಿದಂತೆ ಗ್ರಾಮಸ್ಥರು ಆರಾಧನೆಯಲ್ಲಿ ತೊಡಗಿಕೊಂಡಿದೆ.


ರಸ್ತೆಗಡ್ಡಲಾಗಿ ಬಿದ್ದಿದ್ದ ಭಾರಿ ಗಾತ್ರದ ಮರ ತೆರವುಗೊಳಿಸಿದ ಸ್ಥಳೀಯರು

ಪೊನ್ನಂಪೇಟೆ, ಮೇ 25–ಸುರಿಯುತ್ತಿರುವ ಗಾಳಿ, ಮಳೆಗೆ ಪೊನ್ನಂಪೇಟೆಯಿಂದ ರಸ್ತೆಗಡ್ಡಲಾಗಿ ಭಾರಿ ಗಾತ್ರದ ಮರ ಬಿದ್ದು, ಎರಡು ವಿದ್ಯುತ್ ಕಂಬಗಳು ಉರುಳಿ ವಾಹನಗಳ ಸಂಚಾರಕ್ಕೆ ತಡೆಯುಂಟಾಗಿದ್ದನ್ನು ಗಮನಿಸಿದ ಸ್ಥಳೀಯರು ಮರವನ್ನು ತೆರವುಗೊಳಿಸಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ಸ್ಥಳೀಯರಾದ ಐನಂಡ ಬೋಪಣ್ಣ ಚೆಸ್ಕಾಂ ಇಲಾಖಾಧಿಕಾರಿಯನ್ನು ಸಂಪರ್ಕಿಸಿ ಕಾನೂರು ಜಂಕ್ಷನ್ ಬಳಿ ನೂತನವಾಗಿ ಅಳವಡಿಸಿದ್ದ ವಿದ್ಯುತ್ ಕಂಬಗಳ ಮೇಲೆ ಮರ ಧರೆಗುರುಳಿದೆ. ಸ್ಥಳೀಯರೆಲ್ಲ ಸೇರಿ ಇದನ್ನು ತೆರವುಗೊಳಿಸಿದ್ದೇವೆ ಮುಂದಾಗುವ ಅಪಾಯವನ್ನು ತಪ್ಪಿಸಲು ಕಂಬವನ್ನು ದುರಸ್ತಿಗೊಳಿಸಲು ಮತ್ತು ವಿದ್ಯುತ್ ಹರಿವು ಸ್ಥಗಿತಗೊಳಿಸುವಂತೆ ತಿಳಿಸಿದರು. ಅಜ್ಜಿಕುಟ್ಟೀರ ಸೋಮಯ್ಯ, ಅಲೆಮಾಡ ರೋಷನ್ ಹಾಗೂ ಗ್ರಾಮಸ್ಥರು ಇದ್ದರು.

ಹಸಿರು ನಮ್ಮ ಉಸಿರು

ಚಾಮರಾಜನಗರ ಜಿಲ್ಲೆಯಲ್ಲಿ ಮಳೆ ಆರ್ಭಟ



ಚಾಮರಾಜನಗರ ಜಿಲ್ಲೆಯಾದ್ಯಂದ ಭಾನುವಾರ ಭರ್ಜರಿ ಮಳೆಯಾಗಿದೆ.

ಚಾಮರಾಜನಗರ, ಮೇ 25– ಜಿಲ್ಲೆಯಲ್ಲಿ ಮಳೆ ಆರ್ಭಟ ಮುಂದುವರಿದಿದ್ದು ಭಾನುವಾರ ಸಂಜೆ ಎರಡು ಮೂರು ಗಂಟೆಗಳ ಕಾಲ ನಿರಂತರವಾಗಿ ಮಳೆ ಸುರಿಯಿತು. ಜಿಲ್ಲೆಯ ಚಾಮರಾಜನಗರ, ಕೊಳ್ಳೇಗಾಲ, ಯಳಂದೂರು, ಗುಂಡ್ಲುಪೇಟೆ, ಹನೂರು ತಾಲೂಕು ವ್ಯಾಪ್ತಿಯಲ್ಲಿ ಭರ್ಜರಿ ಮಳೆಯಾಗಿರುವ ಕುರಿತು ವರದಿಯಾಗಿದೆ.

ಹಲವು ದಿನಗಳಿಂದಲೂ ಜಿಲ್ಲಾದ್ಯಂತ ಉತ್ತಮ ಮಳೆಯಾಗುತ್ತಿದ್ದು. ಭಾನುವಾರ ಸಂಜೆ ಬಿರುಸಿನ ಮಳೆ ಸುರಿದಿದೆ. ಇದರಿಂದಾಗಿ ನಗರದ ರಸ್ತೆಗಳಲ್ಲಿ ಮಳೆ ನೀರು ಹರಿದು ಸಾಕಷ್ಟು ಅವಾಂತರ ಸೃಷ್ಟಿಸಿತು. ಭಾನುವಾರ ಬೆಳಗ್ಗೆ ಜೋರು ಬಿರುಗಾಳಿ ಬೀಸಿದ್ದರಿಂದ ಕೆಲವೆಡೆ ಮರಗಳು ಧರೆಗುರುಳಿವೆ.

ಪೂರ್ವ ಮುಂಗಾರು ಮಳೆಗೆ ಗ್ರಾಮೀಣ ಪ್ರದೇಶಗಳಲ್ಲಿನ ಸಣ್ಣಪುಟ್ಟ ಕೆರೆ, ಕಟ್ಟೆಗಳು ಭರ್ತಿಯಾಗಿವೆ. ಗ್ರಾಮೀಣ ಪ್ರದೇಶದ ರಸ್ತೆಗಳು ಕೆಸರುಮಯವಾಗಿ ಮಾರ್ಪಾಡು ಹೊಂದಿವೆ. ಧಾರಾಕಾರ ಮಳೆಗೆ ಜಿಲ್ಲೆಯ ಸುವರ್ಣಾವತಿ, ಚಿಕ್ಕಹೊಳೆ, ಗುಂಡಾಲ್ ಜಲಾಶಯಗಳಿಗೆ ಹೆಚ್ಚಿನ ನೀರು ಹರಿದು ಬರುತ್ತಿದೆ. ಹೀಗಾಗಿ ಈ ಭಾಗದ ಜನರು, ರೈತರಲ್ಲಿ ಸಂತಸ ಮೂಡಿಸಿದೆ.

ಅರಣ್ಯ ಪ್ರದೇಶಗಳಲ್ಲೂ ಉತ್ತಮ ಮಳೆ: ಜಿಲ್ಲೆಯ ಬಂಡೀಪುರ, ಬಿಆರ್‌ಟಿ, ಮಲೆಮಹದೇಶ್ವರ ಬೆಟ್ಟ ವ್ಯಾಪ್ತಿಯಲ್ಲಿ ಉತ್ತಮ ಮಳೆಯಾಗಿದ್ದು, ನೀರಿಲ್ಲದೇ ಭಣಗುಡುತ್ತಿದ್ದ ಕೆರೆ, ಕಟ್ಟೆಗಳು ತುಂಬುವ ಹಂತದಲ್ಲಿದೆ. ಬರಗಾಲದಿಂದ ನೀರು, ಮೇವಿಗೆ ತತ್ತರಿಸಿ ಹೋಗಿದ್ದ ಕಾಡು ಪ್ರಾಣಿಗಳಿಗೆ ಮಳೆಯಿಂದ ಅನುಕೂಲವಾಗಿದೆ.

ಕಳೆದ ಕೆಲ ದಿನಗಳಿಂದಲೂ ಸುರಿಯುತ್ತಿರುವ ಮಳೆಯಿಂದಾಗಿ ಅರಣ್ಯದಲ್ಲಿ ಮೇವು ಚಿಗುರ ತೊಡಗಿದ್ದು ಪ್ರಾಣಿಗಳಿಗೆ ಉದ್ಭವಿಸಿದ್ದ ನೀರು, ಮೇವಿನ ಕೊರತೆ ನೀಗಿದೆ.

ಆನೆ ಗಣತಿ ಕಾರ್ಯ ಸಂಪನ್ನ

ಚಾಮರಾಜನಗರ, ಮೇ 25–ಜಿಲ್ಲೆಯ ಬಿಆರ್‌ಟಿ, ಮಲೆಮಹದೇಶ್ವರ, ಕಾವೇರಿ ವನ್ಯಧಾಮಗಳಲ್ಲಿ ಮೂರು ದಿನಗಳಿಂದ ನಡೆಯುತ್ತಿದ್ದ ಆನೆ ಗಣತಿ ಕಾರ್ಯ ಮುಕ್ತಾಯಗೊಂಡಿದೆ.

ಪ್ರತಿದಿನ ಮುಂಜಾನೆ 6 ಗಂಟೆಗೆ ಗಣತಿ ಕಾರ್ಯ ಆರಂಭಿಸಿ ಸಂಜೆ 6ರವರೆಗೂ ನಡೆಸಲಾಗುತ್ತಿತ್ತು. ಮೊದಲ ದಿನ ಸಿಬ್ಬಂದಿ ಕಾಲ್ನಡಿಗೆಯಲ್ಲಿ ಸುತ್ತಾಡಿ ಆನೆ ಬ್ಲಾಕ್‌ಗಳ ಗಣತಿ ನಡೆಸಲಾಗಿದ್ದು, ಆನೆಗಳ ಗುಂಪುಗಳ ಸಂಖ್ಯೆ, ಗುಂಪಿನಲ್ಲಿರುವ ಆನೆಗಳ ಸಂಖ್ಯೆ, ಹೆಣ್ಣಾನೆ, ಮರಿಯಾನೆಗಳ ಸಹಿತ ಎಲ್ಲಾ ಆನೆಗಳನ್ನು ಗಣತಿ ಮಾಡಲಾಗಿದೆ. ಎರಡನೇ ದಿನ ಆನೆಗಳ ಜಾಡಿನಲ್ಲಿ ಅಡ್ಡಾಡಿ ಲದ್ದಿಯ ಆಧಾರದಲ್ಲಿ ಗಣತಿಯ ಮಾಹಿತಿ ಸಂಗ್ರಹಿಸಲಾಗಿದೆ. ಕೊನೆಯ ದಿನವಾದ ಭಾನುವಾರ ಆನೆಗಳು ನೀರಡಿಕೆ ತಣಿಸಿಕೊಳ್ಳಲು ಬರುವ ಜಲ ಮೂಲಗಳ ಬಳಿ ಗಣತಿ ನಡೆಸಲಾಗಿದ್ದು, ಮೂರು ದಿನಗಳ ಆನೆ ಗಣತಿ ಮುಕ್ತಾಯವಾಗಿದೆ.

ಗಣತಿ ಕಾರ್ಯ ಮುಂದುವರಿಕೆ: ಬಂಡೀಪುರ ರಾಷ್ಟ್ರೀಯ ಅಭಯಾರಣ್ಯದಲ್ಲಿ ಆನೆಗಳ ಗಣತಿ ಕಾರ್ಯ ಇನ್ನೂ 5 ದಿನಗಳ ಕಾಲ ನಡೆಯಲಿದ್ದು, ಈಗಾಗಲೇ ಮೂರು ದಿನಗಳ ಗಣತಿ ಕಾರ್ಯ ಯಶಸ್ವಿಯಾಗಿ ಮುಕ್ತಾಯಗೊಳಿಸಲಾಗಿದೆ. ಪ್ರತಿ ವರ್ಷವೂ ಅರಣ್ಯದಲ್ಲಿ 8 ದಿನಗಳ ಕಾಲ ಆನೆ ಗಣತಿ ನಡೆಸಲಾಗುತ್ತಿದೆ. ಅದರಂತೆ ಈ ಬಾರಿಯೂ ಗಣತಿ ನಡೆಸಲಾಗುತ್ತಿದ್ದು, ಅರಣ್ಯದ 114 ಗಸ್ತುಗಳಲ್ಲಿ ತಲಾ 3 ಜನ ಸಿಬ್ಬಂದಿಗಳು ಗಣತಿ ಕಾರ್ಯ ನಡೆಸುತ್ತಿದ್ದಾರೆ ಎಂದು ಎಸಿಎಫ್ ನವೀನ್‌ಕುಮಾರ್ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ನಿರುದ್ಯೋಗ ನಿವಾರಣೆಗೆ ಅಧಾರ ಗ್ರೂಪ್ ಸಹಕಾರಿ: ಬಸವನಪುರ ರಾಜಶೇಖರ



ಬೃಹತ್ ಎಸಿಬಿ ಮೇಳಕ್ಕೆ ರಾಜಶೇಖರ ಬಸವನಪುರ ಚಾಲನೆ ನೀಡಿದರು.

ಚಾಮರಾಜನಗರ, ಮೇ 25– ನಗರದ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ಅಧಾರಗ್ರೂಪ್ಸ್ ವತಿಯಿಂದ ಬೃಹತ್ ಎಸಿಬಿ ಮೇಳ ನಡೆಸಿತು.

ಮೇಳಕ್ಕೆ ಚಾಲನೆ ನೀಡಿದ ಜಿಲ್ಲಾ ರೈತ ಹಿತ ರಕ್ಷಣಾ ಹೋರಾಟ ಸಮಿತಿ ಪ್ರಧಾನ ಕಾರ್ಯದರ್ಶಿ ರಾಜಶೇಖರ ಬಸವನಪುರ ಮಾತನಾಡಿ, ನಿರುದ್ಯೋಗ ಸಮಸ್ಯೆ ನಿವಾರಣೆಗೆ ಅಧಾರ ಗ್ರೂಪ್ ಸಹಕಾರಿಯಾಗಿದೆ. ಪ್ರತಿ ತಿಂಗಳು 600 ಕಟ್ಟುವುದರಿಂದ 20 ತಿಂಗಳಿಗೆ 12 ಸಾವಿರ ಆಗುತ್ತದೆ. ಪ್ರತಿ ತಿಂಗಳು ಬಹುಮಾನ ಇರುತ್ತದೆ. ಕೊನೆಯಲ್ಲಿ ಮನೆಗೆ ಬೇಕಾದ ಗೃಹೋಪಯೋಗಿ ವಸ್ತುಗಳು ಪಡೆಯಬಹುದು ಎಂದರು.

ಜಿಲ್ಲಾ ರೈತ ಹಿತರಕ್ಷಣಾ ಹೋರಾಟ ಸಮಿತಿ ಜಿಲ್ಲಾಧ್ಯಕ್ಷ ಆಲೂರು ಮಲ್ಲು ಅಧ್ಯಕ್ಷತೆ ವಹಿಸಿದ್ದರು. ಮೇಳದಲ್ಲಿ ಅಧಾರ ಗ್ರೂಪ್ ಸಂಸ್ಥಾಪಕ ಮಹೇಶ್, ಕೋಚಿಂಗ್ ಪ್ರತಾಪ್, ಚೆನ್ನೇಗೌಡ, ಸಾಧೀಕ್ ಪಾಷ, ವೀರಭದ್ರ, ರವಿ, ಮಣಿ, ಜಿ. ಮಹೇಶ್, ಉಮ್ಮತ್ತೂರು ಚಂದ್ರು ಹಾಜರಿದ್ದರು.

ಬಿಜೆಪಿಯ ಸಂಘಟನಾ ಪರ್ವ ಸಭೆ



ಗುಂಡ್ಲುಪೇಟೆ ಬಿಜೆಪಿ ಕಚೇರಿಯಲ್ಲಿ ಆಯೋಜಿಸಿದ್ದ ಸಂಘಟನಾ ಪರ್ವ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಸಿ.ಎಸ್.ನಿರಂಜನಕುಮಾರ್ ಮಾತನಾಡಿದರು. ಈ ವೇಳೆ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್, ಮಂಡಲಾಧ್ಯಕ್ಷ ಸಿ.ಮಹದೇವಪ್ರಸಾದ್, ಮಾಜಿ ಅಧ್ಯಕ್ಷ ಎಲ್.ಸುರೇಶ್, ತಾಲೂಕು ಪ್ರಭಾರ ನಾರಾಯಣಪ್ರಸಾದ್, ಎಸ್‌ಟಿ ಮೋರ್ಚಾ ಅಧ್ಯಕ್ಷ ಎನ್.ಮಲ್ಲೇಶ್, ಮುಖಂಡ ಅರಕಲವಾಡಿ ನಾಗೇಂದ್ರ, ಮಾಧ್ಯಮ ಸಂಚಾಲಕ ಎಸ್.ಸಿ.ಮಂಜುನಾಥ್ ಉಪಸ್ಥಿತರಿದ್ದರು.

ಕಸಾಪ ಅವ್ಯವಹಾರ ತನಿಖೆಯಾಗುವವರೆಗೆ ನಿರಂತರ ಹೋರಾಟ: ಪ್ರೊ.ಜಯಪ್ರಕಾಶ್‌ಗೌಡ



ಕನ್ನಡ ಸಾಹಿತ್ಯ ಪರಿಷತ್ ವಿರುದ್ಧ ಹೋರಾಟ ಕುರಿತು ಪೂರ್ವಭಾವಿ ಸಭೆಯಲ್ಲಿ ಕಸಾಪ ಮಾಜಿ ಕಾರ್ಯದರ್ಶಿ ಪ್ರೊ. ಜಯಪ್ರಕಾಶ್‌ಗೌಡ ಮಾತನಾಡಿದರು.

ಚಾಮರಾಜನಗರ, ಮೇ 25– ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಮಹೇಶ್ ಜೋಷಿರನ್ನು ಅಮಾನತ್ತುಪಡಿಸಿ, ಆಡಳಿತಾಧಿಕಾರಿ ನೇಮಕ ಮಾಡಿ ಅವರ ಅವಧಿಯಲ್ಲಿ ನಡೆದಿರುವ ಅವ್ಯವಹಾರ ತನಿಖೆಯಾಗುವವರೆಗೆ ನಿರಂತರ ಹೋರಾಟ ನಡೆಸುವುದಾಗಿ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಕಾರ್ಯದರ್ಶಿ ಪ್ರೊ. ಜಯಪ್ರಕಾಶ್‌ಗೌಡ ತಿಳಿಸಿದರು.

ನಗರದ ಪ್ರವಾಸಿಮಂದಿರದಲ್ಲಿ ಕನ್ನಡ ನಾಡು ನುಡಿ ಜಾಗೃತಿ ಸಮಿತಿ ವತಿಯಿಂದ ಕಸಾಪ ವಿರುದ್ಧ ಹೋರಾಟ ಕುರಿತು ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮಹೇಶ್ ಜೋಷಿ ನಿವೃತ್ತಿಯಾಗುತ್ತಿದ್ದಂತೆ ಪರಿಷತ್‌ಗೆ ವಾಮಮಾರ್ಗದ ಮೂಲಕ ಅಧ್ಯಕ್ಷರಾಗಿದ್ದಾರೆ. ಪರಿಷತ್ತಿನ ಹಿತಾಸಕ್ತಿ ಹಾಗೂ ಸಾಹಿತ್ಯ, ಭಾಷೆ, ನಾಡು ನುಡಿ, ಜಲ ವಿಚಾರದಲ್ಲಿ ದುಡಿಯದೇ ಕೇವಲ ಹಣ ಮಾಡುವ ಕಾಯಕದಲ್ಲಿ ನಿರತರಾಗಿದ್ದಾರೆ ಎಂದು ಆರೋಪಿಸಿದರು.

ವಿವಿಧ ವಲಯದಲ್ಲಿರುವ ಐದಾರು ಮಂದಿಯನ್ನು ನಾಮ ನಿರ್ದೇಶನಮಾಡಿಕೊಳ್ಳಲು ಬೈಲಾದಲ್ಲಿ ಅವಕಾಶ ಇದೆ. ಆದರೆ, ಈ ಜೋಷಿ ಇವೆಲ್ಲವನ್ನು ಗಾಳಿಗೆ ತೂರಿ ತಮ್ಮಗೆ ಇಷ್ಟಬಂದಂತೆ ನಡೆದು ಕೊಳ್ಳುತ್ತಿದ್ದಾರೆ. ಇವರ ವಿರುದ್ಧ ಈಗಾಗಲೇ ಮಂಡ್ಯ, ಮೈಸೂರು, ಬೆಂಗಳೂರು ಜಿಲ್ಲೆಗಳಲ್ಲಿ ಸಂಘಟಿತ ಹೋರಾಟ ನಡೆಯುತ್ತಿದೆ. ಈಗ ಜಿಲ್ಲೆಯಿಂದಲೂ ಸಹ ಪರಿಷತ್‌ನ ದುರಾಡಳಿತ ವಿರುದ್ಧ ಹೋರಾಟ ಮಾಡೋಣ ಎಂದು ಜಯಪ್ರಕಾಶ್‌ಗೌಡ ತಿಳಿಸಿದರು.

ವಿಧಾನಪರಿಷತ್‌ನ ಮಾಜಿ ಸದಸ್ಯ ಕೆಟಿ.ಶ್ರೀಕಂಠೇಗೌಡ ಮಾತನಾಡಿ, ಕಸಾಪ ರಾಜ್ಯಾಧ್ಯಕ್ಷ ಮಹೇಶ್ ಜೋಷಿ ಕನ್ನಡಿಗರ ಹಿತಾಸಕ್ತಿ ಮರೆತು ತನಗೆ ಇಷ್ಟ ಬಂದಂತೆ ಬೈಲಾ ತಿದ್ದುಪಡಿ ಮಾಡಿ ಸರ್ವಾಧಿಕಾರಿಯಂತೆ ವರ್ತನೆ ಮಾಡುತ್ತಿದ್ದಾರೆ. ಕಸಾಪದ 110 ವರ್ಷದ ಇತಿಹಾಸದಲ್ಲಿಯೇ ಇಂಥ ಅಧ್ಯಕ್ಷರನ್ನು ನೋಡಿಲ್ಲ. ಕನ್ನಡಿಗರ ಹಿತಾಸಕ್ತಿಯನ್ನು ಮರೆತು, ಭ್ರಷ್ಟಾಚಾರದಲ್ಲಿ ಮುಳುಗಿದ್ದಾರೆ. ಎಂದು ಗುಡುಗಿದರು.

ಜೂ.10 ರಂದು ಪ್ರತಿಭಟನೆ: ಸಭೆಯಲ್ಲಿ ಭಾಗ ವಹಿಸಿದ್ದ ಅನೇಕ ಮುಖಂಡರು ಮಾತನಾಡಿ, ಕಸಾಪ ರಾಜ್ಯಾಧ್ಯಕ್ಷ ಮಹೇಶ್ ಜೋಷಿ ವಿರುದ್ಧ ಹೋರಾಟ ಮಾಡಲು ಜೂ. 10 ರ ಮಂಗಳವಾರ ದೊಡ್ಡ ಮಟ್ಟದಲ್ಲಿ ಪ್ರತಿಭಟನೆಯನ್ನು ನಡೆಸಲು ತೀರ್ಮಾನಿಸಿದರು.

ಕಸಾಪ ಮಾಜಿ ಅಧ್ಯಕ್ಷ ಎ.ಎಂ. ನಾಗಮಲ್ಲಪ್ಪ, ದಲಿತ ಮಹಾಸಭಾದ ಉಪಾಧ್ಯಕ್ಷ ವೆಂಕಟ ರಮಣ ಸ್ವಾಮಿ(ಪಾಪು), ಕೆ.ವೀರಭದ್ರಸ್ವಾಮಿ ಮಾತನಾಡಿ, ಕಸಾಪ ರಾಜ್ಯಾಧ್ಯಕ್ಷ ಮಹೇಶ್ ಜೋಷಿ ವಿರುದ್ಧ ಬಹಳಷ್ಟು ಅಸಮಾಧಾನ ವ್ಯಕ್ತವಾಗುತ್ತಿದೆ. ಇಂಥವರು ಪರಿಷತ್‌ನಲ್ಲಿ ಮುಂದುವರಿಯಲು ಅರ್ಹರಲ್ಲ. ಅಲ್ಲದೇ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ನಿಷ್ಕ್ರೀಯವಾಗಿದ್ದು, ಇದರ ವಿರುದ್ಧ ಒಗ್ಗಟ್ಟಿನ ಹೋರಾಟ ಅನಿವಾರ್ಯವಾಗಿದೆ ಎಂದರು.

ಕಸಾಪ ತಾಲೂಕು ಉಪಾಧ್ಯಕ್ಷ ಮಾದಾಪುರ ರವಿಕುಮಾರ್ ಮಾತನಾಡಿದರು. ಸಭೆಯಲ್ಲಿ ಪ್ರೊ. ಜಿ.ಟಿ. ವೀರಪ್ಪ, ರೈತ ಸಂಘದ ರಾಜ್ಯ ಉಪಾಧ್ಯಕ್ಷ ಡಾ. ಗುರುಪ್ರಸಾದ್, ವಕೀಲ ಪ್ರಸನ್ನ ಕುಮಾರ್, ಮರಿಯಾಲಹುಂಡಿ ಶಿವರಾಮು, ಮುಖಂಡ ಡಾ. ಪರಮೇಶ್ವರಪ್ಪ, ಸಿ.ಎಂ. ಕೃಷ್ಣ ಮೂರ್ತಿ, ಪದ್ಮಾಕ್ಷಿ, ಶಿವಶಂಕರ್, ಬಸವನಪುರ ರಾಜಶೇಖರ್, ಜಿ. ಬಂಗಾರು, ಜಿ.ರಾಜಪ್ಪ, ಮೊದಲಾದವರು ಇದ್ದರು.

ಚಂದಕವಾಡಿ ಮಹದೇವಪ್ರಸಾದ್ ನಾಪತ್ತೆ

ಚಾಮರಾಜನಗರ: ಚಂದಕವಾಡಿ ಗ್ರಾಮದ ನಿವಾಸಿ ಮಹದೇವಪ್ರಸಾದ್ ಎಂಬವರು ಕಾಣೆಯಾಗಿದ್ದು, ಇವರ ಪತ್ತೆಗೆ ಸಹಕರಿಸುವಂತೆ ಕೋರಲಾಗಿದೆ. 30 ವರ್ಷದವರಾದ ಇವರು 5.8 ಅಡಿ ಎತ್ತರ, ಗೋಧಿ ಮೈಬಣ್ಣ, ಕೋಲು ಮುಖ, ಸದೃಢ ಮೈಕಟ್ಟು ಹೊಂದಿದ್ದು, ಎಡಗೈನಲ್ಲಿ ಟ್ಯಾಟು ಇರುತ್ತದೆ. ಮನೆಯಿಂದ ಹೋಗುವಾಗ ಬಿಳಿ ಚೆಕ್ಸ್ ತುಂಬು ತೋಳಿನ ಶರ್ಟ್, ಕಪ್ಪು ಬಣ್ಣದ ಪ್ಯಾಂಟ್ ಧರಿಸಿದ್ದರು.

ಇವರ ಸುಳಿವು ದೊರೆತಲ್ಲಿ ಜಿಲ್ಲಾ ಪೊಲೀಸ್ ಅಧೀಕ್ಷಕರು ದೂ.ಸಂ 08226–222243, ಚಾಮರಾಜನಗರ ಪೂರ್ವ ಪೊಲೀಸ್ ಠಾಣೆ ದೂ.ಸಂ 08226–222052, ಜಿಲ್ಲಾ ಪೊಲೀಸ್ ಕಂಟ್ರೋಲ್ ರೂಂ 08226–222383, ಮೊ.ಸಂ 9480804648 ಸಂಪರ್ಕಿಸಲು ತಿಳಿಸಿದೆ.

ಸಿಬಿಎಸ್‌ಸಿ: ಶ್ರೀ ವಿನಾಯಕ ಕಾನ್ವೆಂಟ್‌ಗೆ ಶೇ.100ರಷ್ಟು ಫಲಿತಾಂಶ

ಗುಂಡ್ಲುಪೇಟೆ: (ಸೋಮ್.ಜಿ) ಸಿಬಿಎಸ್‌ಸಿ ಫಲಿತಾಂಶದಲ್ಲಿ ಪಟ್ಟಣದ ಶ್ರೀ ವಿನಾಯಕ ಕಾನ್ವೆಂಟ್ ಶೇ.100ರಷ್ಟು ಫಲಿತಾಂಶವನ್ನು ಪಡೆದುಕೊಂಡಿದೆ.

ವಿದ್ಯಾರ್ಥಿನಿ ಸಂಜನಾ ಶೇ.91 ಪಡೆದಿದ್ದು ತಾಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದಾಳೆ. ಉಳಿದಂತೆ ಎಲ್ಲಾ ವಿದ್ಯಾರ್ಥಿಗಳು ಉನ್ನತ ಸ್ಥಾನದಲ್ಲಿ ತೇರ್ಗಡೆಯಾಗಿದ್ದು, ಶಾಲೆಯು ಸಿಬಿಎಸ್‌ಸಿಯಲ್ಲಿ ತಾಲೂಕಿನಲ್ಲಿ ಪ್ರಥಮ ಸ್ಥಾನವನ್ನು ತನ್ನದಾಗಿಸಿಕೊಂಡಿದೆ. ವಿದ್ಯಾರ್ಥಿಗಳ ಸಾಧನೆಯನ್ನು ಶಾಲಾ ಆಡಳಿತ ಮಂಡಳಿ, ಪ್ರಾಂಶುಪಾಲರು ಮತ್ತು ಶಿಕ್ಷಕರು ಪ್ರಶಂಸಿಸಿದ್ದಾರೆ.

ಸಿಇಟಿ: ಲಯನ್ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳ ಸಾಧನೆ

ಕೊಳ್ಳೇಗಾಲ, ಮೇ 25–ಕರ್ನಾಟಕ ಪರೀಕ್ಷಾ ಪ್ರಾಧಿಕಾರ ವೃತ್ತಿಪರ ಕೋರ್ಸುಗಳಿಗಾಗಿ ನಡೆಸಿದ (ಸಿಇಟಿ) ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಕೊಳ್ಳೇಗಾಲ ಪಟ್ಟಣದ ಲಯನ್ಸ್ ಪದವಿ ಪೂರ್ವಕಾಲೇಜಿನ ವಿದ್ಯಾರ್ಥಿಗಳು ಉತ್ತಮ ಸಾಧನೆಗೈದಿದ್ದಾರೆ

ಎಂಜಿನಿಯರಿಂಗ್ ವಿಭಾಗದ ಬಿಎಸ್ಸಿ ಕೃಷಿ ವಿಭಾಗದಲ್ಲಿ ಪುನೀತ್ (1690), ದಿಗಂತ್(4357), ಕುಶ್ವಂತ್ (12083), ವೀರು ಪ್ರಜ್ವಲ್(19391), ಮಾದಲಾಂಬಿಕಾ (12670), ಹರ್ಷಿತ (12770), ಧರಣಿ (29352), ಮಮತ(27872), ಸಯ್ಯದ್ ರೆಹಾನ್ (28502), ರ್‍ಯಾಂಕ್ ಗಳಿಸಿ ಸಾಧನೆ ಮಾಡಿದ್ದಾರೆ. ಸಾಧಕ ವಿದ್ಯಾರ್ಥಿಗಳನ್ನು ಸಂಸ್ಥೆಯ ಅಧ್ಯಕ್ಷ ಚಿಕ್ಕಬಸವಯ್ಯ, ಕಾರ್ಯದರ್ಶಿ ವೆಂಕಟೇಶ್, ಖಜಾಂಚಿ ನಾಗರಾಜು, ಪ್ರಾಂಶುಪಾಲರಾದ ವಿನುತ, ರಸಾಯನ ಶಾಸ್ತ್ರ ಉಪನ್ಯಾಸಕ ಶ್ಯಾಮ್ ಕುಮಾರ್ ಅಭಿನಂದಿಸಿದ್ದಾರೆ.

ಮೈಸೂರು ಮಿತ್ರ ಸೋಮವಾರ 26 ಮೇ 2025

ಮೈಸೂರು ಯುವ ಬಳಗದಿಂದ ಪ್ರತಿಭಾ ಪುರಸ್ಕಾರ



ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಮೈಸೂರು ಯುವ ಬಳಗದಿಂದ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಾಯಿತು.

ಮೈಸೂರು, ಮೇ 25(ಎಂಕೆ)– ಪ್ರತಿಭಾ ಪುರಸ್ಕಾರ ನೀಡುವುದರಿಂದ ವಿದ್ಯಾರ್ಥಿಗಳಲ್ಲಿ ಜವಾಬ್ದಾರಿ ಹೆಚ್ಚಲಿದ್ದು, ಇತರೆ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಲಿದೆ ಎಂದು ಶಾಸಕ ಕೆ.ಹರೀಶ್ ಗೌಡ ಹೇಳಿದರು.

ನಗರದ ದಿವಾನ್ಸ್ ರಸ್ತೆಯಲ್ಲಿರುವ ಖಾಸಗೆ ಹೋಟೆಲ್‌ನಲ್ಲಿ ಮೈಸೂರು ಯುವ ಬಳಗದ ವತಿಯಿಂದ ಸುಬ್ಬರಾಯ ಕೆರೆ, 23ನೇ ವಾರ್ಡ್ ವ್ಯಾಪ್ತಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಮಾತನಾಡಿದ ಅವರು, ಪ್ರತಿಯೊಂದು ಮಕ್ಕಳಲ್ಲೂ ಒಂದೊಂದು ಪ್ರತಿಭೆ ಇರುತ್ತದೆ. ಮಕ್ಕಳಲ್ಲಿರುವ ಪ್ರತಿಭೆಯನ್ನು ಪೋಷಕರು ಹಾಗೂ ಶಿಕ್ಷಕರು ಗುರುತಿಸಿ ಪ್ರೋತ್ಸಾಹಿಸಬೇಕು. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳ ಜೀವನದ ಪ್ರಮುಖ ತಿರುವಿನ ಘಟ್ಟ. ಇಲ್ಲಿ ಯಶಸ್ಸು ಪಡೆದರೆ ಮುಂದೆ ಸುಲಭವಾಗಿ ಗುರಿ ಮುಟ್ಟಬಹುದು. ಹಾಗೆಯೇ ಮಕ್ಕಳು ಶ್ರದ್ಧೆ, ಛಲ, ಕಲಿಯುವ ಆಸಕ್ತಿಯೊಂದಿಗೆ ನಿಖರ ಗುರಿ ಕಡೆಗೆ ಮನಸ್ಸನ್ನು ಕೇಂದ್ರೀಕರಿಸಿ ಪರಿಶ್ರಮ ಹಾಕಬೇಕು. ಆಗಲೇ ಪ್ರಯತ್ನಕ್ಕೆ ತಕ್ಕ ಪ್ರತಿಫಲ ಫಲ ದೊರೆಯುತ್ತದೆ ಎಂದು ಕಿವಿಮಾತು ಹೇಳಿದರು.

ನಗರಪಾಲಿಕೆ ಮಾಜಿ ಸದಸ್ಯ ಗೋಪಿ, ಉದ್ಯಮಿ ವೀರಭದ್ರಪ್ಪ, ದೇವರಾಜ ಪೊಲೀಸ್ ಠಾಣೆ ಪಿಎಸ್‌ಐ ಜೈ ಕೀರ್ತಿ, ಸಮಾಜ ಸೇವಕರಾದ ಸ್ವಾತಿ, ಸ್ಥಳೀಯ ಮುಖಂಡರಾದ ಮಹಾದೇವ್, ಮಂಜುಳಾ, ಶಾಂತ, ಮಂಗಳ, ನವೀನ್, ಮಂಜುನಾಥ್, ಸಂದೀಪ್, ರವಿಚಂದ್ರ, ಲೋಕೇಶ್, ಹರ್ಷ, ಮನು ನಾಯಕ್ ಮತ್ತಿತರರಿದ್ದರು.

ಗಣಪತಿ ಸಚ್ಚಿದಾನಂದ ಶ್ರೀಗಳಿಂದ ಭಾರತೀಯ ಸೇನೆಗೆ 25 ಲಕ್ಷ ದೇಣಿಗೆ



ಮೈಸೂರಿನ ಅವಧೂತ ದತ್ತಪೀಠದ ವತಿಯಿಂದ ಭಾರತೀಯ ಸೇನೆಗೆ 25 ಲಕ್ಷ ರೂಗಳ ದೇಣಿಗೆಯನ್ನು ಭಾನುವಾರ ಸಮರ್ಪಿಸಲಾಯಿತು.

ಮೈಸೂರು, ಮೇ 25(ಎಸ್‌ಪಿಎನ್)– ಪಹಲ್ಗಾಮ್ ಹತ್ಯಾಕಾಂಡ ಪ್ರತಿಕಾರವಾಗಿ ಭಾರತೀಯ ಸೇನೆಯು 'ಆಪರೇಷನ್ ಸಿಂಧೂರ್'ದ ಮೂಲಕ 9 ಉಗ್ರರ ಕ್ಯಾಂಪ್‌ಗಳನ್ನು ಪುಡಿಗಟ್ಟಿದ ಹಿನ್ನಲೆಯಲ್ಲಿ ಮೈಸೂರಿನ ಅವಧೂತ ದತ್ತಪೀಠದ ವತಿಯಿಂದ ಭಾರತೀಯ ಸೇನೆಗೆ 25 ಲಕ್ಷ ರೂಗಳ ದೇಣಿಗೆಯನ್ನು ಭಾನುವಾರ ಸಮರ್ಪಿಸಲಾಯಿತು.

ಮೈಸೂರು–ಊಟಿ ರಸ್ತೆಯ ಶ್ರೀ ದತ್ತ ವೆಂಕಟೇಶ್ವರ ಕ್ಷೇತ್ರದ 26ನೇ ಬ್ರಹ್ಮೋತ್ಸವದ ಅಂಗವಾಗಿ ಇಂದು ಸಂಜೆ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಮತ್ತು ಕಿರಿಯ ಶ್ರೀಗಳಾದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರ ಸಮ್ಮುಖದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮೂಲಕ 25 ಲಕ್ಷ ರೂಗಳ ಚೆಕ್ ಅನ್ನು ಹಸ್ತಾಂತರಿಸಲಾಯಿತು.

ಚೆಕ್ ಸ್ವೀಕರಿಸಿ ಮಾತನಾಡಿದ ಯದುವೀರ್, ದತ್ತ ಪೀಠದಿಂದ ಭಾರತೀಯ ಸೇನೆಗೆ ಕೊಡುತ್ತಿರುವ ದೇಣಿಗೆಯನ್ನು ಭಾರತ ಸರ್ಕಾರಕ್ಕೆ ತಲುಪಿಸುತ್ತೇನೆ. ಶ್ರೀಗಳ ಆಶೀರ್ವಾದ ಇಡೀ ಭಾರತದ ಜನರ ಮೇಲೆ ಮತ್ತು ನಮ್ಮ ಸೈನಿಕರ ಮೇಲೆ ಇರಲಿ ಎಂದು ಮನವಿ ಮಾಡಿದರು. ಈ ವೇಳೆ ನಿವೃತ್ತ ನ್ಯಾಯಮೂರ್ತಿ ಮಂಜುಳಾ ಚೆಲ್ಲೂರ್, ಶಾಸಕ ಟಿ ಎಸ್ ಶ್ರೀವತ್ಸ, ಬಿಜೆಪಿ ನಗರ ಅಧ್ಯಕ್ಷ ಎಲ್.ನಾಗೇಂದ್ರ ಮತ್ತಿತರರಿದ್ದರು.

ಬಂದೋಬಸ್ತ್ ವೇಳೆ ಕರ್ತವ್ಯ ನಿರ್ವಹಿಸುವ ಪೊಲೀಸ್ ಸಿಬ್ಬಂದಿಗೆ ಆಹಾರ ಭತ್ಯೆ 300 ರೂ.ಗೆ ಹೆಚ್ಚಳ

ಮೈಸೂರು, ಮೇ 25(ಎಸ್‌ಪಿಎನ್)– ವಿವಿಧ ಬಂದೋಬಸ್ತ್ ಸಂದರ್ಭದಲ್ಲಿ ಕರ್ತವ್ಯ ನಿರ್ವಹಿಸುವ ಪೊಲೀಸ್ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ ಗುಣಮಟ್ಟದ ಆಹಾರ ಪೂರೈಸಲು ಆಹಾರ ಭತ್ಯೆ 200 ರೂ.ಗಳನ್ನು ಪರಿಷ್ಕರಿಸಿ 300 ರೂ.ಗಳಿಗೆ ಹೆಚ್ಚಿಸಿ ರಾಜ್ಯ ಸರ್ಕಾರ ಒಳಾಡಳಿತ ಇಲಾಖೆ(ಪೊಲೀಸ್ ವೆಚ್ಚ) ಅಧೀನ ಕಾರ್ಯದರ್ಶಿ ಕೆ.ಎನ್.ವನಜ ಆದೇಶಿಸಿದ್ದಾರೆ.

ಬಂದೋಬಸ್ತ್ ಕರ್ತವ್ಯಗಳಿಗೆ ನಿಯೋಜಿಸುವ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಪಾವತಿಸುತ್ತಿರುವ ಆಹಾರ ಭತ್ಯೆಯ ದರವನ್ನು ಪರಿಷ್ಕರಿಸುವಂತೆ ಪೊಲೀಸ್ ಇಲಾಖೆಯಿಂದ ಕೆಲ ದಿನಗಳ ಹಿಂದೆ ಶಿಫಾರಸ್ಸು ಮಾಡಲಾಗಿತ್ತು. ಹಬ್ಬ–ಹರಿದಿನಗಳು, ವಿಶೇಷ ಮತ್ತು ಚುನಾವಣಾ ಸಂದರ್ಭದಲ್ಲಿ ಬಂದೋಬಸ್ತ್‌ನಲ್ಲಿ ಕರ್ತವ್ಯ ನಿರ್ವಹಿಸುವ ಪೊಲೀಸ್ ಸಿಬ್ಬಂದಿ, ಅಧಿಕಾರಿಗಳಿಗೆ ಪ್ರಸ್ತುತ ಪಾವತಿಸುತ್ತಿರುವ ಆಹಾರ ಭತ್ಯೆ 200 ರೂ.ಗಳು ಸಾಕಾಗುತ್ತಿಲ್ಲ. ಹಾಗಾಗಿ 300 ರೂ.ಗೆ ಹೆಚ್ಚಿಸುವಂತೆ ಕೋರಲಾಗಿತ್ತು.

ವಿದ್ಯುತ್ ಸ್ಪರ್ಶದಿಂದ ರೈತ, ಎರಡು ಹಸು ಸಾವು



ವಿದ್ಯುತ್ ಪ್ರವಹಿಸಿ ಸಿದ್ದರಾಜು ಹಾಗೂ ಹಸು ಸಾವನ್ನಪ್ಪಿರುವುದು.

ಮೈಸೂರು, ಮೇ 25– ಜಮೀನಿನಲ್ಲಿ ವಿದ್ಯುತ್ ತಂತಿ ತುಂಡಾಗಿ ಬಿದ್ದ ಪರಿಣಾಮ ವ್ಯಕ್ತಿ ಹಾಗೂ ಎರಡು ಹಸುಗಳು ಸಾವನ್ನಪ್ಪಿರುವ ಘಟನೆ ನಂಜನಗೂಡು ತಾಲೂಕಿನ ಏಚಗಳ್ಳಿಯಲ್ಲಿ ಭಾನುವಾರ ಸಂಭವಿಸಿದೆ.

ಗ್ರಾಮದ ಸಿದ್ದರಾಜು(55) ತಮ್ಮ ಎರಡು ಹಸುಗಳೊಂದಿಗೆ ದುರಂತ ಸಾವಿಗೀಡಾಗಿದ್ದಾರೆ. ಇವರು ಇಂದು ಬೆಳಗ್ಗೆ ಹಸುಗಳನ್ನು ಜಮೀನಿನಲ್ಲಿ ಕಟ್ಟಿ, ನಿಶ್ಚಿತಾರ್ಥ ಸಮಾರಂಭಕ್ಕೆ ತೆರಳಿದ್ದರು. ಮಧ್ಯಾಹ್ನ ಊರಿಗೆ ವಾಪಸ್ಸಾದ ಕೂಡಲೇ ಜಮೀನಿಗೆ ತೆರಳಿದಾಗ ಎರಡು ಹಸುಗಳು ಯಾವುದೇ ಚಲನವಲನವಿಲ್ಲದೆ ಬಿದ್ದಿದ್ದವು. ಗಾಬರಿಯಿಂದ ಅವರು ಹಸುಗಳಿಗೆ ಏನಾಯಿತು ಎಂದು ನೋಡಲು ಹೋದಾಗ ಅವರಿಗೂ ವಿದ್ಯುತ್ ಪ್ರವಹಿಸಿ ಸಾವನ್ನಪ್ಪಿದ್ದಾರೆ.

ಹಾಲು ಕರೆಯುವ ಸಮಯವಾದರೂ ಹಸುಗಳನ್ನು ಕರೆತಂದಿಲ್ಲವೆಂದು ಸಂಜೆ 6 ಗಂಟೆ ವೇಳೆಗೆ ಸಿದ್ದರಾಜು ಅವರ ಪುತ್ರಿ ಜಮೀನಿಗೆ ಹೋದಾಗ ಹಸುಗಳೊಂದಿಗೆ ತಂದೆಯೂ ಬಿದ್ದಿರುವುದನ್ನು ನೋಡಿ ಕಿರುಚಿಕೊಂಡಿದ್ದಾರೆ. ಗ್ರಾಮಸ್ಥರು ಓಡಿ ಬಂದು ನೋಡಿದಾಗ ಪಂಪ್‌ಸೆಟ್‌ಗೆ ಸಂಪರ್ಕಿಸಿರುವ ವಿದ್ಯುತ್ ತಂತಿ ತುಂಡಾಗಿ ಬಿದ್ದು, ಈ ಅವಘಡ ಸಂಭವಿಸಿರುವುದು ತಿಳಿದಿದೆ. ನಿಗಧಿಯಂತೆ ಸಂಜೆ 4ಕ್ಕೆ ಪಂಪ್‌ಸೆಟ್ ವಿದ್ಯುತ್ ಸಂಪರ್ಕ ಕಡಿತಗೊಂಡಿದೆ. ಸ್ವಲ್ಪ ತಡವಾಗಿ ಜಮೀನಿಗೆ ಹೋಗಿದ್ದರೆ ಸಿದ್ದರಾಜು ಅವರ ಜೀವ ಉಳಿಯುತ್ತಿತ್ತು ಎಂದು ಜನ ಮಾತನಾಡಿಕೊಳ್ಳುತ್ತಿದ್ದರು.

ಪೊಲೀಸರು ಹಾಗೂ ಸೆಸ್ಕ್ ಅಧಿಕಾರಿಗಳು ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿದ್ದಾರೆ. ಸಿದ್ದರಾಜು ದೇಹವನ್ನು ನಂಜನಗೂಡು ಸರ್ಕಾರಿ ಆಸ್ಪತ್ರೆ ಶವಾಗಾರದಲ್ಲಿಡಲಾಗಿದ್ದು, ವೈದ್ಯಕೀಯ ಪರೀಕ್ಷೆ ಬಳಿಕ ದೇಹವನ್ನು ವಾರಸುದಾರರಿಗೆ ಒಪ್ಪಿಸುವುದಾಗಿ ತಿಳಿದುಬಂದಿದೆ.

ಇಂದು ಅಂಗನವಾಡಿ ಕೇಂದ್ರಗಳಿಗೆ ರಜೆ

ಮೈಸೂರು: ಬಿರುಗಾಳಿ ಸಹಿತ ಎಡಬಿಡದೆ ಮಳೆ ಸುರಿಯುತ್ತಿರುವ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಮೈಸೂರು ಜಿಲ್ಲೆಯ ಎಲ್ಲಾ ಅಂಗನವಾಡಿ ಕೇಂದ್ರಗಳಿಗೆ ಸೋಮವಾರ(ಮೇ 26) ರಜೆ ಘೋಷಿಸಿ ಡಿಸಿ ಜಿ.ಲಕ್ಷ್ಮೀಕಾಂತ ರೆಡ್ಡಿ ಆದೇಶಿಸಿದ್ದಾರೆ.

ಎನ್.ಬಿ.ಪ್ರಭುಸ್ವಾಮಿ ನಿಧನ



ಮೈಸೂರು: ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕಿನ ನಿಡಘಟ್ಟ ಗ್ರಾಮದ ಎನ್.ಬಿ.ಪ್ರಭುಸ್ವಾಮಿ(58) ಅನಾರೋಗ್ಯ ಕಾರಣ ಶನಿವಾರ ರಾತ್ರಿ ಬೆಂಗಳೂರಿನ ತಮ್ಮ ನಿವಾಸದಲ್ಲಿ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರಿಯರು, ಪುತ್ರ ಸೇರಿದಂತೆ ಅಪಾರ ಬಂಧುಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ನಿಡಘಟ್ಟ ಗ್ರಾಮದ ಮೃತರ ಜಮೀನಿನಲ್ಲಿ ಭಾನುವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ನಂಜನಗೂಡಿನಲ್ಲಿ ಬಸವ ಜಯಂತಿ

ದುಡಿಮೆಗೆ ಬೆಲೆ ನೀಡಿದರೆ ಬಡತನ ನಿರ್ಮೂಲನೆ

ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ.ಖಂಡ್ರೆ ಅಭಿಪ್ರಾಯ

ನಂಜನಗೂಡು, ಮೇ 25– ವಿಶ್ವಗುರು ಬಸವಣ್ಣನವರ ತತ್ವಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡರೆ ಸಮಾಜದಲ್ಲಿ ಬಡತನ ಇರುವುದಿಲ್ಲ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ.ಖಂಡ್ರೆ ಅಭಿಪ್ರಾಯಪಟ್ಟರು.

ನಗರದಲ್ಲಿ ಭಾನುವಾರ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ವತಿಯಿಂದ ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬಸವಣ್ಣನವರು ಕಾಯಕವೇ ಕೈಲಾಸ ಎನ್ನುವ ಮೂಲಕ ದುಡಿಮೆಯ ಹಿರಿಮೆಯನ್ನು ಸಾರಿದರು. ದುಡಿಮೆಗೆ ಬೆಲೆ ನೀಡಿದರೆ ಬಡತನ ನಿರ್ಮೂಲನೆ ಶತಃಸಿದ್ಧ. ಬುದ್ಧ, ಬಸವ, ಅಂಬೇಡ್ಕರ್ ಮೊದಲಾದ ಮಹಾಪುರುಷರು ಯಾವುದೇ ಒಂದು ಜಾತಿಗೆ ಸೀಮಿತರಲ್ಲ ಅವರು ಇಡೀ ಮಾನವ ಕುಲಕ್ಕೆ ಮಾದರಿ. ಇಂತಹ ಮಹಾಪುರುಷರ ಜಯಂತಿ ಆಚರಿಸುವ ಮೂಲಕ ನಾವು ಅವರ ಆದರ್ಶ ಅಳವಡಿಸಿಕೊಂಡರೆ ಈ ಆಚರಣೆಗೆ ಅರ್ಥ ಬರುತ್ತದೆ ಎಂದರು.

ಸಮುದಾಯ ಒಗ್ಗೂಡಿಸಿ: ಪ್ರಸ್ತುತ ಸಮಾಜದಲ್ಲಿ ಧರ್ಮದ ಹೆಸರಿನಲ್ಲಿ ಭಯದ ವಾತಾವರಣ ಸೃಷ್ಟಿಸಲಾಗುತ್ತಿದೆ. ವೀರಶೈವರು ಬೇರೆ, ಲಿಂಗಾಯಿತರು ಬೇರೆ ಎಂದು ವಿಂಗಡಣೆ ಮಾಡಿ ನಮ್ಮವರನ್ನೇ ಒಪ್ಪಿಕೊಳ್ಳಲು ತಯಾರಿಲ್ಲದಿದ್ದರೆ ಬೇರೆ ಸಮಾಜವನ್ನು ಒಪ್ಪಿಕೊಳ್ಳಲು ಸಾಧ್ಯವೇ?

> 12ನೇ ಶತಮಾನದಲ್ಲಿ ಬಸವಣ್ಣನವರು ಸಮ ಸಮಾಜ ನಿರ್ಮಾಣದ ಕನಸನ್ನು ಕಂಡಿದ್ದರು. ಆದರೆ ದುರಂತವೆಂದರೆ ಈಗಿನ ರಾಜಕಾರಣಿಗಳು ಬಸವಣ್ಣನವರ ಹೆಸರು ಬಳಸಿಕೊಂಡು ಸಮಾಜವನ್ನು ಒಡೆಯುವ ಕೆಲಸದಲ್ಲಿ ನಿರತರಾಗಿದ್ದಾರೆ. ಇದು ನೋವಿನ ಸಂಗತಿ. ಬಸವಣ್ಣನವರ ಫೋಟೋಗಳನ್ನು ಕಚೇರಿಗಳಲ್ಲಿ ಇರಿಸಿದರಷ್ಟೇ ಸಾಲದು ಬದಲಾಗಿ ಸಮಾಜದ ಎಲ್ಲಾ ವರ್ಗದ ಜನರನ್ನು ಒಟ್ಟಾಗಿ ಕರೆದೊಯ್ಯುತ್ತಿದ್ದ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪನವರಂತಹ ಜನನಾಯಕರು ಪ್ರಸ್ತುತ ರಾಜಕಾರಣಕ್ಕೆ ಅಗತ್ಯವಾಗಿದೆ. ರಾಜ್ಯಕ್ಕೆ ಅವಶ್ಯಕತೆ ಇರುವುದು ಜನನಾಯಕರೇ ಹೊರತು ರಾಜಕಾರಣಿಗಳಲ್ಲ. ಹೀಗಾಗಿ ವೀರಶೈವ ಲಿಂಗಾಯತ ಸಮುದಾಯದ ಜನರು ಒಳಪಂಗಡದ ಬೇಧ ಭಾವಗಳನ್ನು ಮರೆತು ಸಮಾಜದ ಎಲ್ಲಾ ವರ್ಗದ ಜನರೊಡನೆ ಒಟ್ಟಾಗಿ ಸಾಗಬೇಕಿದೆ.
>
> – ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ.

ಹೀಗಾಗಿ ಮುಂಬರುವ ದಿನಗಳಲ್ಲಿ ವೀರಶೈವ ಲಿಂಗಾಯತರಲ್ಲಿ ಏಕತೆಯನ್ನು ಮೂಡಿಸಿ ಎಲ್ಲಾ ಒಳ ಪಂಗಡಗಳನ್ನು ಒಗ್ಗೂಡಿಸುವ ಅಗತ್ಯವಿದೆ ಎಂದರು.

ಮಾನವ–ವನ್ಯಜೀವಿ ಸಂಘರ್ಷಕ್ಕೆ ಪರಿಹಾರ: ಈ ಭಾಗದಲ್ಲಿ ಮಾನವ–ಆನೆ ಮತ್ತು ಮಾನವ–ವನ್ಯಜೀವಿಗಳ ಸಂಘರ್ಷ ಹೆಚ್ಚುತ್ತಿದ್ದು, ಆನೆಗಳು ನಾಡಿಗೆ ಬಾರದಂತೆ ತಡೆಯಲು 8 ಕಿಮೀ ರೈಲ್ವೆ ಬ್ಯಾರಿಕೇಡ್ ಅಳವಡಿಸಲು ಹೆಚ್ಚುವರಿಯಾಗಿ 12 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದ್ದು, ಇದಕ್ಕೆ ಚೈನ್ ಲಿಂಕ್ ಫೆನ್ಸ್ ಅಳವಡಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.



ಬಸವ ಜಯಂತಿಯನ್ನು ಸಚಿವ ಈಶ್ವರ ಖಂಡ್ರೆ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಉದ್ಘಾಟಿಸಿದರು.

ಶಾಸಕ ದರ್ಶನ್ ಮಾತನಾಡಿ, ಹೆಡಿಯಾಲ ವ್ಯಾಪ್ತಿಯಲ್ಲಿ ಕಾಡುಪ್ರಾಣಿಗಳ ಉಪಟಳ ತಪ್ಪಿಸಲು ರೈಲ್ವೆ ಬ್ಯಾರಿಕೇಡ್ ಅಳವಡಿಸುವ ಕಾಮಗಾರಿ ಪ್ರಗತಿಯಲ್ಲಿದ್ದು, ಜೊತೆಗೆ ನಂಜನಗೂಡು ಮುಖ್ಯ ರಸ್ತೆಯಲ್ಲಿ ಅರಣ್ಯ ಭವನದ ಮುಂಭಾಗ ಬಸ್ ನಿಲ್ದಾಣ ನಿರ್ಮಿಸಲು ಸ್ಥಳಾವಕಾಶ ಒದಗಿಸುವಂತೆ ಅರಣ್ಯ ಸಚಿವರಿಗೆ ಮನವಿ ಮಾಡಲಾಗಿದೆ. ಇನ್ನು ನಂಜನಗೂಡಿನಲ್ಲಿ ನಿರ್ಮಾಣ ಹಂತದಲ್ಲಿರುವ ಬಸವ ಭವನದ ಮುಂದುವರಿದ ಕಾಮಗಾರಿಗಾಗಿ ಸರ್ಕಾರದಿಂದ 5 ಕೋಟಿ ಅನುದಾನ ಪಡೆದು ಕಾಮಗಾರಿ ಪೂರ್ಣಗೊಳಿಸುವುದಾಗಿ ಭರವಸೆ ನೀಡಿದರು.

ಆಕರ್ಷಕ ಮೆರವಣಿಗೆ: ಇದಕ್ಕೂ ಮುನ್ನ ನಗರದ ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಮುಂಭಾಗದಿಂದ ಬಸವಣ್ಣನವರ ಭಾವಚಿತ್ರದೊಂದಿಗೆ ಆಕರ್ಷಕ ಕಲಾ ತಂಡಗಳ ಮೆರವಣಿಗೆಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಸುತ್ತೂರು ಶ್ರೀವೀರ ಸಿಂಹಾಸನ ಮಹಾಸಂಸ್ಥಾನ ಮಠಾಧ್ಯಕ್ಷ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಗಾವಡಗೆರೆ ಗುರುಲಿಂಗ ಜಂಗಮ ಮಠದ ಶ್ರೀ ನಟರಾಜ ಸ್ವಾಮೀಜಿ, ಹುಲ್ಲಹಳ್ಳಿ ವಿರಕ್ತ ಮಠದ ಶ್ರೀಇಮ್ಮಡಿ ಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ, ಶಾಸಕರಾದ ಗಣೇಶ್ ಪ್ರಸಾದ್, ಶ್ರೀವತ್ಸ, ಮಾಜಿ ಶಾಸಕರಾದ ಬಿ.ಹರ್ಷವರ್ಧನ್, ಕೇಶವಮೂರ್ತಿ, ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ, ಖಾದಿ ಗ್ರಾಮೋದ್ಯೋಗ ಮಂಡಳಿ ಮಾಜಿ ಅಧ್ಯಕ್ಷ ಎನ್.ಆರ್.ಕೃಷ್ಣಪ್ಪಗೌಡ, ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕು ಘಟಕದ ಅಧ್ಯಕ್ಷ ಸಿಂಧುವಳ್ಳಿ ಕೆಂಪಣ್ಣ, ಕಾರ್ಯದರ್ಶಿ ಶಿವಪ್ಪದೇವರು, ಹಗಿನವಾಳು ಚೆನ್ನಪ್ಪ, ಜಿಪಂ ಮಾಜಿ ಸದಸ್ಯರಾದ ಮಂಗಳ ಸೋಮಶೇಖರ್, ಗುರುಸ್ವಾಮಿ, ಎಪಿಎಂಸಿ ಮಾಜಿ ಸದಸ್ಯ ಗುರುಸ್ವಾಮಿ, ವೀರಶೈವ ಕೋ–ಆಪರೇಟಿವ್ ಸೊಸೈಟಿ ಅಧ್ಯಕ್ಷ ಎನ್.ಸಿ.ಬಸವಣ್ಣ, ಮುಖಂಡರಾದ ಬುಲೆಟ್ ಮಹದೇವಪ್ಪ, ಶ್ಯಾಂಪಟೇಲ್, ಅಶೋಕ್, ಕಣೇನೂರು ಪರಶಿವಮೂರ್ತಿ, ನಾಗೇಶ್‌ರಾಜ್, ಬದನವಾಳು ಮಹೇಶ್, ಹಾಡ್ಯ ಶಂಕರ್, ಯುವ ಘಟಕ ಅಧ್ಯಕ್ಷ ಮಲ್ಕುಂಡಿ ಮಹದೇವಸ್ವಾಮಿ ಮತ್ತಿತರರಿದ್ದರು.

ಶಾಸಕರ ಭಾಷಣಕ್ಕೆ ಅಡ್ಡಿ: ಖಂಡನೀಯ

ನಂಜನಗೂಡು: ತಾಲೂಕು ವೀರಶೈವ ಮಹಾಸಭಾ ವತಿಯಿಂದ ನಗರದಲ್ಲಿ ಆಯೋಜಿಸಿದ್ದ ಬಸವೇಶ್ವರ ಜಯಂತಿಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅಭಿಮಾನಿಗಳು ಶಾಸಕ ಗಣೇಶ್ ಪ್ರಸಾದ್ ಅವರ ಭಾಷಣಕ್ಕೆ ಅಡ್ಡಿಪಡಿಸಿರುವುದು ಖಂಡನೀಯ ಎಂದು ವೀರಶೈವ ಮಹಾಸಭಾ ನಿರ್ದೇಶಕ ದೇಬೂರು ಅಶೋಕ್ ಆರೋಪಿಸಿದರು.

ನಗರದ ವಿದ್ಯಾವರ್ಧಕ ಕಾಲೇಜು ಮೈದಾನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಳೇ ಮೈಸೂರು ಭಾಗದಲ್ಲಿ ಗಣೇಶ್ ಪ್ರಸಾದ್ ಅವರು ಕಾಂಗ್ರೆಸ್ ಪಕ್ಷದ ಲಿಂಗಾಯಿತ ಸಮಾಜದ ಪ್ರಭಾವಿ ಮುಖಂಡರಾಗಿದ್ದಾರೆ. ನಮ್ಮ ಕ್ಷೇತ್ರದ ಶಾಸಕರಲ್ಲದಿದ್ದರೂ, ಬಸವೇಶ್ವರರ ಅದ್ಧೂರಿ ಜಯಂತಿ ಕಾರ್ಯಕ್ರಮಕ್ಕೆ ಹೆಚ್ಚಿನ ನೆರವು ನೀಡಿದ್ದಾರೆ. ಆದರೆ ಅವರ ನಾಯಕತ್ವ ಮಟ್ಟ ಹಾಕುವ ಹುನ್ನಾರದಿಂದ ರಾಜಕೀಯ ಪ್ರೇರಿತವಾಗಿ ಕಾರ್ಯಕ್ರಮದಲ್ಲಿ ವಿಜಯೇಂದ್ರ ಅಭಿಮಾನಿಗಳು ಗಣೇಶ್ ಪ್ರಸಾದ್ ಭಾಷಣಕ್ಕೆ ಅಡ್ಡಿಪಡಿಸಿ ಲಿಂಗಾಯಿತ ಸಮಾಜದ ಕಾಂಗ್ರೆಸ್ ಬೆಂಬಲಿತರ ಮನಸ್ಸಿಗೆ ನೋವುಂಟು ಮಾಡಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಭೈರಾಪುರದಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿರ



ಉಚಿತ ಆರೋಗ್ಯ ತಪಾಸಣೆ ಶಿಬಿರ ನಡೆಯಿತು.

ತಿ.ನರಸೀಪುರ, ಮೇ 25– ಪುರಸಭೆ ವ್ಯಾಪ್ತಿಯ ವಾರ್ಡ್ ನಂ.4ರ ಭೈರಾಪುರದ ಶಾಲೊಮ್ ಚರ್ಚ್‌ನಲ್ಲಿ ನೋಂದಾಯಿತ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರಿಗೆ ಹಾಗೂ ಅವರ ಅವಲಂಬಿತರಿಗಾಗಿ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಪುರಸಭಾ ಸದಸ್ಯ ಎಲ್.ಮಂಜುನಾಥ್ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಈ ಭಾಗದಲ್ಲಿ ಹೆಚ್ಚು ಮಂದಿ ಕಟ್ಟಡ ಮತ್ತು ಇತರೆ ನಿರ್ಮಾಣದಲ್ಲಿ ತೊಡಗಿಸಿಕೊಂಡಿದ್ದು, ಈ ವೇಳೆ ಸಾಕಷ್ಟು ತೊಂದರೆಗಳಾಗುತ್ತಿವೆ. ಹೀಗಾಗಿ ಪ್ರತಿಯೊಬ್ಬರೂ ತಪ್ಪದೇ ಕಟ್ಟಡ ಕಾರ್ಮಿಕರ ಗುರುತಿನ ಚೀಟಿ ಮಾಡಿಸಿಕೊಳ್ಳಬೇಕು ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಸಾಲಿನ ಬಜೆಟ್‌ನಲ್ಲಿ ಕಾರ್ಮಿಕ ಇಲಾಖೆಗೆ ಸಾಕಷ್ಟು ಅನುದಾನ ನೀಡಿದ್ದಾರೆ. ಆದ್ದರಿಂದ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ಸಾಕಷ್ಟು ಸೌಲಭ್ಯಗಳು ಇಲಾಖೆ ನೀಡುತ್ತಿದ್ದು, ಅದರಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿರವೂ ಒಂದು. ನೀವು ಖಾಸಗಿಯಾಗಿ ಆರೋಗ್ಯ ತಪಾಸಣೆಗೆ ಒಳಗಾದರೆ ಸಾವಿರಾರು ರೂ. ಖರ್ಚಾಗಲಿದೆ. ಹೀಗಾಗಿ ಇಲಾಖೆ ವತಿಯಿಂದ ನಡೆಸುತ್ತಿರುವ ಶಿಬಿರವನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.

ಈ ವೇಳೆ ಕಾರ್ಮಿಕ ಇಲಾಖೆಯ ದರ್ಶನ್, ಶಾಲೊಮ್ ಚರ್ಚ್ ಮುಖ್ಯಸ್ಥ ಜೈ ಶೇಖರ್, ಬಾಬು ಜಗಜೀವನ್ ರಾಂ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ರಾಚಯ್ಯ, ಮಂಜುನಾಥ್, ನಿಂಗರಾಜು, ಬಸವಣ್ಣ, ರಾಜು ಇತರರಿದ್ದರು.

ನಿವೇಶನ, ವಸತಿ ರಹಿತರಿಗೆ ನಿವೇಶನ ನೀಡಲು ಕ್ರಮ

ನಗರ ಆಶ್ರಯ ಸಮಿತಿ ಸಭೆಯಲ್ಲಿ ಶಾಸಕ ಅನಿಲ್

ಹೆಚ್.ಡಿ.ಕೋಟೆ, ಮೇ 25– ಪಟ್ಟಣ ವ್ಯಾಪ್ತಿಯಲ್ಲಿ ಈಗಾಗಲೇ ಖರೀದಿಸಲಾಗಿರುವ 6.10 ಎಕರೆ ಜಮೀನಿನಲ್ಲಿ ನಗರ ಯೋಜನಾ ಇಲಾಖೆಯಿಂದ ವಿನ್ಯಾಸ ನಕ್ಷೆ ಅನುಮೋದನೆ ಪಡೆದು ಬಡ ನಾಗರಿಕರಿಗೆ ನಿವೇಶನಗಳನ್ನು ವಿತರಿಸಲಾಗುವುದು ಎಂದು ಶಾಸಕ ಅನಿಲ್ ತಿಳಿಸಿದರು.

ಪಟ್ಟಣದ ಶಾಸಕರ ಕಚೇರಿಯಲ್ಲಿ ನಡೆದ ನಗರ ಆಶ್ರಯ ಸಮಿತಿ ಪ್ರಥಮ ಸಭೆಯಲ್ಲಿ ಮಾತನಾಡಿದ ಅವರು, 25x30 ಅಡಿ ಅಳತೆಯ ನಿವೇಶನಗಳನ್ನು ರಚಿಸಿ 3 ತಿಂಗಳೊಳಗೆ ಪ್ರಕ್ರಿಯೆ ಪೂರ್ಣಗೊಳಿಸಿ ನಿವೇಶನ ರಹಿತ ಮತ್ತು ವಸತಿ ರಹಿತರಿಗೆ ಹಂಚಿಕೆ ಮಾಡಲು ಕ್ರಮ ವಹಿಸಬೇಕು ಎಂದರು.

ಪಟ್ಟಣದಲ್ಲಿ 23 ವಾರ್ಡ್‌ಗಳಿದ್ದು, ನಿವೇಶನ ರಹಿತ ಮತ್ತು ವಸತಿ ರಹಿತರಿಗೆ ನಿವೇಶನಗಳನ್ನು ಹಂಚಿಕೆ ಮಾಡಲು, ಪಟ್ಟಣಕ್ಕೆ ಹೊಂದಿಕೊಂಡಂತಿರುವ ಜಮೀನುಗಳನ್ನು ಮಾರಾಟ ಮಾಡಲು ಇಚ್ಛಿಸುವ ಜಮೀನುದಾರರನ್ನು ಗುರ್ತಿಸಿ ದಾಖಲಾತಿಗಳನ್ನು ಪಡೆದು ಪರಿಶೀಲಿಸಿ, ಆಶ್ರಯ ಯೋಜನೆಗೆ ಖರೀದಿಸಲಾಗುವುದು. ಅಲ್ಲದೇ ಪಟ್ಟಣ ವ್ಯಾಪ್ತಿಯಲ್ಲಿ ಸ್ಲಂಬೋರ್ಡ್‌ನಿಂದ ಗುಂಪು ಮನೆಗಳನ್ನು ನಿರ್ಮಾಣ ಮಾಡಲು ಸೂಚಿಸಲಾಗಿದೆ ಎಂದರು.



ಆಶ್ರಯ ಸಮಿತಿಗೆ ಸರ್ಕಾರದಿಂದ ಹೊಸದಾಗಿ ಆಯ್ಕೆಯಾದ ವಜ್ರೇಗೌಡ, ಕೃಷ್ಣನಾಯಕ, ನಜೀರ್ ಅಹಮದ್, ಶಶಿಕಲಾ, ಗೋವಿಂದ್ ರಾಜ್ ಅವರನ್ನು ಶಾಸಕ ಅನಿಲ್ ಸನ್ಮಾನಿಸಿದರು.

ಆಶ್ರಯ ಸಮಿತಿಗೆ ಸರ್ಕಾರದಿಂದ ಹೊಸದಾಗಿ ಆಯ್ಕೆಯಾದ ವಜ್ರೇಗೌಡ, ಕೃಷ್ಣನಾಯಕ, ನಜೀರ್ ಅಹಮದ್, ಶಶಿಕಲಾ, ಗೋವಿಂದ್ ರಾಜ್ ಅವರನ್ನು ಸನ್ಮಾನಿಸಲಾಯಿತು. ತಹಸೀಲ್ದಾರ್ ಶ್ರೀನಿವಾಸ, ಪುರಸಭಾ ಮುಖ್ಯಾಧಿಕಾರಿ ಸುರೇಶ್, ತಾಪಂ ಇಓ ಧರಣೇಶ್, ಸರಗೂರು ಇಓ ಪ್ರೇಮ್ ಕುಮಾರ್, ಮಂಜುಶೆಟ್ಟಿ ಇದ್ದರು.

ಕಬ್ಬಿನ ಎಫ್‌ಆರ್‌ಪಿ ದರ ಪರಿಶೀಲಿಸಲು ಒತ್ತಾಯ

ತಿ.ನರಸೀಪುರ, ಮೇ 25– ಕಬ್ಬಿನ ಎಫ್‌ಆರ್‌ಪಿ ದರ ಪುನರ್ ಪರಿಶೀಲಿಸಲು ಕ್ರಮ ಕೈಗೊಳ್ಳುವಂತೆ ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶನಾಲಯದ ಆಯುಕ್ತರನ್ನು ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ಕಬ್ಬು ಬೆಳೆಗಾರರ ಸಂಘದ ಪದಾಧಿಕಾರಿಗಳು ಒತ್ತಾಯಿಸಿದ್ದಾರೆ.

ಬೆಂಗಳೂರಿನ ಕಾವೇರಿ ಭವನದಲ್ಲಿರುವ ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಾಲಯದಲ್ಲಿ ಆಯುಕ್ತರನ್ನು ಭೇಟಿಯಾದ ರೈತ ಮುಖಂಡರು ಕಬ್ಬು ಬೆಳೆಗಾರ ರೈತರ ಸಮಸ್ಯೆಗಳನ್ನು ಚರ್ಚಿಸಿ, ಹತ್ತು ಹಲವು ಬೇಡಿಕೆಗಳುಳ್ಳ ಒತ್ತಾಯ ಪತ್ರವನ್ನು ಸಲ್ಲಿಸಿದರು.

ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ಅತ್ತಹಳ್ಳಿ ದೇವರಾಜ್ ಮಾತನಾಡಿ, ಪ್ರಸಕ್ತ 2025–2026ನೇ ಸಾಲಿಗೆ ಕಬ್ಬಿನ ಎಫ್‌ಆರ್‌ಪಿ ದರ ಟನ್‌ಗೆ ಕೇವಲ 150 ರೂ. ಏರಿಕೆ ಮಾಡಿರುವುದು ಅವೈಜ್ಞಾನಿಕವಾಗಿದ್ದು, ಪುನರ್ ಪರಿಶೀಲನೆ ಮಾಡಿಸಿ ಸಿಎಸಿಪಿ ವರದಿಯಂತೆ ಟನ್ ಕಬ್ಬಿಗೆ 4500 ರೂ. ನಿಗದಿ ಪಡಿಸಬೇಕು. ಸಕ್ಕರೆ ಕಾರ್ಖಾನೆಗಳಿಂದ ಕಳೆದ ವರ್ಷದ ಉಪ ಉತ್ಪನ್ನಗಳ ಲಾಭ ಹಂಚಿಕೆ ಮಾಡಿಸಬೇಕು. ಕಳೆದ ವರ್ಷ ಸರ್ಕಾರ ಹೆಚ್ಚುವರಿಯಾಗಿ ಟನ್‌ಗೆ 150 ರೂ. ಬೆಲೆ ನಿಗದಿಪಡಿಸಿದ್ದು, ಕಾರ್ಖಾನೆಗಳು ಇನ್ನು ಪಾವತಿಸಿಲ್ಲ. ಅಲ್ಲದೆ 950 ಕೋಟಿ ಹಣ ಬಾಕಿ ಇದ್ದು ತಕ್ಷಣವೇ ಕೊಡಿಸಬೇಕು ಎಂದರು.



ಕಬ್ಬಿನ ಎಫ್‌ಆರ್‌ಪಿ ದರ ಪುನರ್ ಪರಿಶೀಲಿಸುವಂತೆ ಮನವಿ ಸಲ್ಲಿಸಲಾಯಿತು.

ಕಬ್ಬಿನ ಎಫ್‌ಆರ್‌ಪಿ ದರ ರೈತನ ಹೊಲದಲ್ಲಿನ ದರವೆಂದು ಬದಲಾಗಬೇಕು. ಸಕ್ಕರೆ ಕಾರ್ಖಾನೆಗಳಿಂದ ಸಕ್ಕರೆ ಮೋಸ ತಪ್ಪಿಸಲು ಇಳುವರಿ ಮಿತಿ ಕನಿಷ್ಟ 9ಕ್ಕೆ ಜಾರಿಯಾಗಬೇಕು. ಬೆಂಕಿ ಬಿದ್ದು ಸುಟ್ಟ ಕಬ್ಬಿಗೆ ಕಾರ್ಖಾನೆಗಳು ಕಬ್ಬಿನ ಹಣದಲ್ಲಿ ಶೇ.25 ರಷ್ಟು ಹಣ ಕಡಿತ ಮಾಡುವುದನ್ನು ತಪ್ಪಿಸಬೇಕು. ಕಬ್ಬಿನ ತೂಕದಲ್ಲಿ ಮೋಸ ತಪ್ಪಿಸಲು ಕಾರ್ಖಾನೆಗಳ ಮುಂದೆ ತೂಕದ ಯಂತ್ರ ಸ್ಥಾಪಿಸಬೇಕು. ಕಬ್ಬು ಕಟಾವು ಯಂತ್ರದ ಮೂಲಕ ಕಟಾವು ಮಾಡುವಾಗ ಶೇ.8 ರಷ್ಟು ಕಬ್ಬು ವೆಸ್ಟೇಜ್ ಎಂದು ಕಡಿತ ಮಾಡುವುದನ್ನು ತಪ್ಪಿಸಬೇಕು ಹಾಗೂ ಕಾನೂನು ಬಾಹಿರವಾಗಿ ಕಬ್ಬು ಕಡಿತ ಮಾಡಿದ ಕಾರ್ಖಾನೆಗಳಿಗೆ ದಂಡ ಹಾಕಿ ಕಡಿತ ಮಾಡಿದ ಹಣ ರೈತರಿಗೆ ವಾಪಸ್ ಕೊಡಿಸಬೇಕು ಎಂದು ಆಗ್ರಹಿಸಿದರು.


ಈ ವೇಳೆ ಮೈಸೂರು – ಚಾಮರಾಜನಗರ ಜಿಲ್ಲೆಯ ಪ್ರಧಾನ ಕಾರ್ಯದರ್ಶಿ ಬರಡನಪುರ ನಾಗರಾಜ್, ದೊಡ್ಡಕಾಟೂರು ನಾಗೇಶ್, ಜಗದೀಶ್, ಬಳ್ಳಾರಿ ಪರಮೇಶ್ ಇತರರಿದ್ದರು.

ಪಿರಿಯಾಪಟ್ಟಣದಲ್ಲಿ ಇಂದಿರಾ ಕ್ಯಾಂಟಿನ್ ಉದ್ಘಾಟನೆ

ಪಿರಿಯಾಪಟ್ಟಣ, ಮೇ 25– ಪಟ್ಟಣದ ಬಿ.ಎಂ.ರೋಡ್‌ನಲ್ಲಿ ಆರಂಭವಾಗಿರುವ ನೂತನ ಇಂದಿರಾ ಕ್ಯಾಂಟೀನ್ ಅನ್ನು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ನಿತಿನ್ ವೆಂಕಟೇಶ್ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಬಡವರ, ದೀನ ದಲಿತರ, ಕಾರ್ಮಿಕರ ಹಿತ ದೃಷ್ಟಿಯಿಂದ ಆರಂಭವಾಗಿರುವ ಇಂದಿರಾ ಕ್ಯಾಂಟಿನ್ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಕನಸಿನ ಯೋಜನೆಯಾಗಿದ್ದು, ಯಾವುದೇ ಕಾರಣಕ್ಕೂ ಶುಚಿ ರುಚಿಗೆ ಕುಂದು ಬಾರದಂತೆ ನೋಡಿಕೊಳ್ಳಬೇಕು ಎಂದು ಪುರಸಭಾ ಅಧಿಕಾರಿಗಳಿಗೆ ಸೂಚಿಸಿದರು.

ಯಾವುದೇ ವ್ಯಕ್ತಿ ಊಟವಿಲ್ಲದೇ ಹಸಿವಿನಿಂದ ಬಳಲಬಾರದು. ಹಸಿವಿನ ಸಂಕಟ ಯಾರಿಗೂ ಬರಬಾರದು ಎಂಬ ಆಲೋಚನೆಯಿಂದ ರಾಜ್ಯಾದ್ಯಂತ ಸಿದ್ದರಾಮಯ್ಯನವರು ಅನ್ನಭಾಗ್ಯ ಯೋಜನೆ ಹಾಗೂ ಇಂದಿರಾ ಕ್ಯಾಂಟಿನ್‌ಗೆ ಹೆಚ್ಚಿನ ಮಹತ್ವ ನೀಡುತ್ತಿದ್ದಾರೆ. ಇಂದು ಪಟ್ಟಣದಲ್ಲಿ ಇಂದಿರಾ ಕ್ಯಾಂಟಿನ್ ಆರಂಭಗೊಂಡಿದ್ದು, ತಾಲೂಕಿನ ಕೂಲಿ ಕಾರ್ಮಿಕರು, ಬಡ ನಿರುದ್ಯೋಗಿ ವರ್ಗದವರು ಇದರ ಸದುಪಯೋಗ ಪಡಿಸಿಕೊಳ್ಳಬೇಕೆಂದು ಮನವಿ ಮಾಡಿದರು.



ಇಂದಿರಾ ಕ್ಯಾಂಟಿನ್ ಅನ್ನು ನಿತಿನ್ ವೆಂಕಟೇಶ್ ಉದ್ಘಾಟಿಸಿದರು.

ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಹಮದ್ ಜಾನ್‌ಬಾಬು, ಡಿ.ಟಿ.ಸ್ವಾಮಿ, ಪುರಸಭಾಧ್ಯಕ್ಷ ಪ್ರಕಾಶ್ ಸಿಂಗ್, ಸದಸ್ಯರಾದ ಪಿ.ಎನ್.ವಿನೋದ್, ಪ್ರಕಾಶ್, ರವಿ, ಮಂಜು, ಕೃಷ್ಣ, ಮುಖಂಡರಾದ ತಮ್ಮಣ್ಣಯ್ಯ, ಪುರಸಭಾ ಮುಖ್ಯಾಧಿಕಾರಿ ಮುತ್ತಪ್ಪ ಸೇರಿದಂತೆ ಇನ್ನಿತರಿದ್ದರು.

ವಸತಿ ಶಾಲೆಗಳಿಗೆ ಶೇ.100 ರಷ್ಟು ಫಲಿತಾಂಶ

ತಿ.ನರಸೀಪುರ, ಮೇ 25– ಮರು ಮೌಲ್ಯಮಾಪನದ ಬಳಿಕ ತಾಲೂಕಿನ ಮೂಗೂರು, ನೆರಗ್ಯಾತನಹಳ್ಳಿ ಇಂದಿರಾ ಗಾಂಧಿ ವಸತಿ ಶಾಲೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100 ರಷ್ಟು ಫಲಿತಾಂಶ ಬಂದಿದೆ ಎಂದು ಶಾಲೆ ಪ್ರಾಂಶುಪಾಲರಾದ ಎಂ.ಸಿ.ತ್ರಿವೇಣಿ ತಿಳಿಸಿದ್ದಾರೆ.

ಪರೀಕ್ಷೆಗೆ ಕುಳಿತಿದ್ದ ಒಟ್ಟು 23 ವಿದ್ಯಾರ್ಥಿಗಳ ಪೈಕಿ ಮೂವರು ಅತ್ಯುನ್ನತ, ತಲಾ 10 ಮಂದಿ ಪ್ರಥಮ ಹಾಗೂ ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಅತ್ಯುತ್ತಮ ಫಲಿತಾಂಶಕ್ಕೆ ಕಾರಣರಾದ ಶಾಲೆಯ ಶಿಕ್ಷಕ, ಶಿಕ್ಷಕೇತರ ಸಿಬ್ಬಂದಿ ವರ್ಗದವರಿಗೆ ಮತ್ತು ಪೋಷಕರಿಗೆ ಅಭಿನಂದನೆಗಳನ್ನು ತಿಳಿಸಿದ್ದು, ಎಲ್ಲಾ ವಿದ್ಯಾರ್ಥಿಗಳಿಗೆ ಅವರ ಮುಂದಿನ ಭವಿಷ್ಯಕ್ಕೆ ಶುಭ ಹಾರೈಸಿದ್ದಾರೆ.



ಭವ್ಯ(581)



ಅಮೃತ (563)



ಪ್ರೀತಮ್ (552)

ಶ್ರೀಸಿದ್ದಪ್ಪಾಜಿ ದೇಗುಲ ಉದ್ಘಾಟನೆ

ಮೂಗೂರು, ಮೇ 25– ಸಮೀಪದ ಹೊಸಹಳ್ಳಿ ಮೋಳೆ ಗ್ರಾಮದಲ್ಲಿ ನೂತನ ಶ್ರೀಸಿದ್ದಪ್ಪಾಜಿ ದೇಗುಲವನ್ನು ರಾಜ ಬೊಪ್ಪೇಗೌಡನಪುರದ ಸಂಸ್ಥಾನ ಮಠದ ಶ್ರೀಜ್ಞಾನಾನಂದ ಚೆನ್ನರಾಜೇ ಅರಸ್ ಸ್ವಾಮೀಜಿ ಲೋಕಾರ್ಪಣೆಗೊಳಿಸಿದರು.

ಇದಕ್ಕೂ ಮುನ್ನ ಗ್ರಾಮದ ಮುಖಂಡರು ಮಂಟೇಸ್ವಾಮಿಯ ನೀಲಗಾರರು ಹಾಗೂ ಭಕ್ತರು ಗ್ರಾಮದ ಹನುಮ ದೇಗುಲದ ಬಳಿ ಜಮಾಯಿಸಿ ಮಠದ ಶ್ರೀಜ್ಞಾನಾನಂದ ಚೆನ್ನರಾಜೇ ಅರಸ್ ಸ್ವಾಮೀಜಿ ಅವರನ್ನು ದಾರಿಯುದ್ದಕ್ಕೂ ಭಕ್ತರು ಹೂ ಚೆಲ್ಲಿ ಅದ್ದೂರಿ ಸ್ವಾಗತ ಕೋರಿದರು.

ನಂತರ ಸಿದ್ದಪ್ಪಾಜಿ ದೇಗುಲ ಬಳಿಯ ಯಾಗ ಶಾಲೆಯ ಕಳಸ ಆರಾಧನೆಗೆ ಪೂಜೆ ಸಲ್ಲಿಸಿ ದೇಗುಲ ಗೋಪುರಕ್ಕೆ ಕಳಸ ಪ್ರತಿಷ್ಠಾಪನೆ ಮಾಡಿದರು. ಗ್ರಾಮಸ್ಥದ ನೀಲಗಾರರ (ದೇವಗುಡ್ಡರಿಂದ ದೇವಾಲಯದ ರಾಜಗೋಪುರ ಕಳಸಕ್ಕೆ ಕುಂಭಾಭಿಷೇಕ ಮಾಡಿದರು.

ಮಧ್ಯಾಹ್ನ 12.15 ರ ವೇಳೆಗೆ ದೇವಾಲಯದಲ್ಲಿ ಮಠದ ಶ್ರೀಯವರು ವಿಶೇಷ ಪೂಜೆ ಸಲ್ಲಿಸಿ ಮಹಾ ಮಂಗಳಾರತಿ ನೆರವೇರಿಸಿದ ಬಳಿಕ ನೆರೆದಿದ್ದ ಭಕ್ತರಿಗೆ ಆಶೀರ್ವಚನ ನೀಡಿ ಶುಭ ಹಾರೈಸಿದರು. ಗ್ರಾಮದಲ್ಲಿ ಅನ್ನ ಸಂತರ್ಪಣೆ ನಡೆಯಿತು. ಈ ವೇಳೆ ಗ್ರಾಮದ ಯಜಮಾನರು, ಮುಖಂಡರು, ಯುವಕ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.



ದೇವಾಲಯವನ್ನು ಶ್ರೀಜ್ಞಾನಾನಂದ ಚೆನ್ನರಾಜೇ ಅರಸ್ ಸ್ವಾಮೀಜಿ ಲೋಕಾರ್ಪಣೆಗೊಳಿಸಿದರು.

ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟನೆ



ನಂಜನಗೂಡು, ಮೇ 25– ಜುಬಿಲಿ ಯಂಟ್ ಕಾರ್ಖಾನೆಯ ಸಿಎಸ್‌ಆರ್ ಅನುದಾನದಲ್ಲಿ ತಾಲೂಕಿನ ಕತ್ವಾಡಿಪುರ ಹಾಗೂ ನಗರದ ಚಾಮಲಾಪುರಹುಂಡಿ ಬಡಾವಣೆಯಲ್ಲಿ ತಲಾ 8 ಲಕ್ಷ ವೆಚ್ಚದಲ್ಲಿ ನೂತನವಾಗಿ ನಿರ್ಮಾಣವಾಗಿರುವ ಶುದ್ಧ ನೀರಿನ ಘಟಕವನ್ನು ಶಾಸಕ ದರ್ಶನ್ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಕಾರ್ಖಾನೆ ಲಾಭಾಂಶದ ಸಿಎಸ್‌ಆರ್ ನಿಧಿಯಲ್ಲಿ ತಾಲೂಕಿನ ಕತ್ವಾಡಿಪುರ ಗ್ರಾಮಸ್ಥರ ಬೇಡಿಕೆಯಂತೆ ಶುದ್ಧ ನೀರಿನ ಘಟಕ ನಿರ್ಮಿಸಲಾಗಿದೆ. ಇದರಿಂದ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಯಲಿದೆ. ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಜುಬಿಲಿಯಂಟ್ ಕಾರ್ಖಾನೆ ಹಿಂದಿನಿಂದಲೂ ಸಾಮಾಜಿಕ ಸೇವಾ ಮನೋಭಾವ ಅಳವಡಿಸಿಕೊಂಡು ಸುತ್ತಮುತ್ತಲಿನ ಗ್ರಾಮಗಳಿಗೆ ಸೇವೆ ಒದಗಿಸುತ್ತಿದೆ. ತಾಲೂಕಿನ ಕಲ್ಲಹಳ್ಳಿ ಗ್ರಾಮದಲ್ಲಿ ಸರ್ಕಾರಿ ಶಾಲೆಯನ್ನು ಖಾಸಗಿ ಶಾಲೆಗಳಿಗೆ ಸೆಡ್ಡು ಹೊಡೆಯುವಂತೆ ಉನ್ನತೀಕರಿಸಿದ್ದಾರೆ. ಜೊತೆಗೆ ಸುಮಾರು 8 ಕಡೆಗಳಲ್ಲಿ ಶುದ್ಧ ನೀರು ಘಟಕ ಸ್ಥಾಪನೆ ಮಾಡಿದ್ದಾರೆ. ಕತ್ವಾಡಿಪುರ ಗ್ರಾಮಸ್ಥರು ಕಾರ್ಖಾನೆಯ ಸಿಎಸ್‌ಆರ್ ನಿಧಿಯಿಂದ ರಸ್ತೆ ಮತ್ತು ಚರಂಡಿ ನಿರ್ಮಿಸುವಂತೆ ಮನವಿ ಮಾಡಿದ್ದು, ಕಾರ್ಖಾನೆಯವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದರು.

ಈ ವೇಳೆ ಮಾಜಿ ಶಾಸಕ ಕೇಶವಮೂರ್ತಿ, ನಗರಸಭಾಧ್ಯಕ್ಷ ಶ್ರೀಕಂಠಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ಮುಖಂಡರಾದ ರಾಜೇಶ್, ಶಂಕರಪ್ಪ, ಕಾರ್ಖಾನೆ ವ್ಯವಸ್ಥಾಪಕರಾದ ಸುಬ್ರಹ್ಮಣ್ಯ, ಪ್ರದೀಪ್, ದೀಪಕ್, ವಿದ್ಯಾ ಸಾಗರ್, ರಘು, ಚಂದ್ರು ಸಿದ್ದರಾಜು ಸೇರಿದಂತೆ ಹಲವರಿದ್ದರು.

ಸಿಸಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ

ಸರಗೂರು, ಮೇ 25– ತಾಲೂಕಿನ ಕಿತ್ತೂರು(ತೆರಣಿಮುಂಟಿ) ಗ್ರಾಮದ ಅಭಿವೃದ್ಧಿಗೆ ಒತ್ತು ನೀಡಲಾಗುವುದು ಎಂದು ಶಾಸಕ ಅನಿಲ್ ಭರವಸೆ ನೀಡಿದರು.

ತಾಲೂಕಿನ ಕಿತ್ತೂರು(ತೆರಣಿಮುಂಟಿ) ಗ್ರಾಮದಲ್ಲಿ ನಡೆದ ಜನಸಂಪರ್ಕ ಸಭೆ ಹಾಗೂ 40 ಲಕ್ಷ ರೂ. ವೆಚ್ಚದ ಸಿಸಿ ರಸ್ತೆಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಕ್ಷೇತ್ರದ ಪ್ರತಿ ಗ್ರಾಮಗಳ ಅಭಿವೃದ್ಧಿಗೆ ಸಾಕಷ್ಟು ಅನುದಾನ ನೀಡಲಾಗಿದ್ದು, ಆ ಪೈಕಿ ಸಿಸಿ ರಸ್ತೆ ಚರಂಡಿ, ಭವನ ನಿರ್ಮಾಣ ಸೇರಿದಂತೆ ಹತ್ತಾರು ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಂಡು ಜನಪರ ಕೆಲಸ ಮಾಡಲಾಗುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೋಟೆ, ಸರಗೂರು ತಾಲೂಕಿನ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡಲಿದ್ದು, ಮುಂದಿನ ದಿನಗಳಲ್ಲಿ ಎರಡೂ ತಾಲೂಕುಗಳ ಅಭಿವೃದ್ಧಿಗೆ ಶ್ರಮಿಸಲಾಗುವುದು ಎಂದರು.

ಇದೇ ವೇಳೆ ಗ್ರಾಮಸ್ಥರ ಅಹವಾಲು ಸ್ವೀಕರಿಸಿದ ಶಾಸಕ ಅನಿಲ್ ಸಮಸ್ಯೆಗಳನ್ನು ಶೀಘ್ರ ಇತ್ಯರ್ಥ ಪಡಿಸಲು ಆಯಾ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಅಲ್ಲದೇ ಕ್ಷೇತ್ರದ ಇನ್ನುಳಿದ ಕೆಲವು ಗ್ರಾಮಗಳಲ್ಲಿ ಆಗಬೇಕಿರುವ ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಮಾಡಲು ಮುಂದಾಗುತ್ತೇನೆ ಎಂದರು.



ಸಿಸಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಅನಿಲ್ ಗುದ್ದಲಿ ಪೂಜೆ ನೆರವೇರಿಸಿದರು.

ಯೂತ್ ಕಾಂಗ್ರೆಸ್ ಅಧ್ಯಕ್ಷ ಶಿವರಾಜು ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಡವರ ಪರವಾಗಿದ್ದು, ಐದು ಗ್ಯಾರಂಟಿಗಳನ್ನು ಸಮರ್ಪಕವಾಗಿ ಜಾರಿಗೊಳಿಸಿದ್ದಾರೆ. ರಾಜ್ಯದ ಜನತೆ ಇವುಗಳನ್ನು ಸದ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಅಲ್ಲದೇ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಿರುವ ಶಾಸಕ ಅನಿಲ್ ಕೈ ಅನ್ನು ಪ್ರತಿಯೊಬ್ಬರು ಬಲ ಪಡಿಸಬೇಕು ಎಂದರು.


ಈ ವೇಳೆ ತಹಸೀಲ್ದಾರ್ ಮೋಹನಕುಮಾರಿ, ಇಓ ಪ್ರೇಮ್‌ಕುಮಾರ್, ಸಿಪಿಐ ಪ್ರಸನ್ನಕುಮಾರ್, ಸರ್ವೇ ನಾಗರಾಜು, ಎಇಇ ನಾಗೇಶ್, ಮೈಮುಲ್ ನಿರ್ದೇಶಕ ಕೆ.ಈರೇಗೌಡ, ಜಿಪಂ ಮಾಜಿ ಸದಸ್ಯ ಪಿ.ರವಿ, ಕುರುಬ ಸಮಾಜದ ತಾಲೂಕು ಅಧ್ಯಕ್ಷ ಎಂ.ಬಿ. ಆನಂದ್, ಸೌಮ್ಯ, ಬಿದರಹಳ್ಳಿ ಗ್ರಾಪಂ ಅಧ್ಯಕ್ಷೆ ನಾಗರತ್ನ, ಉಪಾಧ್ಯಕ್ಷ ವಿಜಯ್‌ಕುಮಾರ್ ಹಾಗೂ ಸದಸ್ಯರು, ಮುಖಂಡ ಸೀತಾರಾಂ, ವನಸಿರಿ ಉಮೇಶ್, ಗ್ರಾಮದ ಎಲ್ಲಾ ಯಜಮಾನರು, ಮುಖಂಡರು, ವಿವಿಧ ಇಲಾಖಾಧಿಕಾರಿಗಳು ಇತರರಿದ್ದರು.

ಶಾಸಕ ದರ್ಶನ್‌ಗೆ ಸನ್ಮಾನ



ನಂಜನಗೂಡು ತಾಲೂಕಿನ ದುಗ್ಗಹಳ್ಳಿ ಗ್ರಾಪಂ ನೂತನ ಅಧ್ಯಕ್ಷ ಬಿ.ಶಂಕರ್ ಅವರು ಶಾಸಕ ದರ್ಶನ್ ಅವರನ್ನು ಸನ್ಮಾನಿಸಿದರು. ಈ ವೇಳೆ ಜಿಲ್ಲಾ ಕನಕದಾಸ ನೌಕರರ ಸಂಘದ ಅಧ್ಯಕ್ಷ ಜವರೇಗೌಡ, ತಾಪಂ ಮಾಜಿ ಅಧ್ಯಕ್ಷ ತಮ್ಮಣ್ಣೇಗೌಡ, ಚಂದನ್‌ಗೌಡ ಇದ್ದರು.

ಎಂ.ಎನ್.ವೆಂಕಟಕೃಷ್ಣನ್ ನಿಧನ



ಹೆಚ್.ಡಿ.ಕೋಟೆ, ಮೇ 25– ತಾಲೂಕಿನ ಮಗ್ಗೆ ಗ್ರಾಮದ ನಿವಾಸಿ ಹಾಗೂ ಬೀಚನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನಿವೃತ್ತ ಮುಖ್ಯ ಶಿಕ್ಷಕ ಎಂ.ಎನ್.ವೆಂಕಟಕೃಷ್ಣನ್ (84) ಮೈಸೂರಿನ ವಿದ್ಯಾರಣ್ಯಪುರಂನಲ್ಲಿ ಭಾನುವಾರ ಬೆಳಗ್ಗೆ ನಿಧನರಾದರು. ಮೃತರು ನಾಲ್ವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೈಸೂರಿನಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಐಪಿಎಲ್ ಹಂಗಾಮ

ಹೆನ್ರಿಕ್ ಕ್ಲಾಸೆನ್ ಶತಕ: ಹೈದರಾಬಾದ್‌ಗೆ ಭರ್ಜರಿ ಜಯ



ನವದೆಹಲಿ, ಮೇ 25– ಹೆನ್ರಿಕ್ ಕ್ಲಾಸೆನ್ ಶತಕದ ನೆರವಿನಿಂದ ಸನ್ ರೈಸರ್ಸ್ ಹೈದರಾಬಾದ್ ಕೋಲ್ಕತ್ತಾ ನೈಟ್ ರೈಡರ್ಸ್ ವಿರುದ್ಧ 110 ರನ್‌ಗಳ ಅಮೋಘ ಜಯ ಸಾಧಿಸಿದೆ.

ಈ ಗೆಲುವಿನೊಂದಿಗೆ ಹೈದರಾಬಾದ್ ಟೂರ್ನಿಗೆ ವಿದಾಯ ಹೇಳಿದರೆ, ಕೋಲ್ಕತ್ತಾ ನೈಟ್ ರೈಡರ್ಸ್ ಹೀನಾಯ ಸೋಲು ಕಂಡು ನಿರಾಸೆಯಿಂದ ಹೊರ ನಡೆದಿದೆ.

ಇಲ್ಲಿನ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಹೈದರಾಬಾದ್ 20 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 278 ರನ್ ಗಳಿಸಿತು. 279 ರನ್ ಗುರಿ ಬೆನ್ನಟ್ಟಿದ ಕೆಕೆಆರ್ 18.4 ಓವರ್‌ಗಳಲ್ಲಿ 168 ರನ್‌ಗಳಿಗೆ ಸರ್ವಪತನ ಕಂಡಿತು.

ಬೃಹತ್ ಮೊತ್ತ ಬೆನ್ನತ್ತಿದ ಕೆಕೆಆರ್ ಆರಂಭದಲ್ಲೇ ಪ್ರಮುಖ ವಿಕೆಟ್‌ಗಳನ್ನು ಕಳೆದುಕೊಂಡಿತು. ಅಗ್ರ ಕ್ರಮಾಂಕದ ಬ್ಯಾಟರ್‌ಗಳ ವೈಫಲ್ಯದಿಂದಾಗಿ ಕೆಕೆಆರ್ ಹೀನಾಯ ಸೋಲಿಗೆ ತುತ್ತಾಯಿತು. ಕೋಲ್ಕತ್ತಾ ಪರ ಕ್ವಿಂಟನ್ ಡಿ ಕಾಕ್ 9, ಸುನಿಲ್ ನರೈನ್ 31, ಅಜಿಂಕ್ಯಾ ರಹಾನೆ 15, ಅಂಗ್‌ಕ್ರಿಶ್ ರಘುವಂಶಿ 14, ರಿಂಕು ಸಿಂಗ್ 9, ರಮಣ್‌ದೀಪ್ ಸಿಂಗ್ 13, ಮನೀಶ್ ಪಾಂಡೆ 37 ರನ್, ಹರ್ಷಿತ್ ರಾಣಾ 34 ರನ್ ಗಳಿಸಿದರು. ಹೈದರಾಬಾದ್ ಪರ ಇಶಾನ್ ಮಲಿಂಗಾ, ಹರ್ಷ್ ದುಬೆ ಹಾಗೂ ಜಯದೇವ್ ಉನಾದ್ಕಟ್ ತಲಾ 3 ವಿಕೆಟ್ ಕಬಳಿಸಿದರು.

ಇದಕ್ಕೂ ಮುನ್ನಾ ಮೊದಲು ಬ್ಯಾಟಿಂಗ್ ಮಾಡಿದ ಸನ್ ರೈಸರ್ಸ್ ಪರ ಅಭಿಷೇಕ್ ಶರ್ಮಾ 32 ರನ್, ಟ್ರಾವಿಸ್ ಹೆಡ್ 40 ಎಸೆತಗಳಲ್ಲಿ ತಲಾ 6 ಸಿಕ್ಸರ್, ಬೌಂಡರಿ ಒಳಗೊಂಡ 76, ಇಶನ್ ಕಿಶನ್ 29, ಹೆನ್ರಿಕ್ ಕ್ಲಾಸೆನ್ 39 ಎಸೆತಗಳಿಗೆ 7 ಬೌಂಡರಿ, 9 ಸಿಕ್ಸ್ ಒಳಗೊಂಡ 105 ಹಾಗೂ ಅನಿಕೇತ್ ವರ್ಮಾ 12 ರನ್ ಗಳಿಸಿ ಅಜೇಯರಾಗಿ ಉಳಿದರು.

ಕೋಲ್ಕತ್ತಾ ಪರ ಸುನಿಲ್ ನರೈನ್ 2, ವೈಭವ್ ಅರೋರಾ 1 ವಿಕೆಟ್ ಪಡೆದರು. ಹೆನ್ರಿಕ್ ಕ್ಲಾಸೆನ್ ಪಂದ್ಯ ಪುರುಷೋತ್ತಮ ಪ್ರಶಸ್ತಿ ಪಡೆದರು.

ಗೆಲುವಿನೊಂದಿಗೆ ಟೂರ್ನಿಗೆ ಸಿಎಸ್‌ಕೆ ವಿದಾಯ

ಅಹಮದಾಬಾದ್, ಮೇ 25– ಸಿಡಿಲಬ್ಬರದ ಬ್ಯಾಟಿಂಗ್, ಸಂಘಟಿತ ಬೌಲಿಂಗ್ ದಾಳಿ ನೆರವಿನಿಂದ ಚೆನ್ನೈ ಸೂಪರ್ ಕಿಂಗ್ಸ್, ಗುಜರಾತ್ ಟೈಟಾನ್ಸ್ ವಿರುದ್ಧ 83 ರನ್‌ಗಳ ಭರ್ಜರಿ ಗೆಲುವು ಸಾಧಿಸಿದೆ.

ಇದರೊಂದಿಗೆ ತನ್ನ ಕೊನೆಯ ಪಂದ್ಯವಾಡಿದ ಸಿಎಸ್‌ಕೆ ಅದ್ಭುತ ಗೆಲುವಿನೊಂದಿಗೆ 18ನೇ ಆವೃತ್ತಿಗೆ ವಿದಾಯ ಹೇಳಿದೆ. ಇನ್ನೂ ಲೀಗ್ ಸುತ್ತಿನ ಕೊನೆ ಪಂದ್ಯವನ್ನಾಡಿದ ಗುಜರಾತ್ ಟೈಟಾನ್ಸ್ ಹೀನಾಯ ಸೋಲಿನಿಂದ ನಂ.1 ಪಟ್ಟ ಕಳೆದುಕೊಳ್ಳುವ ಆತಂಕದಲ್ಲಿದೆ.

ಈಗಾಗಲೇ ಗುಜರಾತ್ ಟೈಟಾನ್ಸ್, ಪಂಜಾಬ್ ಕಿಂಗ್ಸ್, ಆರ್‌ಸಿಬಿ ಮತ್ತು ಮುಂಬೈ ಇಂಡಿಯನ್ಸ್ ಪ್ಲೇ ಆಫ್ ಪ್ರವೇಶಿಸಿದ್ದು, 4 ತಂಡಗಳ ನಡುವೆ ನಂ.1 ಪಟ್ಟಕ್ಕಾಗಿ ಹಣಾಹಣಿ ನಡೆಯುತ್ತಿದೆ. ಸದ್ಯ 14 ಪಂದ್ಯಗಳಲ್ಲಿ 9 ಗೆಲುವಿನೊಂದಿಗೆ 18 ಅಂಕದೊಂದಿಗೆ ಟೈಟಾನ್ಸ್ ಅಗ್ರಸ್ಥಾನದಲ್ಲಿದೆ. ಉಳಿದ 3 ತಂಡಗಳಿಗೆ ಇನ್ನೂ ಒಂದು ಪಂದ್ಯ ಬಾಕಿ ಇರುವ ಕಾರಣ ಗುಜರಾತ್‌ಗೆ ನಂ.1 ಸ್ಥಾನ ತಪ್ಪುವ ಆತಂಕವಿದೆ.



ಒಂದು ವೇಳೆ ಮುಂಬೈ ಇಂಡಿಯನ್ಸ್ ಮುಂದಿನ ಪಂದ್ಯದಲ್ಲಿ ಪಂಜಾಬ್ ವಿರುದ್ಧ ಸೋತು, ಆರ್‌ಸಿಬಿ ಲಕ್ನೋ ವಿರುದ್ಧ ಉತ್ತಮ ರನ್ ರೇಟ್‌ನಿಂದ ಗೆದ್ದರೆ, ಆರ್‌ಸಿಬಿಯೇ ನಂ.1 ಪಟ್ಟಕ್ಕೇರುವ ಅವಕಾಶವಿದೆ. ಇಲ್ಲದಿದ್ದರೆ, ಮೊದಲೆರಡು ಸ್ಥಾನಗಳು ಮುಂಬೈ ಮತ್ತು ಪಂಜಾಬ್ ಕಿಂಗ್ಸ್ ಪಾಲಾಗುವ ಸಾಧ್ಯತೆಯಿದೆ.

ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಚೆನ್ನೈ 20 ಓವರ್‌ಗಳಿಗೆ 5 ವಿಕೆಟ್ ನಷ್ಟಕ್ಕೆ 230 ರನ್ ಕಲೆ ಹಾಕಿತು. 231 ರನ್‌ಗಳ ಬೃಹತ್ ಮೊತ್ತದ ಗುರಿ ಬೆನ್ನಟ್ಟಿದ ಗುಜರಾತ್ 18.3 ಓವರ್‌ಗಳಿಗೆ 147 ರನ್‌ಗಳಿಗೆ ಸರ್ವಪತನ ಕಂಡಿತು.

ಗುಜರಾತ್ ಪರ ಇನ್ನಿಂಗ್ಸ್ ಆರಂಭಿಸಿದ ಸಾಯಿ ಸುದರ್ಶನ್ 41, ಶುಭಮನ್ ಗಿಲ್ 13, ಶಾರುಕ್ ಖಾನ್ 19, ರಾಹುಲ್ ತೆವಾಟಿಯಾ 14, ರಶೀದ್ ಖಾನ್ 12, ಅರ್ಷದ್ ಖಾನ್ 20 ರನ್ ಗಳಿಸಿದರು. ಸಿಎಸ್‌ಕೆ ಪರ ಅನ್ಶುಲ್ ಕಾಂಬೋಜ್, ನೂರ್ ಅಹಮ್ಮದ್ ತಲಾ 3, ರವೀಂದ್ರ ಜಡೇಜಾ 2, ಖಲೀಲ್ ಅಹಮ್ಮದ್, ಮತೀಶ ಪತಿರಾಣ ತಲಾ ಒಂದೊಂದು ವಿಕೆಟ್ ಪಡೆದರು.

ಇದಕ್ಕೂ ಮುನ್ನಾ ಮೊದಲು ಬ್ಯಾಟಿಂಗ್ ಮಾಡಿದ ಸಿಎಸ್‌ಕೆ ಪರ ಆಯುಷ್ ಮ್ಹಾತ್ರೆ ಹಾಗೂ ಡೆವೊನ್ ಕಾನ್ವೆ ಮೊದಲ ವಿಕೆಟ್‌ಗೆ 44 ರನ್ ಜೊತೆಯಾಟವಾಡಿದರು. ಈ ವೇಳೆ ಆಯುಷ್ 17 ಎಸೆತಗಳಲ್ಲಿ ತಲಾ 3 ಸಿಕ್ಸರ್, ಬೌಂಡರಿ ಒಳಗೊಂಡ 34 ರನ್ ಗಳಿಸಿದರೇ, ಡೆವೊನ್ ಕಾನ್ವೆ 52 ರನ್ ಗಳಿಸಿ ನಿರ್ಗಮಿಸಿದರು. ನಂತರ ಬಂದ ಉರ್ವಿಲ್ ಪಟೇಲ್ 19 ಎಸೆತಗಳಿಗೆ 37, ಶಿವಂ ದುಬೆ 17, ರವೀಂದ್ರ ಜಡೇಜಾ 21 ರನ್ ಗಳಿಸಿದರು. ಮತ್ತೊಂದೆಡೆ ಡೆವಾಲ್ಡ್ ಬ್ರೇವಿಸ್ 23 ಎಸೆತಗಳಿಗೆ 4 ಬೌಂಡರಿ, 5 ಸಿಕ್ಸರ್ ಒಳಗೊಂಡ 57 ರನ್ ಗಳಿಸಿ ನಿರ್ಗಮಿಸಿದರು. ಗುಜರಾತ್ ಪರ ಪ್ರಸಿದ್ಧ್ ಕೃಷ್ಣ 2, ಸಾಯಿ ಕಿಶೋರ್, ರಶೀದ್ ಖಾನ್ ಹಾಗೂ ಶಾರುಖ್ ಖಾನ್ ತಲಾ ಒಂದು ವಿಕೆಟ್ ಪಡೆದರು. ಡೆವಾಲ್ಡ್ ಬ್ರೇವಿಸ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ತಂಡದ ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಗುಜರಾತ್	14	9	5	0	18
ಪಂಜಾಬ್	13	8	4	1	17
ಬೆಂಗಳೂರು	13	8	4	1	17
ಮುಂಬೈ	13	8	5	0	16
ಡೆಲ್ಲಿ	14	7	6	1	15
ಹೈದರಾಬಾದ್	14	6	7	1	13
ಲಕ್ನೋ	13	6	7	0	12
ಕೊಲ್ಕತ್ತಾ	14	5	7	2	12
ರಾಜಸ್ಥಾನ್	14	4	10	0	8
ಚೆನ್ನೈ	14	4	10	0	8

ಇಂದಿನ ಪಂದ್ಯ

ಪಂಜಾಬ್ ಕಿಂಗ್ಸ್
V/S
ಮುಂಬೈ ಇಂಡಿಯನ್ಸ್

ಸಮಯ: ಸಂಜೆ 7.30

ಸ್ಥಳ : ಸವಾಯಿ ಮಾನ್‌ಸಿಂಗ್ ಕ್ರೀಡಾಂಗಣ, ಜೈಪುರ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಾಮನ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಏಸ್ (ತ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಧಡ್ಕನ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕಿರಿಕ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಟಕೀಲಾ (ಕ)	4 ಪ್ರದರ್ಶನಗಳು
ರಾಜಕಮಲ್	
ಡೆವಿಲ್ಸ್ ಡಬಲ್ ನೆಕ್ಸ್ಟ್ ಲೆವಲ್ (ತ)	4 ಪ್ರದರ್ಶನಗಳು
ಸಂಗಂ	
ಸೈನೈಡ್ (ಕ)	4 ಪ್ರದರ್ಶನಗಳು
ಲಿಡೋ	
ಯುದ್ಧಕಾಂಡ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್ ದೂ : 4240422/4241800

ಸ್ಕ್ರೀನ್ 1	ರೆಟ್ರೋ (ತ): ಬೆ.9.40ಕ್ಕೆ, ಮ.1ಕ್ಕೆ, ರಾ.7ಕ್ಕೆ, ಥಂಡರ್‌ಬೋಲ್ಟ್ಸ್ (3ಡಿ)(ಇಂ): ಸಂ.4.20ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಥಂಡರ್‌ಬೋಲ್ಟ್ಸ್ (3ಡಿ)(ಇಂ): ಬೆ.10.25ಕ್ಕೆ, ಯುದ್ಧಕಾಂಡ 2 (ಕ): ಮ.1.05ಕ್ಕೆ, ಸಂ.4.05ಕ್ಕೆ, ತುಡಾರಂ (ಮ): ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ಹಿಟ್ ದಿ ಥರ್ಡ್ ಕೇಸ್ (ತೆ): ಬೆ.10ಕ್ಕೆ, ಮ.3.55ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ಟೂರಿಸ್ಟ್ ಫ್ಯಾಮಿಲಿ (ತ): ಮ.1.10ಕ್ಕೆ.
ಸ್ಕ್ರೀನ್ 4	ಪಪ್ಪಿ (ಕ): ಬೆ.10.30ಕ್ಕೆ, ರೈಡ್ 2 (ಹಿಂ): ಮ.1ಕ್ಕೆ, ರಾ.7.25ಕ್ಕೆ, ರಾ.10.25ಕ್ಕೆ, ರೆಟ್ರೋ (ತ): ಸಂ.4.05ಕ್ಕೆ.

ಐನಾಕ್ಸ್ ಮೂವೀಸ್ ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ ದೂ : 0821–2973519

ಸ್ಕ್ರೀನ್ 1	ಪ್ರೀತಿಯ ಹುಚ್ಚ (ಕ): ಬೆ.11ಕ್ಕೆ, ರಿಕ್ಷಾ ಚಾಲಕ (ಕ): ಮ.1.35ಕ್ಕೆ, ಕೋರ (ಕ): ಸಂ.6.35ಕ್ಕೆ, ಖದೀಮ (ಕ): ಸಂ.6.35ಕ್ಕೆ, ಟೆನ್ ಅವರ್ಸ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ಯುದ್ಧಕಾಂಡ 2 (ಕ): ಮ.1ಕ್ಕೆ, ಸಂ.6.35ಕ್ಕೆ, ಒಡೆಲ್ಲಾ (ತೆ): ಮ.3.45ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 3	ವೀರ ಚಂದ್ರಹಾಸ (ಕ): ಮ.1ಕ್ಕೆ, ಮ.3.55ಕ್ಕೆ, ಗುಡ್ ಬ್ಯಾಡ್ ಅಗ್ಲಿ (ತ): ಸಂ.6.50ಕ್ಕೆ, ರಾ.9.30ಕ್ಕೆ
ಸ್ಕ್ರೀನ್ 4	ಯುದ್ಧಕಾಂಡ 2 (ಕ): ಬೆ.10.50ಕ್ಕೆ, ವಾಮನ (ಕ): ಮ.1.35ಕ್ಕೆ, ಸಂ.4.10ಕ್ಕೆ, ಅರ್ಜುನ್ s/o ವೈಜಯಂತಿ (ತೆ): ಸಂ.6.45ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್ ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಸಾರಿಗೆ ನೌಕರರ ಭವಿಷ್ಯ ನಿಧಿಗೆ 3110 ಕೋಟಿ ರೂ. ಪಾವತಿಸಲು ಒತ್ತಾಯ

ಮೈಸೂರು, ಮೇ 25(ಎಸ್‌ಪಿಎನ್)– ನಾಲ್ಕು ಸಾರಿಗೆ ನಿಗಮದ ನೌಕರರ ಭವಿಷ್ಯ ನಿಧಿಗೆ ಒಟ್ಟು 3110 ಕೋಟಿ ರೂ. (ಏಪ್ರಿಲ್ 2025 ಅಂತ್ಯದವರೆಗೆ) ಹಣ ಪಾವತಿಸುವಂತೆ ಕೆಎಸ್‌ಆರ್‌ಟಿಸಿ ಸ್ಟಾಫ್ ಅಂಡ್ ವರ್ಕರ್ಸ್ ಫೆಡರೇಷನ್ ಒತ್ತಾಯಿಸಿದೆ.

ಕೆಎಸ್‌ಆರ್‌ಟಿಸಿ 891 ಕೋಟಿ ರೂ., ಬಿಎಂಟಿಸಿ 958 ಕೋಟಿ ರೂ., ಎನ್‌ಡಬ್ಲ್ಯೂಕೆಆರ್‌ಟಿಸಿ 1,183 ಕೋಟಿ ರೂ., ಕೆಕೆಆರ್‌ಟಿಸಿ 76 ಕೋಟಿ ರೂ., ಸೇರಿದಂತೆ ಒಟ್ಟು 3,110 ಕೋಟಿ ರೂ. ಗಳನ್ನು ಬಾಕಿ ಉಳಿಸಿಕೊಂಡಿದೆ. ಭವಿಷ್ಯ ನಿಧಿ ತಿದ್ದುಪಡಿ ನಿಯಮಗಳ ಪ್ರಕಾರ ನೌಕರರ ಭವಿಷ್ಯ ನಿಧಿ ಹಣವನ್ನು ಟ್ರಸ್ಟ್‌ಗೆ ಕಟ್ಟುವುದನ್ನು ವಿಳಂಬ ಮಾಡಿದರೆ ಹೆಚ್ಚಿನ ಬಡ್ಡಿ (ಶೇ.37 ರವರೆಗೆ) ಹಾಗೂ ದಂಡವನ್ನು ಸ್ವಯಂಜನಿತವಾಗಿ ವಿಧಿಸಬಹುದು. ಜೊತೆಗೆ ಪದೇ ಪದೆ ಕಾನೂನು ಉಲ್ಲಂಘನೆ ಮಾಡಿದರೆ, ಕಾನೂನು ರೀತ್ಯಾ ಮೊಕದ್ದಮೆಯನ್ನು ದಾಖಲಿಸಬಹುದು.

ಹಾಗಾಗಿ ಕೂಡಲೇ ನಾಲ್ಕೂ ನಿಗಮಗಳ ಆಡಳಿತ ಮಂಡಳಿಗಳು ಕ್ರಮ ಕೈಗೊಂಡು ಕಾರ್ಮಿಕರ ಭವಿಷ್ಯ ನಿಧಿ ಹಣವನ್ನು ಟ್ರಸ್ಟ್‌ಗೆ ಕಟ್ಟಬೇಕೆಂದು ಒತ್ತಾಯಿಸುತ್ತೇವೆ ಎಂದರು.

ಬಾಕಿ ತುಟ್ಟಿಭತ್ಯೆ ಕೊಡಿ: 1.2.2022ರಿಂದ ಸರ್ಕಾರ ವಿಲೀನಗೊಳಿಸಿರುವ ತುಟ್ಟಿಭತ್ಯೆಯ (ಶೇ.31) ಅಂಶವನ್ನು ಅಂದಿನಿಂದಲೇ ಬೇಸಿಕ್ ಡಿಎ ಆಗಿ ಪರಿವರ್ತಿಸಬೇಕು. ಅದರ ಮೇಲಿನ ತುಟ್ಟಿಭತ್ಯೆ, ಎಚ್‌ಆರ್‌ಎ, ಸಿಸಿಎ ಮತ್ತು ಉಪಧವನ್ನು ಕೊಡಬೇಕೆಂದು ತಿಳಿಸಲಾಗಿತ್ತು ಅದೇ ರೀತಿ 1.7.2024ರಂದು ರಾಜ್ಯ ಸರ್ಕಾರಿ ನೌಕರರಿಗೆ ಘೋಷಿಸಿರುವ ತುಟ್ಟಿಭತ್ಯೆಯನ್ನು ಹಿಂಬಾಕಿ ಸಮೇತ ನಾಲ್ಕೂ ನಿಮಗಳ ಸಮಸ್ತ ನೌಕರರಿಗೂ ಕೊಡಬೇಕೆಂದು ಒತ್ತಾಯಿಸಿದ್ದಾರೆ.

ಆದರೆ, ರಾಜ್ಯ ಸರ್ಕಾರ ನಮ್ಮ ಬೇಡಿಕೆಯನ್ನು ಪರಿಗಣಿಸಿಲ್ಲ. ಈ ಕ್ರಮದಿಂದ 17.07.1989ರಂದು ಆದ ಕೈಗಾರಿಕಾ ಒಪ್ಪಂದದ ಕ್ಲಾಸ್ 5ರ ಪ್ರಕಾರ ಸಮಸ್ತ ನೌಕರರಿಗೂ ಕೊಡಬೇಕಾಗಿದೆ. ಕೂಡಲೇ ನಮ್ಮ ಈ ಬೇಡಿಕೆಗಳನ್ನು ಈಡೇರಿಸಬೇಕೆಂದು ಮತ್ತು ಕಾನೂನು ಬಾಹಿರವಾಗಿ ತಡೆ ಹಿಡಿದಿರುವ ಆಡಳಿತ ವರ್ಗದ ಕ್ರಮವನ್ನು ಹಿಂತೆಗೆದುಕೊಳ್ಳಬೇಕೆಂದು ರಾಜ್ಯಾಧ್ಯಕ್ಷ ಎಚ್.ವಿ. ಅನಂತ ಸುಬ್ಬರಾವ್ ಅವರು ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಎನ್‌ಡಬ್ಲ್ಯೂಕೆಆರ್‌ಟಿಸಿ, ಕೆಕೆಆರ್‌ಟಿಸಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೆ ಪತ್ರ ಬರೆದು ಒತ್ತಾಯಿಸಿದ್ದಾರೆ.

ಕೋವಿಡ್–19: ರಾಜ್ಯದಲ್ಲಿ ಭಾನುವಾರ 9 ಮಂದಿಗೆ ಪಾಸಿಟಿವ್, ಪ್ರಕರಣಗಳ ಸಂಖ್ಯೆ 47ಕ್ಕೆ ಏರಿಕೆ

ಬೆಂಗಳೂರು, ಮೇ 25– ರಾಜ್ಯದಲ್ಲಿ ಮತ್ತೆ ಕೊರೋನಾ ಉಲ್ಬಣಗೊಳ್ಳುವ ಆತಂಕ ಎದುರಾಗಿದ್ದು, ರಾಜ್ಯ ಸರ್ಕಾರ ಹಲವು ಮುಂಜಾಗ್ರತ ಕ್ರಮಗಳನ್ನು ಕೈಗೊಂಡಿದೆ. ಈ ಮಧ್ಯೆ ರಾಜ್ಯದಲ್ಲಿ ಕಳೆದ 24 ಗಂಟೆಯಲ್ಲಿ 9 ಮಂದಿಗೆ ಕೋವಿಡ್–19 ಪಾಸಿಟಿವ್ ದೃಢಪಟ್ಟಿದೆ. ಇದರೊಂದಿಗೆ ಸೋಂಕಿತರ ಸಂಖ್ಯೆ 47ಕ್ಕೆ ಏರಿಕೆಯಾಗಿದೆ. ರಾಜ್ಯದಲ್ಲಿ ಇಂದು 104 ಜನರನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗಿದ್ದು, ಆ ಪೈಕಿ 9 ಜನರಿಗೆ ಪಾಸಿಟಿವ್ ದೃಢಪಟ್ಟಿದೆ. ಒಟ್ಟು 47 ಸಕ್ರಿಯ ಪ್ರಕರಣಗಳಿದ್ದು, 46 ಮಂದಿ ಮನೆಯಲ್ಲಿಯೇ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ತಿಳಿಸಿದೆ.

ಮೈಸೂರು ಸ್ಯಾಂಡಲ್ ಸೋಪ್‌ಗೆ ತಮನ್ನಾ ರಾಯಭಾರಿ
ಮೈಸೂರು ಕನ್ನಡ ವೇದಿಕೆಯಿಂದ ಪ್ರತಿಭಟನೆ



ಮೈಸೂರು ಸ್ಯಾಂಡಲ್ ಸೋಪ್‌ಗೆ ರಾಯಭಾರಿಯಾಗಿ ನಟಿ ತಮನ್ನಾ ಅವರನ್ನು ಆಯ್ಕೆ ಮಾಡಿರುವುದನ್ನು ಖಂಡಿಸಿ ಮೈಸೂರು ಸ್ಯಾಂಡಲ್ ಸೋಪ್ ಮಾರಾಟ ಮಳಿಗೆ ಮುಂಭಾಗ ಮೈಸೂರು ಕನ್ನಡ ವೇದಿಕೆ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು.

ಮೈಸೂರು, ಮೇ25(ಜಿಎ)–ರಾಜ್ಯ ಸರ್ಕಾರ ಮೈಸೂರು ಸ್ಯಾಂಡಲ್ ಸೋಪ್‌ಗೆ ರಾಯಭಾರಿಯಾಗಿ ನಟಿ ತಮನ್ನಾ ಅವರನ್ನು ಆಯ್ಕೆ ಮಾಡಿರುವುದನ್ನು ಖಂಡಿಸಿ ಮೈಸೂರು ಮಾನಂದವಾಡಿ ರಸ್ತೆಯಲ್ಲಿರುವ ಮೈಸೂರು ಸಿಟಿ ಸರ್ಕಾರಿ ಶ್ರೀಗಂಧದೆಣ್ಣೆ ಕಾರ್ಖಾನೆ ಆವರಣದಲ್ಲಿರುವ ಮೈಸೂರು ಸ್ಯಾಂಡಲ್ ಸೋಪ್ ಮಾರಾಟ ಮಳಿಗೆ ಮುಂಭಾಗ ಮೈಸೂರು ಕನ್ನಡ ವೇದಿಕೆ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು.

ಕರ್ನಾಟಕಕ್ಕೆ ನಟಿ ತಮನ್ನಾ ಭಾಟಿಯಾ ಕೊಡುಗೆ ಏನು? ಮೈಸೂರು ಸ್ಯಾಂಡಲ್ ಸೋಪ್ ದೊಡ್ಡ ಸ್ಟಾರ್. ಈ ಸ್ಟಾರ್‌ನ ಮುಂದೆ ಆ ಸ್ಟಾರ್ ಯಾವ ಲೆಕ್ಕ ಶ್ರೀಗಂಧದ ನಾಡು ಮೈಸೂರು. ಈ ಶ್ರೀಗಂಧದಿಂದ ಸೋಪನ್ನು ತಯಾರಿಸ ಬೇಕೆಂದು ಕನಸು ಕಂಡು ನನಸಾಗಿ ಮಾಡಿ ಸಾವಿರಾರು ಜನಕ್ಕೆ ಉದ್ಯೋಗ ನೀಡಿದ ಆಶ್ರಯದಾತ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು. ಆದರೆ ಈಗ ಆ ಸೋಪಿನ ಲಾಭದ ಹಣವನ್ನು ಮೈಸೂರಿನ ಬಗ್ಗೆ ಪರಿವಿಲ್ಲದ, ಕನ್ನಡ ಭಾಷೆ ಗೊತ್ತಿಲ್ಲದ ಒಬ್ಬ ನಟಿ ಪಾಲಾಗುತ್ತಿದೆ ಎಂದರೆ ಸರ್ಕಾರ ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಆಡಳಿತ ಮಾಡುತ್ತಿದೆ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ಕನ್ನಡದ ನಟಿಯರಲ್ಲಿ ಸೌಂದರ್ಯಕ್ಕೆ ಕಮ್ಮಿ ಏನಿದೆ. ನಮ್ಮಲ್ಲಿರುವ ನಟಿಯರು ಟಾಲಿವುಡ್, ಬಾಲಿವುಡ್‌ನಲ್ಲಿ ಮಿನುಗುತ್ತಿದ್ದಾರೆ. ದೀಪಿಕಾ ಪಡುಕೋಣೆ, ನಿತ್ಯ ಮೆನನ್, ಶ್ರೀಲೀಲಾ ಇವರು ಬೇಡಿಕೆ ಇರುವ ನಟಿಯರು. ಇದಲ್ಲದೆ ಮಹಿಳಾ ಕ್ರೀಡಾಮಣಿಯಾದ ಒಲಂಪಿಕ್ಸ್, ಬ್ಯಾಡ್ಮಿಂಟನ್‌ನಲ್ಲಿ ಜಯಗಳಿಸಿ ಅರ್ಜುನ್ ಪ್ರಶಸ್ತಿ ಪಡೆದ ಅಶ್ವಿನಿ ಪೊನ್ನಪ್ಪರಂತಹ ಮಹನೀಯರು ಇದ್ದಾರೆ. ಇವರನ್ನು ಕಂಪನಿಯು ಜಾಹೀರಾತಿಗೆ ತೆಗೆದುಕೊಂಡಿದ್ದರೆ ಒಂದು ಅರ್ಥವಿರುತ್ತಿತ್ತು. ಇವರು ನಮ್ಮ ಮೈಸೂರು ಸ್ಯಾಂಡಲ್ ಸೋಪು ಎಂದು ಬಹಳ ಕಮ್ಮಿಯಲ್ಲಿ ಹಣವನ್ನು ತೆಗೆದುಕೊಳ್ಳುತ್ತಿದ್ದರು. ಹಿತ್ತಲು ಮದ್ದು ಮದ್ದಲ್ಲ ಅಂದ ಹಾಗೆ ಕಂಪನಿಯವರು ನಾಡು ನುಡಿ ಜಲ ಬಗ್ಗೆ ಅರಿವಿಲ್ಲದ ಬೆಡಗಿಗೆ ಮಣೆ ಹಾಕುತ್ತಿರುವುದು ಎಷ್ಟರಮಟ್ಟಿಗೆ ಸರಿ ಎಂದು ಪ್ರಶ್ನಿಸಿದರು.

ಈ ಪ್ರತಿಭಟನೆಯಲ್ಲಿ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ನಾಲಾ ಬೀದಿ ರವಿ, ಗುರುಬಸಪ್ಪ, ಗೋಪಿ, ಪ್ಯಾಲೆಸ್ ಬಾಬು, ಬೋಗಾದಿ ಸಿದ್ದೇಗೌಡ, ಸಿದ್ದಪ್ಪ ಎಲ್‌ಐಸಿ, ಗೋವಿಂದರಾಜು, ಸ್ವಾಮಿ, ಬಿಡಬಾಬು, ಹರೀಶ್, ಮಹದೇವಸ್ವಾಮಿ, ಮಾದಪ್ಪ, ರಮೇಶ್, ಶಿವು, ಸುನಿಲ್, ನಾಗರಾಜು, ಚಂದ್ರು, ಶಿವಪ್ಪ, ರಾಜು ಮಿಲ್ಸ್ರಿ, ಚಿನ್ನಪ್ಪ ಮತ್ತಿತರರು ಪಾಲ್ಗೊಂಡಿದರು.

ನವ್ಯಾ ಗೌಡಗೆ ಶೇ. 97 ಅಂಕ



ಮೈಸೂರು, ಮೇ 25– ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೂಟಗಳ್ಳಿಯ ಶ್ರೀ ರಾಮಕೃಷ್ಣ ವಿದ್ಯಾಕುಲ ಶಾಲೆಯ ವಿದ್ಯಾರ್ಥಿನಿ ನವ್ಯಾ ಎಂ.ಗೌಡ ಶೇ. 97 ಅಂಕ ಪಡೆಯುವ ಮೂಲಕ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಸಾಹಿತ್ಯದ ಮೂಲಕ ಸಮಾಜವನ್ನು ಸರಿದಾರಿಗೆ ತರುವ ಪ್ರಯತ್ನ ನಡೆಯುತ್ತಿದೆ

ಜಿಲ್ಲಾ ಉಸ್ತುವಾರಿ ಸಚಿವ ಡಾ.ಮಹದೇವಪ್ಪ ಅಭಿಪ್ರಾಯ

ಮೈಸೂರು, ಮೇ25(ಬಿಎಲ್‌ಯು)– ದಾರಿ ತಪ್ಪುತ್ತಿರುವ ಆಡಳಿತ, ರಾಜಕೀಯ ಅಸಮಾನತೆ, ಸೌಹಾರ್ದತೆಗೆ ಭಂಗ ತರುವ ಈ ಸನ್ನಿವೇಶದಲ್ಲಿ ಸಾಹಿತ್ಯದ ಮೂಲಕ ಸಮಾಜವನ್ನು ಸರಿದಾರಿಗೆ ತರುವ ಪ್ರಯತ್ನಗಳು ನಡೆದಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅಭಿಪ್ರಾಯಪಟ್ಟರು.

ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಸಭಾಂಗಣದಲ್ಲಿ ಇಂದು ವಿಸ್ಮಯ ಬಳಗ ಆಯೋಜಿಸಿದ್ದ ವಿಸ್ಮಯ 25 ಬೆಳ್ಳಿ ಬೆರಗು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿವಿಧತೆಗೆ ಧಕ್ಕೆ ತರುವ ರಾಜಕೀಯ ಸನ್ನಿವೇಶಗಳು ಕಂಡು ಬರುತ್ತಿದ್ದು, ಇಂತಹ ಸಂದರ್ಭದಲ್ಲಿ ಚಿಂತಕರು, ಸಾಹಿತಿಗಳು ಹೊಸ ಸಂಗ್ರಾಮದ ಮೂಲಕ ಸಮೃದ್ಧ ಭಾರತ ನಿರ್ಮಾಣ ಮಾಡಬೇಕು ಎಂದು ಕರೆ ನೀಡಿದರು.

ತಪ್ಪು ದಾರಿಯಲ್ಲಿ ಸಾಗುವವರನ್ನು ಸರಿದಾರಿಗೆ ಕರೆ ತರುವ ಬೌದ್ಧಿಕ ಶಕ್ತಿಗಳು ನಮ್ಮಲ್ಲಿದ್ದು, ಇವು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕು. ಸಂಶೋಧನೆ ಮೂಲಕ ನಾವು ಇತಿಹಾಸ ಅರಿಯಬೇಕು, ಸಂಶೋಧನೆ ಮಾಡದಿದ್ದರೆ ಇತಿಹಾಸ ತಿಳಿಯಲು ಸಾಧ್ಯವಿಲ್ಲ ಎಂದು ಡಾ.ಮಹದೇವಪ್ಪ ಅಭಿಪ್ರಾಯ ವ್ಯಕ್ತಪಡಿಸಿದರು.



ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಸಭಾಂಗಣದಲ್ಲಿ ಭಾನುವಾರ ವಿಸ್ಮಯ ಬಳಗ ಆಯೋಜಿಸಿದ್ದ ವಿಸ್ಮಯ 25 ಬೆಳ್ಳಿ ಬೆರಗು ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಿದರು.

ಸಮಾಜದಲ್ಲಿ ಒಡಕು ಮೂಡಿಸುತ್ತಿರುವ ಸಂದರ್ಭದಲ್ಲಿ ಎಲ್ಲರನ್ನು ಒಂದು ಮಾಡುವ ಶಕ್ತಿ ಇರುವುದು ಕಲೆಗೆ ಮಾತ್ರ ಎಂದು ಹಿರಿಯ ಸಾಹಿತಿ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಇದೇ ವೇಳೆ ಅಭಿಪ್ರಾಯಪಟ್ಟರು.

ಎಲ್ಲರೂ ಎಲ್ಲಾ ಸಂಬಂಧಗಳನ್ನು ಲಾಭದ ದೃಷ್ಟಿಯಿಂದ ನೋಡುವ ಕಾಲಘಟ್ಟದಲ್ಲಿ ಪ್ರೀತಿಯಿಂದ ನೋಡಿದರೆ ಬೇರೆಯದೇ ಲೋಕಕ್ಕೆ ಹೋಗಬಹುದು. ಪ್ರಸ್ತುತ ಪ್ರತಿಭೆ ಇದ್ದರೆ ಮಾತ್ರ ಸಾಲದು. ಮಾರುಕಟ್ಟೆ ಜ್ಞಾನ ಅತ್ಯವಶ್ಯಕವಾಗಿ ಬೇಕು. ಆಗಾದಾಗ ಮಾತ್ರ ಗುರಿ ಮುಟ್ಟಲು ಸಾಧ್ಯ ಎಂದು ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಹೇಳಿದರು.

ಈ ವೇಳೆ ಮಾತನಾಡಿದ ಖ್ಯಾತ ಚಲನಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಅವರು, ಪ್ರತಿಯೊಬ್ಬರು ಸಮಯವನ್ನು ಗೌರವಿಸಬೇಕು. ಆಗ ನಾವು ಅಂದುಕೊಂಡಿದ್ದನ್ನು ಸಾಧಿಸಲು ಸಾಧ್ಯವಾಗುತ್ತದೆ. ಆದರೆ ಅಸಾಧ್ಯವಾದದ್ದನ್ನು ಸಾಧ್ಯವಾಗಿಸುತ್ತೇವೆ ಎಂಬ ಒತ್ತಡದಲ್ಲಿ ಇರಬಾರದು. ಉಂಡು ಜೀರ್ಣಿಸಿಕೊಳ್ಳುವಷ್ಟು ಬದ್ಧತೆ ಹೊಂದಿರಬೇಕು ಎಂದು ಸಲಹೆ ನೀಡಿದರು.

ಇದೇ ವೇಳೆ ಮಾತನಾಡಿದ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು, ಸೃಜನಶೀಲ ಕಲಾವಂತಿಕೆ ಇರುವ ಪ್ರಕಾಶ್ ಚಿಕ್ಕಪಾಳ್ಯ ಅವರು ಪ್ರತಿಯೊಂದು ವೇದಿಕೆಗೂ ವಿಶಿಷ್ಟ ಹಾಗೂ ಅರ್ಥಪೂರ್ಣ ಸ್ವರೂಪ ನೀಡುತ್ತಾರೆ. ಕಲಾ ಕ್ಷೇತ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ತೊಡಗಿಸಿಕೊಂಡರೆ ಹೇಗೆ ಬೆಳೆಯಬಹುದು ಎಂಬುದನ್ನು ಪ್ರಕಾಶ್ ಚಿಕ್ಕಪಾಳ್ಯ ತೋರಿಸಿದ್ದಾರೆ ಎಂದು ಹೇಳಿದರು. ಈ ವೇಳೆ ಕಲಾವಿದ ಪ್ರಕಾಶ್ ಚಿಕ್ಕಪಾಳ್ಯ ಅವರನ್ನು ಹಲವು ಗಣ್ಯರು ಅಭಿನಂದಿಸಿದರು.

ಚಂದ್ರವನ ಆಶ್ರಮದ ಶ್ರೀ ತ್ರಿನೇತ್ರಾನಂದ ಶಿವಯೋಗಿ ಸ್ವಾಮೀಜಿ, ಕುಂದೂರು ಮಠದ ಡಾ.ಶರತ್ ಚಂದ್ರ ಸ್ವಾಮೀಜಿ, ಸ್ವರ್ಣ ನೃಸಿಂಹ ದತ್ತ ಸಾಯಿ ಪೀಠ ಸೇವಾ ಟ್ರಸ್ಟ್‌ನ ಶ್ರೀ ಅರ್ಜುನ ಅವಧೂತರು, ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್. ರಂಗಪ್ಪ, ವಿಶ್ರಾಂತ ಪ್ರಾಧ್ಯಾಪಕರಾದ ನೀಲಗಿರಿ ಎಂ.ತಳವಾರ್, ಪ್ರೊ.ಕೃಷ್ಣೇಗೌಡ, ಪ್ರೊ. ನಾಗಣ್ಣ, ವನ್ಯಜೀವಿ ಛಾಯಾಗ್ರಾಹಕ ಕೃಪಾಕರ, ಸೇನಾನಿ, ವಿದ್ವಾಂಸ ಡಾ.ಟಿ.ವಿ.ವೆಂಕಟಚಲಶಾಸ್ತ್ರಿ, ಪ್ರೊ.ಮೊರಬದ ಮಲ್ಲಿಕಾರ್ಜುನ, ಡಾ.ಕೆ.ಸಿ.ಶಿವಪ್ಪ,ನಿವೃತ್ತ ಐಎಎಸ್ ಅಧಿಕಾರಿ ಎಂ.ಕೆ.ಕೆಂಪೇಗೌಡ, ಮಾಜಿ ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್ ಸೇರಿದಂತೆ ಹಲವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

14 ವರ್ಷದೊಳಗಿನ ರಾಷ್ಟ್ರೀಯ ಟೆನ್ನಿಸ್ ಪಂದ್ಯಾವಳಿಯಲ್ಲಿ
ಮೈಸೂರಿನ ಟೆನ್ನಿಸ್ ಪಟು ಪದ್ಮಪ್ರಿಯಾಗೆ ಪ್ರಶಸ್ತಿ

ಮೈಸೂರು,ಮೇ 25(ಎಂಟಿವೈ)– ತೆಲಂಗಾಣದ ಹೈದರಾಬಾದ್‌ನಲ್ಲಿ ನಡೆದ ಎಐಟಿಎ ಟಿಎಸ್‌ಟಿಎ 14 ವರ್ಷದೊಳಗಿನ ರಾಷ್ಟ್ರೀಯ ಟೆನ್ನಿಸ್ ಪಂದ್ಯಾವಳಿಯಲ್ಲಿ ಮೈಸೂರಿನ ಟೆನ್ನಿಸ್ ಪಟು ಪದ್ಮಪ್ರಿಯಾ ರಮೇಶ್ ಕುಮಾರ್ಸ್ ಪ್ರಶಸ್ತಿ ತನ್ನದಾಗಿಸಿಕೊಂಡಿದ್ದಾರೆ.

ಪಂದ್ಯಾವಳಿಯ ಸಿಂಗಲ್ಸ್ ಫೈನಲ್ ಪಂದ್ಯದಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದ್ದ ಮೈಸೂರಿನ ಪದ್ಮಪ್ರಿಯಾ ರಮೇಶ್ ಕುಮಾರ್ ಆಂಧ್ರಪ್ರದೇಶದ ಪರಿಣಿತಾ ವಟ್ಟಪ್ರಂಬಿಲ್ ಅವರನ್ನು 6–1, 6–1 ಸೆಟ್ ಅಂತರದಿಂದ ಸೋಲಿಸಿ, ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು.

ಇದಕ್ಕೂ ಮುನ್ನ ಸೆಮಿಫೈನಲ್ಸ್‌ನಲ್ಲಿ ತೆಲಂಗಾಣದ ಅನಿಹಾ ಗವಿನೋಲ್ಲಾ ಅವರ ವಿರುದ್ಧ 2–6, 6–3, 6–1 ಸೆಟ್ ಅಂತರದಿಂದ ಗೆದ್ದರು. ಕ್ವಾರ್ಟರ್–ಫೈನಲ್‌ನಲ್ಲಿ ಉತ್ತರಾಖಂಡದ ಪೂರ್ವಿ ಪಟ್ವಾ ಅವರನ್ನು 6–2, 6–3 ಸೆಟ್‌ಗಳ ಅಂತರದಿಂದ ಸೋಲಿಸಿದ್ದಾರೆ.

ಮೊದಲ ಸುತ್ತಿನಲ್ಲಿ ಬೈ ಪಡೆದು ಎರಡನೇ ಸುತ್ತಿಗೆ ಪಾದರ್ಪಣೆ ಮಾಡಿ ತೆಲಂಗಾಣದ ಶ್ರೀಕೃತಿ ದುಂಪಾಲ ಹಾಗೂ ಮೂರನೇ ಸುತ್ತಿನಲ್ಲಿ ತೆಲಂಗಾಣದ ಜೋಧ್ವಾವಿ ಅವರನ್ನು ಸೋಲಿಸಿ ಪಂದ್ಯಾವಳಿಯಲ್ಲಿ ಮುನ್ನಡೆದರು.

ಮೈಸೂರಿನ ಎಕ್ಸೆಲ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿನಿಯಾಗಿರುವ ಪದ್ಮಪ್ರಿಯಾ, ಹುಲಿ ಯೋಜನೆಯ ಸಿಎಫ್ ಡಾ.ರಮೇಶ್ ಕುಮಾರ್, ಮೈಸೂರು ವೃತ್ತದ ಸಿಎಫ್ ಡಾ.ಮಾಲತಿ ಪ್ರಿಯಾ ದಂಪತಿ ಪುತ್ರಿ. ಈಕೆಗೆ ರಘುವೀರ್ ಪೊನ್ನುಸ್ವಾಮಿ ಮತ್ತು ಪವನ್ ಟೆನ್ನಿಸ್ ತರಬೇತುದಾರಾಗಿದ್ದರೆ, ಸಾಗರ್ ಫಿಟ್‌ನೆಸ್ ತರಬೇತುದಾರರಾಗಿದ್ದಾರೆ. ಪದ್ಮಪ್ರಿಯಾ ಸಾಧನೆಗೆ ಎಕ್ಸೆಲ್ ಪಬ್ಲಿಕ್ ಶಾಲೆಯ ಪ್ರಾಂಶುಪಾಲರಾದ ಕೆಜಿ. ಮ್ಯಾಥ್ಯೂಸ್ ಹಾಗೂ ಸಿಬ್ಬಂದಿಗಳು ಅಭಿನಂದಿಸಿದ್ದಾರೆ.



ತೆಲಂಗಾಣದಲ್ಲಿ ನಡೆದ ರಾಷ್ಟ್ರೀಯ ಟೆನ್ನಿಸ್ ಪಂದ್ಯಾವಳಿಯಲ್ಲಿ ವಿಜೇತರಾದ ಮೈಸೂರಿನ ಪದ್ಮಾಪ್ರಿಯಾ ರಮೇಶ್ ಕುಮಾರ್ ಪ್ರಶಸ್ತಿ ಸ್ವೀಕರಿಸುತ್ತಿರುವುದು.

ಶೀಘ್ರದಲ್ಲಿಯೇ ತಾಜ್‌ಮಹಲ್‌ಗೆ ಡ್ರೋನ್ ನಿರೋಧಕ ವ್ಯವಸ್ಥೆ

ಆಗ್ರಾ, ಮೇ.25– ಸಂಭಾವ್ಯ ವೈಮಾನಿಕ ದಾಳಿಯನ್ನು ತಡೆಯುವ ನಿಟ್ಟಿನಲ್ಲಿ ದೇಶದ ಪ್ರಮುಖ ಸ್ಮಾರಕ ತಾಜ್‌ಮಹಲ್‌ನಲ್ಲಿ ಡ್ರೋನ್ ನಿರೋಧಕ ವ್ಯವಸ್ಥೆಯನ್ನು ಅಳವಡಿಸಲು ನಿರ್ಧರಿಸಲಾಗಿದೆ ಎಂದು ಹಿರಿಯ ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ. ಕೇಂದ್ರ ಕೈಗಾರಿಕಾ ಭದ್ರತಾ ಪಡೆ ಮತ್ತು ಉತ್ತರ ಪ್ರದೇಶ ಪೊಲೀಸ್ ಇಲಾಖೆ ಪ್ರಸ್ತುತ ತಾಜ್‌ಮಹಲ್‌ನ ಭದ್ರತೆಯನ್ನು ನಿರ್ವಹಿಸುತ್ತಿದೆ. ಶೀಘ್ರದಲ್ಲೇ ಸುಧಾರಿತ ರಕ್ಷಣಾ ವ್ಯವಸ್ಥೆಯನ್ನು ಅಳವಡಿಸುವ ಮೂಲಕ ಭದ್ರತೆಯನ್ನು ಮತ್ತಷ್ಟು ಬಿಗಿಗೊಳಿಸಲಾಗುವುದು ಎಂದು ತಿಳಿಸಿದ್ದಾರೆ.

ನೂತನ ವ್ಯವಸ್ಥೆಯು 7ರಿಂದ 8 ಕಿ.ಮೀ. ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತದೆ. ಆದರೆ, ಪ್ರಾಥಮಿಕ ಹಂತದಲ್ಲಿ ತಾಜ್‌ಮಹಲ್ ಗೊಮ್ಮಟದ 200 ಮೀಟರ್ ವ್ಯಾಪ್ತಿವರೆಗೆ ಭದ್ರತೆ ನೀಡುತ್ತದೆ. ಈ ವ್ಯವಸ್ಥೆಯು ತಾಜ್‌ಮಹಲ್ ಹತ್ತಿರ ಬರುವ ಡ್ರೋನ್‌ಗಳನ್ನು ನಿಷ್ಕ್ರಿಯಗೊಳಿಸುತ್ತದೆ ಮತ್ತು ಅದರ ಸಿಗ್ನಲ್ ಅನ್ನು ಸ್ಥಗಿತಗೊಳಿಸುತ್ತದೆ.

ಅನಿವಾರ್ಯತೆ ಇದ್ದರೆ ಮಾತ್ರ ಮರ ಕಡಿಯಲು ಅನುಮತಿ ನೀಡಬೇಕು

ಅರಣ್ಯಾಧಿಕಾರಿಗಳಿಗೆ ಈಶ್ವರ್ ಖಂಡ್ರೆ ಖಡಕ್ ಸೂಚನೆ



ಮೈಸೂರಿನ ಅಶೋಕಪುರಂನಲ್ಲಿರುವ ಅರಣ್ಯ ಭವನದಲ್ಲಿರುವ ಅತಿಥಿ ಗೃಹದಲ್ಲಿ ಅರಣ್ಯ ಸಚಿವ ಈಶ್ವರ್ ಬಿ.ಖಂಡ್ರೆ ಅರಣ್ಯಾಧಿಕಾರಿಗಳ ಸಭೆ ನಡೆಸಿದರು.

ಮೈಸೂರು, ಮೇ 25(ಎಂಟಿವೈ)– ಅನಿವಾರ್ಯತೆ ಇದ್ದರೆ ಮಾತ್ರ ಮರ ಕಡಿತಕ್ಕೆ ಅನುಮತಿ ನೀಡಬೇಕು ಎಂದು ಅರಣ್ಯ ಸಚಿವ ಈಶ್ವರ್ ಬಿ.ಖಂಡ್ರೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಖಡಕ್ ಸೂಚಿಸಿದ್ದಾರೆ.

ಮೈಸೂರಿನ ಅಶೋಕಪುರಂನಲ್ಲಿರುವ ಅರಣ್ಯ ಭವನದಲ್ಲಿರುವ ಅತಿಥಿ ಗೃಹದಲ್ಲಿ ಭಾನುವಾರ ಮೈಸೂರು ವೃತ್ತದ ಅರಣ್ಯಾಧಿಕಾರಿಗಳು ಮತ್ತು ಪರಿಸರ ಇಲಾಖೆ ಅಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆ ನಡೆಸಿ ಮಾತನಾಡಿದ ಅವರು, ಪರಿಸರಕ್ಕೆ ಪೂರಕವಾಗಿರುವ ಮರಗಳ ಸಂರಕ್ಷಣೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು. ಕಾರಣವಿಲ್ಲದೆ ಮರಗಳ ಕಡಿತಕ್ಕೆ ಅನುಮತಿ ನೀಡಬಾರದು. ತೀರಾ ಅನಿವಾರ್ಯ ಪರಿಸ್ಥಿತಿ ಇದ್ದರೆ ಮಾತ್ರ ರಸ್ತೆ ಬದಿ ಮರ ಕಡಿಯಲು ಅನುಮತಿ ನೀಡಬೇಕು. ಅನಗತ್ಯವಾಗಿ ಮರ ಕಡಿತಲೆಗೆ ಅವಕಾಶ ನೀಡಬಾರದು ಎಂದರು.

ಮೈಸೂರಿನ ಹೈದರಾಲಿ ರಸ್ತೆಯ ವೃಕ್ಷ ಹನನದ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ನಗರದಲ್ಲಿ ರಸ್ತೆ ಬದಿಯಲ್ಲಿ ಬೆಳೆದಿರುವ ವೃಕ್ಷಗಳ ಪೈಕಿ, ಅಪಾಯಕಾರಿಯಲ್ಲದ ಹಲವು ವರ್ಷಗಳ ಬೃಹತ್ ಮರಗಳನ್ನು ಕಡಿಯಲು ಸಕಾರಣವಿಲ್ಲದೆ ಅನುಮತಿಸಬಾರದು. ಮರಗಳ ಸಂರಕ್ಷಣೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಈ ಬಾರಿಯ ವನಮಹೋತ್ಸವದ ವೇಳೆ ಮೈಸೂರು ನಗರದಲ್ಲಿ ಅಧಿಕ ಆಮ್ಲಜನಕ ನೀಡುವ ಆಲ, ಅರಳಿ, ಬೇವು ಇತ್ಯಾದಿ ಸಸಿಗಳನ್ನು ನೆಟ್ಟು ಬೆಳೆಸಲು ನಿರ್ದೇಶನ ನೀಡಿದರು.

ವನ್ಯಜೀವಿ ಅಂಗಾಂಗ ನಾಶಕ್ಕೆ ಸೂಚನೆ: ವನ್ಯಜೀವಿ ಅಂಗಾಗ ಮೋಜು, ಅಲಂಕಾರಕ್ಕೆ ಅಲ್ಲ ಎಂಬ ಸ್ಪಷ್ಟ ಸಂದೇಶ ಸಾರಲು ಮೈಸೂರು ವಿಭಾಗದಲ್ಲಿರುವ ಅಧಿಕೃತವಾಗಿ ಘೋಷಣೆ ಮಾಡಿಕೊಳ್ಳದ ಮತ್ತು ಪ್ರಮಾಣ ಪತ್ರ ಇಲ್ಲದ ಆನೆ ದಂತ, ಹುಲಿ ಉಗುರು ಇತ್ಯಾದಿ ವನ್ಯಜೀವಿ ಅಂಗಾಂಗಗಳನ್ನು ನಾಶಪಡಿಸಲು ಕ್ರಮ ಕೈಗೊಳ್ಳಬೇಕು. ಎಲ್ಲ ವನ್ಯಜೀವಿ ಅಂಗಾಂಗ ನಾಶಕ್ಕೆ ದಿನಾಂಕ ನಿಗದಿ ಮಾಡುವಂತೆಯೂ ಸೂಚಿಸಿದರು.

ಏಕ ಬಳಕೆ ಪ್ಲಾಸ್ಟಿಕ್ 4500 ದಾಳಿ, 21 ಲಕ್ಷ ದಂಡ ವಸೂಲಿ: ಮೈಸೂರಲ್ಲಿ ಏಕ ಬಳಕೆ ಪ್ಲಾಸ್ಟಿಕ್‌ನಿಂದ ತಯಾರಿಸಿದ ಕ್ಯಾರಿ ಬ್ಯಾಗ್, ತಟ್ಟೆ, ಲೋಟ, ಬಾಟಲಿ, ಚಮಚ ಇತ್ಯಾದಿಗಳ ದಾಸ್ತಾನು, ಮಾರಾಟ, ಸಾಗಾಟಕ್ಕೆ ಕಡಿವಾಣ ಹಾಕಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಮೈಸೂರಿನಲ್ಲಿ ಇದುವರೆಗೆ 4500 ದಾಳಿ ಪ್ರಕರಣದಿಂದ ಮಾಡಿ 21 ಲಕ್ಷ ದಂಡ ಹಾಕಲಾಗಿದೆ ಎಂದು ಅಧಿಕಾರಿಗಳು ತಿಳಿಸಿದಾಗ, ಸ್ಥಳೀಯ ಸಂಸ್ಥೆ ಮತ್ತು ಪೊಲೀಸ್ ಅಧಿಕಾರಿಗಳ ನೆರವು ಪಡೆದು, ಏಕ ಬಳಕೆ ಪ್ಲಾಸ್ಟಿಕ್ ಉತ್ಪನ್ನ ಮಾರಾಟ, ಸಾಗಾಟ ಮತ್ತು ದಾಸ್ತಾನು ನಿಯಂತ್ರಿಸಲು ಸೂಚಿಸಿದರು.

ಕುಡಿಯುವ ನೀರಿನ ಗುಣಮಟ್ಟದ ಬಗ್ಗೆ ಕಾಲ ಕಾಲಕ್ಕೆ ಪರೀಕ್ಷೆ ನಡೆಸಬೇಕು. ಕಲುಷಿತ ನೀರು ಸೇವಿಸಿ, ಜನ ಜಾನುವಾರು ಸಾವಿಗೆ ಈಡಾಗದಂತೆ ಎಚ್ಚರ ವಹಿಸಬೇಕು. ಎಸ್‌ಟಿಪಿಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿವೆಯೇ ಎಂಬ ಬಗ್ಗೆ ಪರಿಶೀಲನೆ ನಡೆಸಬೇಕು ಎಂದು ಸೂಚಿಸಿದರು.

ಮಾನವ–ವನ್ಯಜೀವಿ ಸಂಘರ್ಷಕ್ಕೆ ಪರಿಹಾರ: ಈ ಭಾಗದಲ್ಲಿ ಮಾನವ– ಆನೆ ಮತ್ತು ಮಾನವ–ವನ್ಯಜೀವಿಗಳ ಸಂಘರ್ಷ ಹೆಚ್ಚುತ್ತಿದ್ದು, ಆನೆಗಳು ನಾಡಿಗೆ ಬಾರದಂತೆ ತಡೆಯಲು 8 ಕಿ.ಮೀ. ರೈಲ್ವೆ ಬ್ಯಾರಿಕೇಡ್ ಅಳವಡಿಸಿಲು ಹೆಚ್ಚುವರಿಯಾಗಿ 12 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದ್ದು, ಇದಕ್ಕೆ ಚೈನ್ ಲಿಂಕ್ ಫೆನ್ಸ್ ಅಳವಡಿಸಲು ಕ್ರಮ ಕೈಗೊಳ್ಳಲಾಗವುದು ಎಂದು ಭರವಸೆ ನೀಡಿದರು.

ಸಭೆಯಲ್ಲಿ ಮೈಸೂರು ವೃತ್ತದ ಸಿಎಫ್ ಡಾ.ಮಾಲತಿ ಪ್ರಿಯಾ, ಹುಲಿ ಯೋಜನೆಯ ಸಿಎಫ್ ಡಾ.ಪಿ.ರಮೇಶ್ ಕುಮಾರ್, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಡಾ.ಪ್ರಭಾಕರ್, ಹುಣಸೂರು ಡಿಸಿಎಫ್ ಫಯಾಜುದ್ದೀನ್, ವರ್ಕಿಂಗ್ ಪ್ಲಾನ್ ಡಿಸಿಎಫ್ ಲಿಂಗರಾಜು ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಅಮಾಯಕರನ್ನು ಕೊಂದು, ಸಮರ್ಥನೆಗೆ ಧರ್ಮ ಬಳಸ್ತಾರೆ: ಅಸಾದುದ್ದೀನ್ ಓವೈಸಿ



ಬಹ್ರೇನ್, ಮೇ.25– ಭಯೋತ್ಪಾದಕ ಗುಂಪುಗಳು ಅಮಾನಯಕ ಜನರನ್ನು ಕೊಂದು, ಅದನ್ನು ಸಮರ್ಥಿಸಿಕೊಳ್ಳಲು ಧರ್ಮವನ್ನು ತಪ್ಪಾಗಿ ಬಳಸಿಕೊಳ್ಳುತ್ತಿವೆ ಎಂದು ಪಾಕಿಸ್ತಾನದ ವಿರುದ್ಧ ಎಐಎಂಐಎಂ ಸಂಸದ ಅಸಾದುದ್ದೀನ್ ಓವೈಸಿ ಗುಡುಗಿದ್ದಾರೆ.

ಪಾಕ್ ಪ್ರೇರಿತ ಭಯೋತ್ಪಾದನೆಯನ್ನು ವಿವರಿಸಲು ಬಹ್ರೇನ್‌ಗೆ ತೆರಳಿರುವ ಬಿಜೆಪಿ ಸಂಸದ ಬೈಜಯಂತ್ ಪಾಂಡಾ ನೇತೃತ್ವದ ಸರ್ವಪಕ್ಷ ನಿಯೋಗದಲ್ಲಿರುವ ಅಸಾದುದ್ದೀನ್ ಓವೈಸಿ, ಇಸ್ಲಾಂ ಧರ್ಮ ಭಯೋತ್ಪಾದನೆಯನ್ನು ಖಂಡಿಸುತ್ತದೆ ಮತ್ತು ಒಬ್ಬ ಅಮಾಯಕನ್ನು ಕೊಂದರೆ ಇಡೀ ಮಾನವೀಯತೆಯನ್ನು ಕೊಂದಂತೆ ಎಂದು ಕುರಾನ್ ಸ್ಪಷ್ಟವಾಗಿ ಹೇಳುತ್ತದೆ ಎಂದು ಹೇಳಿದರು.

ಬಹ್ರೇನ್‌ನಲ್ಲಿ ಗಣ್ಯ ವ್ಯಕ್ತಿಗಳೊಂದಿಗೆ ಸಂವಾದ ನಡೆಸಿದ ಓವೈಸಿ, ಈ ಭಯೋತ್ಪಾದಕ ಸಂಘಟನೆಗಳು ಭಾರತದಲ್ಲಿನ ಅಮಾಯಕರ ಹತ್ಯೆಗಳನ್ನು ಸಮರ್ಥಿಸಿಕೊಳ್ಳುತ್ತಿವೆ. ಅವರು ಸಂದರ್ಭಾನುಸಾರವಾಗಿ ಕುರಾನ್ ಶ್ಲೋಕಗಳನ್ನು ಉಲ್ಲೇಖಿಸಿದ್ದು, ಜನರ ಹತ್ಯೆಯನ್ನು ಸಮರ್ಥಿಸಲು ಧರ್ಮವನ್ನು ಬಳಸಿದ್ದಾರೆ. ನಾವು ಅದನ್ನು ಕೊನೆಗೊಳಿಸಬೇಕಾಗಿದೆ ಎಂದರು.

ಇಸ್ಲಾಂ ಧರ್ಮ ಭಯೋತ್ಪಾದನೆಯನ್ನು ಖಂಡಿಸುತ್ತದೆ. ಒಬ್ಬ ಅಮಾಯಕನನ್ನು ಕೊಲ್ಲುವುದು ಇಡೀ ಮಾನವಕುಲವನ್ನು ಕೊಂದಂತೆ ಎಂದು ಖುರಾನ್ ಸ್ಪಷ್ಟವಾಗಿ ಹೇಳಿದೆ ಎಂದು ಅವರು ತಿಳಿಸಿದರು.

ಇದೇ ಸಂವಾದದಲ್ಲಿ ಮಾತನಾಡಿದ ಬಿಜೆಪಿ ಸಂಸದ ಎಸ್ ಫಾಂಗ್ನಾನ್ ಕೊನ್ಯಾಕ್, ವಿಭಜನೆಯ ನಂತರ ಪಾಕಿಸ್ತಾನವು ಭಾರತದ ವಿರುದ್ಧ ತನ್ನ ಭಯೋತ್ಪಾದಕ ಚಟುವಟಿಕೆಗಳನ್ನು ಮುಂದುವರೆಸಿದೆ ಮತ್ತು ಇದಕ್ಕೆ ಹೊಣೆ ಹೊರುವಂತೆ ಪಾಕಿಸ್ತಾನಕ್ಕೆ ಸೂಚಿಸುವಂತೆ ಬಹ್ರೇನ್ ರಾಷ್ಟ್ರವನ್ನು ಒತ್ತಾಯಿಸಿದರು.







